4 December 2025 Thursday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಹಬ್ಬ ,ಹರಿದಿನಗಳು
ನಮ್ಮನ್ನು ಶಿಸ್ತಿನಲ್ಲಿ ಬಂಧಿಸಿಡುತ್ತವೆ! ಏಕೆಂದರೆ
ಆ ದಿನ ನಾವು ಸಮಯಕ್ಕೆ ತಕ್ಕ ಹಾಗೆ
ಪರಿಪೂರ್ಣತೆಯಿಂದ ಕೆಲಸಗಳನ್ನು
ಮಾಡಿಕೊಳ್ಳುತ್ತೇವೆ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಗೆದ್ದಾಗ ಎಲ್ಲರೂ
*ಜೊತೆಗಾರರೇ
ಆದರೆ *ಸೋತಾಗ
ಎಲ್ಲರೂ
*ದೂರುವವರೇ...."
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 46 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3


## ಪಾಪ, ಡಿಕೆಶಿ ಹೋಗಲಿ ಬಿಡಿ!

**ನನಗೆ ಆಹ್ವಾನ ಬಂದರಷ್ಟೇ ದೆಹಲಿಗೆ ಹೋಗುವೆ: ಸಿಎಂ**

**ಮಂಗಳೂರು:** ಪಾಪ! ಡಿ.ಕೆ.ಶಿವಕುಮಾರ್ ದೆಹಲಿಗೆ ಹೋದರೆ ಹೋಗಲಿ ಬಿಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯವಾಗಿ ಪ್ರತಿಕ್ರಿಯೆ ನೀಡಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಬುಧವಾರ ನವದೆಹಲಿಗೆ ತೆರಳಿದ ಬಗ್ಗೆ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಹೈಕಮಾಂಡ್ ಆಹ್ವಾನ ನೀಡದ ಹೊರತು ನಾನು ನವದೆಹಲಿಗೆ ಪ್ರಯಾಣಿಸುವುದಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

ಶಿವಕುಮಾರ್ ದೆಹಲಿಗೆ ಹೋಗುತ್ತಿದ್ದಾರೆ ಎಂದು ವರದಿಗಾರರು ಗಮನಸೆಳೆದಾಗ, ಅವರನ್ನು ಹೋಗಲು ಬಿಡಿ. ಯಾರಾದರೂ ಅವರಿಗೆ ಬೇಡ ಎಂದು ಹೇಳಿದ್ದಾರೆಯೇ?. ನೀವು ಹೋಗುವಿರಾ ಎಂದು ಕೇಳಿದಾಗ, ನನಗೆ ಆಹ್ವಾನ ಬಂದಾಗ ಮಾತ್ರ ಹೋಗುತ್ತೇನೆ. ನನಗೆ ಆಹ್ವಾನ ಬಂದಿಲ್ಲ ಎಂದರು.



ದೆಹಲಿಯಲ್ಲಿ ಸಭೆ ನಡೆಸಲು ಪಕ್ಷದ ಹೈಕಮಾಂಡ್‌ನಿಂದ ಯಾವುದೇ ನಿರ್ದೇಶನವಿದ್ದರೆ ಅದನ್ನು ವೇಣುಗೋಪಾಲ್ ಮೂಲಕ ತಿಳಿಸಲಾಗುವುದು ಎಂದು ಅವರು ಹೇಳಿದರು.

ಅತ್ತ ಉಪಮುಖ್ಯಮಂತ್ರಿ ದೆಹಲಿಗೆ ತೆರಳಿದರೆ, ಸಿದ್ದರಾಮಯ್ಯ ಅವರು ಸಮಾಜ ಸುಧಾರಕ ಶ್ರೀ ನಾರಾಯಣ ಗುರುಗಳು ಮಹಾತ್ಮ ಗಾಂಧಿಯವರೊಂದಿಗೆ ಭೇಟಿಯಾದ ಶತಮಾನೋತ್ಸವದ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಂಗಳೂರಿಗೆ ತಲುಪಿದ್ದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಇದ್ದರು. ನಂತರ ಸಿಎಂ ಅವರೊಂದಿಗೆ ಭೋಜನ ಸಭೆ ನಡೆಸಿದರು.

ಕಾವೇರಿ ಅತಿಥಿ ಗೃಹಕ್ಕೆ ತೆರಳುವ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿಯೊಂದಿಗೆ ರಾಜಕೀಯದ ಬಗ್ಗೆ ಚರ್ಚೆ ನಡೆಸಿಲ್ಲ ಎಂದು ತಿಳಿಸಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಹರಡಿರುವ ಊಹಾಪೋಹಗಳಿಗೆ ತೆರೆ ಎಳೆಯಲು, ಬೆಂಗಳೂರಿನಲ್ಲಿರುವ ತಮ್ಮ ನಿವಾಸಗಳಲ್ಲಿ ಪರಸ್ಪರ ಉಪಹಾರ ಕೂಟ ಆಯೋಜಿಸುವ ಮೂಲಕ ಇಬ್ಬರೂ ನಾಯಕರು ಒಗ್ಗಟ್ಟು ಪ್ರದರ್ಶಿಸಿದರು.

# ಮತ್ತೆ ಬಣ ರಾಜಕೀಯ ಸ್ಫೋಟ

**ಕೆ.ಸಿ.ವೇಣುಗೋಪಾಲ್, ಸಿದ್ದು ಸಮ್ಮುಖದಲ್ಲಿಯೇ 'ಡಿಕೆಶಿ ಮುಂದಿನ ಸಿಎಂ 'ಘೋಷಣೆ'**

**ಮಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆ ಒಪ್ಪಂದದ ಅಸಮಾಧಾನ ಮತ್ತೆ ಸ್ಫೋಟಗೊಂಡಿದೆ. ಬಣ ರಾಜಕೀಯ ಇನ್ನೂ ಶಮನಗೊಂಡಿಲ್ಲ.

ಮಂಗಳೂರು ವಿಮಾನ ನಿಲ್ದಾಣದಲ್ಲಿ ಬುಧವಾರ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಕಾಂಗ್ರೆಸ್ ಮುಖಂಡರು



ಡಿ.ಕೆ.ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಎಂದು ಘೋಷಣೆ ಕೂಗುವ ಮೂಲಕ ಸ್ವಾಗತಿಸಿದರು. ಈ ಮೂಲಕ ಬ್ರೇಕ್ ಫಾಸ್ಟ್ ಸಭೆಗಳ ನಂತರವೂ ಎರಡು ಬಣಗಳ ಅಸಮಾಧಾನ ಮತ್ತೊಮ್ಮೆ ಬಹಿರಂಗಗೊಂಡಿದೆ.

ಮಂಗಳೂರು ವಿಶ್ವವಿದ್ಯಾಲಯ ಆಯೋಜಿಸಿದ್ದ ನಾರಾಯಣ ಗುರು ಶತಮಾನೋತ್ಸವ ಸ್ಮರಣಾರ್ಥ ಕಾರ್ಯಕ್ರಮಕ್ಕೆ ವೇಣುಗೋಪಾಲ್ ಮಂಗಳೂರಿಗೆ ಆಗಮಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಮತ್ತು ಹಿರಿಯ ಕಾಂಗ್ರೆಸ್ ನಾಯಕರು ಭಾಗವಹಿಸಿದ್ದರು. ಆದರೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಕಾರ್ಯಕ್ರಮಕ್ಕೆ ಆಹ್ವಾನ ಇರಲಿಲ್ಲ.

ವೇಣುಗೋಪಾಲ್ ಆಗಮಿಸುತ್ತಿದ್ದಂತೆ ಪಕ್ಷದ ಕಾರ್ಯಕರ್ತರ ಗುಂಪೊಂದು ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುವಂತೆ ಬೆಂಬಲ ವ್ಯಕ್ತಪಡಿಸಿ ಘೋಷಣೆಗಳನ್ನು ಕೂಗಿತು. ಆನಂತರ ಸಿದ್ದರಾಮಯ್ಯ ಆಗಮಿಸಿದಾಗ ಅವರ ಬೆಂಬಲಿಗರು 'ಸಿದ್ದು, ಸಿದ್ದು, ಪೂರ್ಣಾವಧಿ ಸಿದ್ದು' (ಪೂರ್ಣಾವಧಿ ಸಿಎಂ ಸಿದ್ದರಾಮಯ್ಯ) ಎಂಬ ಘೋಷಣೆಗಳೊಂದಿಗೆ ಪ್ರತಿ ಘೋಷಣೆ ಕೂಗಿದರು.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್ ಪರ ಗುಂಪಿನ ನಾಯಕ ಮಿಥುನ್ ರೈ, ಪಕ್ಷದೊಳಗೆ ನಾಯಕರ ಮಧ್ಯೆ ಯಾವುದೇ ಪೈಪೋಟಿ ಇಲ್ಲ. ಆದರೆ ಅನೇಕ ಕಾರ್ಯಕರ್ತರು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವುದನ್ನು ನೋಡಲು

ಪುಟ 2ಕ್ಕೆ

### ಸಿದ್ದು ಭೇಟಿ ತಪ್ಪೇನು: ಡಿ.ಕೆ.ಶಿವಕುಮಾರ್

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ, ವೇಣುಗೋಪಾಲ್ ಅಥವಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡುವುದರಲ್ಲಿ ತಪ್ಪೇನಿದೆ? ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ದೆಹಲಿಗೆ ಹೊರಡುವ ಮೊದಲು ಮಾಧ್ಯಮಗಳ ಜೊತೆ ಮಾತನಾಡಿ, ವೇಣುಗೋಪಾಲ್ ಅವರನ್ನು ಸಿದ್ದರಾಮಯ್ಯ ಭೇಟಿಯಾದ ಬಗ್ಗೆ ಪ್ರತಿಕ್ರಿಯೆ ನೀಡಿದರು. ಮದುವೆಯೊಂದರಲ್ಲಿ ಭಾಗವಹಿಸಲು ದೆಹಲಿಗೆ ಪ್ರಯಾಣಿಸುತ್ತಿರುವುದಾಗಿ ಹೇಳಿದರು.

ವೇಣುಗೋಪಾಲ್ ಆಗಮನದ ನಂತರ ಮಂಗಳೂರು ವಿಮಾನ ನಿಲ್ದಾಣದಲ್ಲಿ ಬೆಂಬಲಿಗರು ಘೋಷಣೆ ಕೂಗಿದ್ದರ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಇದರಲ್ಲಿ ಏನು ತಪ್ಪಿದೆ? ಕಳೆದ ಹತ್ತು ವರ್ಷಗಳಿಂದ ಜನರು ಡಿಕೆ ಡಿಕೆ



ಎಂದು ಘೋಷಣೆಗಳನ್ನು ಕೂಗುತ್ತಿದ್ದಾರೆ. ಇದರಲ್ಲಿ ಹೊಸದೇನೂ ಇಲ್ಲ. ಕೆಲವರು ಮೋದಿ ಮೋದಿ ಎಂದು ಕೂಗುತ್ತಾರೆ ಮತ್ತು ಇನ್ನೂ ಕೆಲವರು ಡಿಕೆ ಡಿಕೆ ಎಂದು ಹೇಳುತ್ತಾರೆ. ರಾಹುಲ್ ರಾಹುಲ್' ಎಂದು ಮತ್ತು ಇನ್ನು ಕೆಲವರು ಸಿದ್ದು ಸಿದ್ದು' ಎಂದು ಕೂಗುವ ಜನರಿದ್ದಾರೆ. ಅದರಲ್ಲಿ ಯಾವುದೇ ತಪ್ಪಿಲ್ಲ. ನಾವು ಅದನ್ನು ಕ್ರೀಡಾ ಮನೋಭಾವದಿಂದ ತೆಗೆದುಕೊಳ್ಳಬೇಕು ಎಂದು ಹೇಳಿದರು.

### ಅಹಿಂದ ನಾಯಕರ ಸಾಥ್

**ಮಂಗಳೂರಿಗೆ ತೆರಳಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಜಿ.ಪರಮೇಶ್ವರ್, ಹರಿಪ್ರಸಾದ್ ಸೇರಿದಂತೆ ಅಹಿಂದ ನಾಯಕರು ಸಾಥ್ ನೀಡಿದ್ದಾರೆ. ಮಂಗಳೂರಿನ ಉಳ್ಳಾಲದಲ್ಲಿ ಕಾಂಗ್ರೆಸ್ ನಾಯಕ ಬಿ. ಕೆ.ಹರಿಪ್ರಸಾದ್ ನೇತೃತ್ವದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಹಿಂದ ಸಚಿವರು ಸಾಥ್ ನೀಡಿದರು.**

ಪುಟ 2ಕ್ಕೆ

### ಜಿಲ್ಲೆಯಲ್ಲಿ 22 ಹುಲಿಗಳ ಸೆರೆ



**ಮೈಸೂರು:** ಜಿಲ್ಲೆಯಲ್ಲಿ ಕಾಡಿನಿಂದ ನಾಡಿಗೆ ಬಂದಿದ್ದ 22 ಹುಲಿಗಳನ್ನು ಕಳೆದ 42 ದಿನಗಳ ಅವಧಿಯಲ್ಲಿ ಸೆರೆ ಹಿಡಿಯಲಾಗಿದೆ. ಇವುಗಳಲ್ಲಿ 12 ಮರಿ ಹುಲಿ, 7 ಗಂಡು ಹುಲಿ ಮತ್ತು ಮೂರು ಹೆಣ್ಣು ಹುಲಿಗಳು ಸೇರಿವೆ.

ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ, ಸರಗೂರು, ನಂಜನಗೂಡು ಮತ್ತು ಹುಣಸೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಈ ಹುಲಿಗಳು ಉಪಟಳ ನೀಡುತ್ತಿದ್ದವು. ಸೆರೆ ಹಿಡಿದಿರುವ ಹುಲಿಗಳನ್ನು ಪುನರ್ವಸತಿ ಕೇಂದ್ರದಲ್ಲಿ ಬಿಡಲಾಗಿದೆ. ವೈದ್ಯರ ಸಲಹೆಯನ್ನು ಆಧರಿಸಿ ಹುಲಿಗಳನ್ನು ಕಾಡಿಗೆ ಮರಳಿ ಬಿಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಡಿಸಿಎಫ್ ಪರಮೇಶ್ ತಿಳಿಸಿದ್ದಾರೆ.

ರೈತರು ಆತಂಕ ಪಡುವ ಅಗತ್ಯವಿಲ್ಲ. ರೈತರ ಜೊತೆ ನಾವು ಕೈಜೋಡಿಸಿ ಕೆಲಸ ಮಾಡುತ್ತೇವೆ. ಹುಲಿಯನ್ನು ಹಿಡಿಯಲು ಇಲಾಖೆಯಲ್ಲಿ ಎಲ್ಲಾ ರೀತಿಯ ಸಲಕರಣೆಗಳಿವೆ. ಮುಖ್ಯವಾಗಿ ಡ್ರೋನ್ ಗಳಿವೆ. ಹುಲಿಕಟ್ಟೆ, ಹುಲಿಯೂರು, ಹುಲಿದುರ್ಗ ಹೆಸರುಗಳಿವೆ. ಹುಲಿಗಳು ಹಿಂದೆ ಇಲ್ಲಿ ಕಾಣಿಸಿದ್ದಕ್ಕೆ ಈ ಹೆಸರುಗಳು ಬಂದಿವೆ. ಹಿಂದೆಯೂ ಹುಲಿಗಳು ಬರುತ್ತಿದ್ದವು, ಈಗಲೂ ಬರುತ್ತಿವೆ. ಹುಲಿಗಳು ಕಂಡು ಬಂದರೆ ಸಹಾಯವಾಣಿಗೆ ಕರೆ ಮಾಡುವಂತೆ ತಿಳಿಸಿದರು.

### ಭಿನ್ನಾಭಿಪ್ರಾಯ ಪರಿಹಾರ: ಜಿ.ಪರಮೇಶ್ವರ್ ಪ್ರತಿಕ್ರಿಯೆ

**ಬೆಂಗಳೂರು:** ಪಕ್ಷದೊಳಗಿನ ಸಮಸ್ಯೆಗಳನ್ನು ಪರಿಹರಿಸಲಾಗಿದೆ. ರಾಜಕೀಯ ಭಿನ್ನಾಭಿಪ್ರಾಯಗಳ ಕುರಿತು ಹೆಚ್ಚಿನ ಪ್ರತಿಕ್ರಿಯೆ ನೀಡಲು ಬಯಸುವುದಿಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಹೇಳಿದರು.



ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಪರಮೇಶ್ವರ, ನಾನು ಅನಗತ್ಯವಾಗಿ ಪ್ರತಿಕ್ರಿಯಿಸಲು ಬಯಸುವುದಿಲ್ಲ. ಈಗ ಎಲ್ಲವೂ ಮುಗಿದಿದೆ. ಯಾವುದೇ ಸಣ್ಣ ವ್ಯತ್ಯಾಸವಿದ್ದರೂ, ಸಮಸ್ಯೆ ಇದ್ದರೂ, ಅದನ್ನು ಪರಿಹರಿಸಲಾಗಿದೆ ಎಂದು ಹೇಳಿದರು.

ರಾಜಕೀಯ ಶಾಶ್ವತವಲ್ಲ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಅದು ಎಲ್ಲರಿಗೂ ಈಗಾಗಲೇ ತಿಳಿದಿರುವ ವಿಷಯ ಎಂದರು. ಭಿನ್ನಮತ ಬಗೆಹರಿದಿರುವ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ನೀವು ಅದರ ಬಗ್ಗೆ ಅವರನ್ನೇ ಕೇಳಬೇಕು. ಒಳಗೆ ಏನು ಚರ್ಚಿಸಲಾಗಿದೆ ಎಂಬುದು ನಮಗೆ ತಿಳಿದಿಲ್ಲ. ಎಲ್ಲವನ್ನೂ ಸ್ಪಷ್ಟಪಡಿಸಲಾಗಿದೆ ಎಂದು ನಾನು ಭಾವಿಸುತ್ತೇನೆ ಎಂದು ಹೇಳಿದರು.

ಮಂಗಳೂರಿನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು ನನ್ನನ್ನು ಆಹ್ವಾನಿಸಿದ್ದಾರೆ ಮತ್ತು ನಾವು ಅಲ್ಲಿ ಭಾಗವಹಿಸಲು ಹೋಗುತ್ತಿದ್ದೇವೆ ಎಂದು ಹೇಳಿದರು.

## ನವೆಂಬರ್ 'ಕ್ರಾಂತಿಗೆ ಕೋಳಿ ಬಲಿ'

**ಬ್ರೇಕ್‌ಫಾಸ್ಟ್ ಮೀಟಿಂಗ್ ಬೀಗತನ | ಕೆ.ಎನ್.ರಾಜಣ್ಣ ಲೇವಡಿ**

**ತುಮಕೂರು:** ಬ್ರೇಕ್‌ಫಾಸ್ಟ್ ಮೀಟಿಂಗ್ ಬೀಗತನ ಮಾಡಿದಂತೆ ಎಂದು ಮಾಜಿ ಸಚಿವ ಕೆ.ಎನ್ ರಾಜಣ್ಣ ಸ್ವಪಕ್ಷೀಯರ ವಿರುದ್ಧವೇ ಲೇವಡಿ ಮಾಡಿದ್ದಾರೆ.

ಸಿಎಂ–ಡಿಸಿಎಂ ನಡೆಸಿದ್ದ ಬ್ರೇಕ್‌ಫಾಸ್ಟ್ ಮೀಟಿಂಗ್ ವಿಚಾರವಾಗಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹಳ್ಳಿಗಳಲ್ಲಿ ಶಾಂತಿ ಆಗಬೇಕು ಅಂದರೆ ಕುರಿ, ಕೋಳಿ ಬಲಿ ಕೊಡುತ್ತಾರೆ. ಆ ರೀತಿಯಾಗಿ ಎರಡೂ ಮನೆಯಲ್ಲಿ ಆಗಿದೆ. ನವೆಂಬರ್ ಕ್ರಾಂತಿಗೆ ಕೋಳಿ ಬಲಿ ಕೊಡಲಾಗಿದೆ. ಸದ್ಯಕ್ಕೆ ಯಾವುದೇ ಬದಲಾವಣೆ ಇಲ್ಲ ಅಂತ ನಾವು ಅಂದುಕೊಂಡಿದ್ದೇವೆ. ಬದಲಾವಣೆ ಇದ್ದರೆ ಹೈಕಮಾಂಡ್ ಹೇಳುತ್ತಾರೆ. ಸಚಿವ ಸಂಪುಟ ವಿಸ್ತರಣೆ ಬೆಳಗಾವಿ ಅಧಿವೇಶನದ ನಂತರ ಆಗುತ್ತದೆ ಎಂದು ಹೇಳಿದರು.



ಮೊದಲು ಒಂದು ಕಡೆಯವರು ಹೆಣ್ಣು ನೋಡಲು ಬರುತ್ತಾರೆ. ಆಮೇಲೆ ಗಂಡು ನೋಡೋಕೆ ಬರುತ್ತಾರೆ. ಈ ಬ್ರೇಕ್‌ಫಾಸ್ಟ್ ಮೀಟಿಂಗ್ ಆ ರೀತಿ ಇದೆ. ಇರೋದು ಏನಿದಿಯೋ ಅದೇ ಮುಂದುವರಿದುಕೊಂಡು ಹೋಗುತ್ತದೆ. ಯಾವುದೇ ರಿವರ್ಸ್ ಆಗಲ್ಲ ಎಂದು ಹೇಳಿದರು.

ದಲಿತ ಸಿಎಂ ಪರಮೇಶ್ವರ್ ಆಗಬೇಕೇಂಬ ಒತ್ತಾಯ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಅವರನ್ನು ಪದಚ್ಯುತಿ ಮಾಡಿದರೆ ದಲಿತ ಸಿಎಂ ಪರಮೇಶ್ವರ್ ಆಗಬೇಕು. ದೆಹಲಿಗೆ ಹೋಗಿ ಬಂದ ಶಾಸಕರ ಪ್ರಯತ್ನವೂ ಸಫಲವೂ ಆಗಿಲ್ಲ ವಿಫಲವೂ ಆಗಿಲ್ಲ ಎಂದರು.

ಬಿಜೆಪಿ ಸಚಿವರನ್ನ ರಾಜಣ್ಣ ಪುತ್ರ ರಾಜೇಂದ್ರ ಭೇಟಿ ವಿಚಾರವಾಗಿ ಮಾತನಾಡಿದ ಅವರು, ಕ್ರಿಬ್ಕೋದಲ್ಲಿ ರಾಜೇಂದ್ರ ಸೀನಿಯರ್ ನಿರ್ದೇಶಕ ಇದ್ದಾನೆ. ಕ್ರಿಬ್ಕೋ ಇಸ್ಕೋದಲ್ಲಿ ಆರ್ಟಿಫಿಶಿಯಲ್ ಮೆನ್ಯೂರ್ ಮಾಡಬೇಕಾಗಿದೆ. ಆ ಎರಡೂ ಸಮಿತಿಗಳು ಏಷ್ಯಾ ಖಂಡದಲ್ಲಿ ದೊಡ್ಡ ಸಹಕಾರಿ ಸಂಸ್ಥೆಗಳು. ಇದೆಲ್ಲವೂ ಕೇಂದ್ರ ಸಹಕಾರ

## ಯಾವತ್ತಿದ್ದರೂ ಅಧಿಕಾರ ಬಿಡಬೇಕು!

**ಸಿಎಂ ಹೇಳಿಕೆಗೆ ಸಚಿವ ಸತೀಶ್ ಜಾರಕಿಹೊಳಿ ಸಮರ್ಥನೆ**

**ಬೆಂಗಳೂರು:** ಯಾರಿಗೂ ಅಧಿಕಾರ ಶಾಶ್ವತವಲ್ಲ. ಅಂದರೆ, ಅಧಿಕಾರ ತ್ಯಾಗಕ್ಕೆ ಸಿದ್ದರಾಮಯ್ಯ ಮಾನಸಿಕವಾಗಿ ಸಿದ್ಧರಾಗಿದ್ದಾರೆ ಎಂದಲ್ಲ. ಆದರೆ ಮೂವತ್ತು ತಿಂಗಳ ನಂತರವಾದರೂ ಬಿಡಬಹುದು ಅಥವಾ ಅದಕ್ಕೂ ಮೊದಲೇ ಬಿಡಬಹುದು. ಬಿಡುವುದಂತೂ ಪಕ್ಕಾ. ಯಾವತ್ತಿದ್ದರೂ ಬಿಡಲೇಬೇಕು ಎಂದು ಎಂದು ಸಚಿವ ಸತೀಶ್ ಜಾರಕಿಹೊಳಿ ಸಿಎಂ ಮಾತನ್ನು ಸಮರ್ಥಿಸಿಕೊಂಡಿದ್ದಾರೆ.

ಅಧಿಕಾರ ತ್ಯಾಗದ ಕುರಿತು ಸಿದ್ದರಾಮಯ್ಯ ಆಡಿದ್ದ ಮಾತು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಹಿನ್ನೆಲೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನದ ಬಗ್ಗೆ ಎಲ್ಲಾ ನಿರ್ಧಾರವನ್ನು ಹೈಕಮಾಂಡ್ ತೆಗೆದುಕೊಳ್ಳಲಿದೆ. ಯಾವ ರೀತಿಯಲ್ಲಿ ಹೈಕಮಾಂಡ್ ಬಗೆಹರಿಸುತ್ತದೆ ಎಂದು ನೋಡೋಣ. ಪಕ್ಷದಲ್ಲಿ ಒಳ್ಳೆಯ ವಾತಾವರಣ ಇರಬೇಕು ಎಂದು ಕಾರ್ಯಕರ್ತರು ಬಯಸುತ್ತಾರೆ ಎಂದರು.

ಇದೇ ವೇಳೆ ದಲಿತ ಸಿಎಂ ವಿಚಾರ ತಳ್ಳಿಹಾಕಿದ



ಸಚಿವರು, ಈ ಅವಧಿಯಲ್ಲಿ ದಲಿತ ಸಿಎಂ ಬಗ್ಗೆ ಯಾವುದೇ ಚರ್ಚೆ ಇಲ್ಲ. ಪರಮೇಶ್ವರ್ ಸೀನಿಯರ್ ಇದ್ದಾರೆ. ಸಿಎಂ ಬಗ್ಗೆ ಎಲ್ಲ ಮುಗಿದಿದೆ. ಈಗ ಮತ್ತೆ ಶುರು ಮಾಡುವುದು ಬೇಡ. ಪದೇ ಪದೇ ಆ ವಿಚಾರ ಮಾತನಾಡುವುದು ಬೇಡ ಎಂದರು.

### ವಿಶ್ಲೇಷಣೆ ಅನಗತ್ಯ: ಡಿಕೆಸು

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾರೊಂದಿಗೋ ಮಾತನಾಡುವಾಗ ಆಡಿರುವ ಮಾತುಗಳಿಗೆ ಹೆಚ್ಚಿನ ಮಹತ್ವ



ನೀಡುವ ಅಗತ್ಯವಿಲ್ಲ. ಆ ಬಗ್ಗೆ ಹೆಚ್ಚಿನ ವಿಶ್ಲೇಷಣೆ ಅನಗತ್ಯ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ತಿಳಿಸಿದರು.

ಮಾಧ್ಯಮಗಳ ಪ್ರಶ್ನೆಗಳಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, ರಾಜಕೀಯ ಯಾರಿಗೂ ಶಾಶ್ವತವಲ್ಲ ಎಂಬ ಸಿಎಂ ಹೇಳಿಕೆ ವಿಚಾರವಾಗಿ ಕೇಳಿದಾಗ ಅವರು ಈ ರೀತಿ ಪ್ರತಿಕ್ರಿಯೆ ನೀಡಿದರು. ಮಂಗಳೂರಿನಲ್ಲಿ ಕಾರ್ಯಕ್ರಮಕ್ಕೆ ವೇಣುಗೋಪಾಲ್ ಆಗಮಿಸಿದ್ದಾರೆ. ಕಾರ್ಯಕ್ರಮ ಮುಗಿದ ನಂತರ ಕೇರಳದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಇರುವ ಕಾರಣ ಅಲ್ಲಿಗೆ ತೆರಳಲಿದ್ದಾರೆ ಎಂದು ತಿಳಿಸಿದರು.

### ನಟ ದರ್ಶನ್‌ಗೆ ಸೇರಿದ್ದ 82 ಲಕ್ಷ ರೂ. ಐಟಿ ವಶಕ್ಕೆ ನೀಡಿದ ಕೋರ್ಟ್

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಆರೋಪಿ, ನಟ ದರ್ಶನ್ ನಿವಾಸದಲ್ಲಿ ಪತ್ತೆಯಾಗಿದ್ದ 82 ಲಕ್ಷ ರೂ. ಹಣ ಆದಾಯ ತೆರಿಗೆ ಇಲಾಖೆ ವಶದಲ್ಲಿಯೇ ಇರಲಿ ಎಂದು 57ನೇ ಸಿಸಿಎಚ್ ಕೋರ್ಟ್ ಆದೇಶಿಸಿದೆ.



ಕೊಲೆ ಪ್ರಕರಣದ ತನಿಖೆ ಸಂದರ್ಭದಲ್ಲಿ ಕಾಮಾಕ್ಷಿಪಾಳ್ಯ ಪೊಲೀಸರು ದರ್ಶನ್ ಮನೆ ಮತ್ತು ಪ್ರದೋಷ್ ಮನೆಯಲ್ಲಿ ಹಣ ವಶಕ್ಕೆ ಪಡೆದು ಆದಾಯ ತೆರಿಗೆ ಇಲಾಖೆಗೆ ವರ್ಗಾವಣೆ ಮಾಡಿದ್ದರು. ತನಿಖೆ ನಡೆಸಿದ

ಪುಟ 2ಕ್ಕೆ

### ಡಿ.17ರಿಂದ ವಿಚಾರಣೆ

**ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಸಾಕ್ಷಿಗಳ ವಿಚಾರಣೆ ಡಿ.17ರಿಂದ ನಡೆಯಲಿದೆ. ಸಾಕ್ಷ್ಯ ವಿಚಾರಣೆ ಶುರು ಮಾಡಲು ಕೋರ್ಟ್ ನಿರ್ಧರಿಸಿದೆ. ರೇಣುಕಾಸ್ವಾಮಿ ಕೊಲೆ ಪ್ರಕರಣದ ಎ1 ಆರೋಪಿ ಪವಿತ್ರಾ ಗೌಡ ಪರ ವಕೀಲ ಬಾಲನ್ ಗೆ ಕೋರ್ಟ್ ನಿಂದ ಮಾಹಿತಿ ನೀಡಲಾಗಿದೆ. ವಿಡಿಯೋ ಕಾನ್ಫರೆನ್ಸ್ ಮೂಲಕ ದರ್ಶನ್ ಸೇರಿ 7 ಆರೋಪಿಗಳು ಬುಧವಾರ**

ಪುಟ 2ಕ್ಕೆ

### ರೂಪಾಯಿ ಮೌಲ್ಯ ಕುಸಿತ

**ನವದೆಹಲಿ:** ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಬುಧವಾರ ಮತ್ತೆ 29 ಪೈಸೆ ಕುಸಿದಿದೆ. ಇದರೊಂದಿಗೆ ಭಾರತದ ಕರೆನ್ಸಿ ಮೊದಲ ಬಾರಿಗೆ ನೈಂಟಿ ಕ್ರಾಸ್ ಮಾಡಿದೆ. ಪ್ರತಿ ಡಾಲರ್ ಗೆ 90.25 ರೂ.ಗೆ ತಲುಪಿದೆ. ಇದು ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿದೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಅಪಮೌಲ್ಯ ಮುಂದುವರೆದಿದೆ. ನಿನ್ನೆ ಡಾಲರ್ ಎದುರು ರೂಪಾಯಿ ಮೌಲ್ಯ 89.94 ರೂಪಾಯಿ ಇತ್ತು. ಎಫ್‌ಐಐ ಹೊರಹರಿವು ಮತ್ತು ಬ್ಯಾಂಕುಗಳು ನಿರಂತರವಾಗಿ ಡಾಲರ್‌ಗಳನ್ನು ಖರೀದಿಸುತ್ತಿರುವುದು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣ ಎನ್ನಲಾಗಿದೆ.

ದೇಶೀಯ ಷೇರು ಮಾರುಕಟ್ಟೆಗಳಲ್ಲಿನ ಕುಸಿತ ಮತ್ತು ಭಾರತ–ಅಮೆರಿಕ ವ್ಯಾಪಾರ ವಿಳಂಬ ಹಾಗೂ ವಿದೇಶಿ ಹೂಡಿಕೆದಾರರ ಹಣ ಹಿಂಪಡೆಯುವಿಕೆ ರೂಪಾಯಿ ದುರ್ಬಲಗೊಳ್ಳಲು ಪ್ರಮುಖ ಕಾರಣ ಎನ್ನಲಾಗಿದೆ. ಚಿನ್ನ, ಬೆಳ್ಳಿ ಆಮದು ಹೆಚ್ಚಳದಿಂದ ಡಾಲರ್‌ಗಳ ಬೇಡಿಕೆ ಏರಿದೆ. ಇದು ದೇಶದ ಆರ್ಥಿಕತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಆತಂಕ ಹೆಚ್ಚಿಸಿದೆ.

### ರಾಜ್ಯದಲ್ಲಿ 2.43 ಲಕ್ಷ ಬಿಪಿಎಲ್ ಕಾರ್ಡ್ ರದ್ದು

**ನವದೆಹಲಿ:** ಕರ್ನಾಟಕದಲ್ಲಿ ಕಳೆದ ಐದು ವರ್ಷಗಳಲ್ಲಿ 2.43 ಲಕ್ಷ ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ ಎಂದು ಗ್ರಾಹಕ ವ್ಯವಹಾರ ಖಾತೆ ರಾಜ್ಯ ಸಚಿವೆ ನಿಮುಬೆನ್ ಜಯಂತಿಬಾಯಿ ಅಧಿವೇಶನದಲ್ಲಿ ಉತ್ತರಿಸಿದ್ದಾರೆ.

ಲೋಕಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಸಂಸದ ರಾಧಾಕೃಷ್ಣ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಪಡಿತರ ಚೀಟಿಗಳ ಡಿಜಿಟಲೀಕರಣ, ಆಧಾರ್ ಜೋಡಣೆ, ಅನರ್ಹ ದಾಖಲೆಗಳು, ಸಾವು, ಫಲಾನುಭವಿಗಳ ಶಾಶ್ವತ ವಲಸೆ ಮತ್ತಿತರ ಕಾರಣಗಳಿಂದ ದೇಶದಲ್ಲಿ ಈ

## ಪ್ರಜ್ವಲ್ ರೇವಣ್ಣಗೆ ಹೈ ಶಾಕ್

**ಜೀವಾವಧಿ ಶಿಕ್ಷೆ ಅಮಾನತು, ಜಾಮೀನು ಕೋರಿದ್ದ ಅರ್ಜಿ ವಜಾ**

**ಬೆಂಗಳೂರು:** ಮನೆ ಕೆಲಸದ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಹೈಕೋರ್ಟ್ ಶಾಕ್ ನೀಡಿದೆ. ಜೀವಾವಧಿ ಶಿಕ್ಷೆ ಅಮಾನತುಗೊಳಿಸಿ ಜಾಮೀನು ನೀಡುವಂತೆ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಬುಧವಾರ ವಿಚಾರಣೆ ನಡೆಸಿತು. ಪ್ರಜ್ವಲ್ ಪರ ವಕೀಲ ಸಿದ್ದಾರ್ಥ್ ಲೂಥ್ರಾ ವಾದ ಮಂಡಿಸಿದರು. ಜಾಮೀನು ನೀಡಿದರೂ ಕೂಡ ಪ್ರಜ್ವಲ್ ರೇವಣ್ಣ ಪರಾರಿ ಆಗಲ್ಲ. ಇನ್ನುಳಿದ ಎರಡು ಪ್ರಕರಣದ ಟ್ರಯಲ್‌ಗೆ ಸಕಾಲಕ್ಕೆ ಹಾಜರಾಗುತ್ತಾರೆ. ಹೀಗಾಗಿ ಜಾಮೀನು ನೀಡಬೇಕೆಂದು ಮನವಿ ಮಾಡಿದರು. ವಾದ ಆಲಿಸಿದ ನ್ಯಾಯಾಲಯ ಅರ್ಜಿಯನ್ನು ವಜಾಗೊಳಿಸಿದೆ.

ಕೆ.ಆರ್.ನಗರದಲ್ಲಿ ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ದೋಷಿ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ನೀಡಿ ಜೀವಾವಧಿ ಶಿಕ್ಷೆ ವಿಧಿಸಿತ್ತು. ಈ ಆದೇಶವನ್ನು ಅಮಾನ



ತುಗೊಳಿಸಿ ಜಾಮೀನು ನೀಡುವಂತೆ ಪ್ರಜ್ವಲ್ ರೇವಣ್ಣ ಹೈಕೋರ್ಟ್ ಮೆಟ್ಟಿಲೇರಿದ್ದರು.

**ಪ್ರಕರಣದ ಹಿನ್ನೆಲೆ:** ಕೆ.ಆರ್ ನಗರ ಸಂತ್ರಸ್ತೆ ಪ್ರಕರಣದಲ್ಲಿ ಪ್ರಜ್ವಲ್ ವಿರುದ್ಧ ಅತ್ಯಾಚಾರ, ಅಪಹರಣ ಕೇಸ್ ದಾಖಲಾಗಿತ್ತು. ಸಂತ್ರಸ್ತೆಯನ್ನ ರೇವಣ್ಣ, ಭವಾನಿ ರೇವಣ್ಣ, ಸತೀಶ್ ಬಾಬು ಸೇರಿದಂತೆ 9 ಜನ ಸೇರಿ ಅಪಹರಿಸಿದ್ದರು. ಬಳಿಕ ಆಕೆಯನ್ನು ಹುಣಸೂರು ಬಳಿಯ ತೋಟದ ಮನೆಯೊಂದರಲ್ಲಿ ಕೂಡಿ ಹಾಕಲಾಗಿತ್ತು. ಇದೇ ಅಪಹರಣ ಪ್ರಕರಣದಿಂದಲೇ ರೇವಣ್ಣ ಸೇರಿದಂತೆ 8 ಜನ ಜೈಲಿಗೆ ಹೋಗಿದ್ದರು. ಬಂಧನ ಭೀತಿಯಿಂದ

ಪುಟ 2ಕ್ಕೆ

## ಮಸೀದಿಗೆ ನುಗ್ಗಿದ ಹನುಮ ಮಾಲಾಧಾರಿಗಳು

**ಶ್ರೀರಂಗಪಟ್ಟಣದಲ್ಲಿ ಉದ್ವಿಗ್ನ ವಾತಾವರಣ | ಪೊಲೀಸರ ಜೊತೆ ತಳ್ಳಾಟ–ನೂಕಾಟ**

**ಶ್ರೀರಂಗಪಟ್ಟಣ:** ಪಟ್ಟಣದ ಜಾಮೀಯಾ ಮಸೀದಿಗೆ ಹನುಮ ಮಾಲಾಧಾರಿಗಳು ನುಗ್ಗುಲು ಯತ್ನಿಸಿದ ಹಿನ್ನೆಲೆಯಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಶ್ರೀರಂಗಪಟ್ಟಣದಲ್ಲಿ ಬುಧವಾರ ಬೃಹತ್ ಸಂಕೀರ್ತನಾ ಯಾತ್ರೆ ಆಯೋಜಿಸಲಾಗಿತ್ತು. ಹನುಮ ಮಾಲಾಧಾರಿಗಳು ಜಾಮೀಯಾ ಮಸೀದಿ ಮುಂದುಗಡೆಯಿಂದ ಸಾಗಿ ಹೋಗುವಾಗ ಇದ್ದಕ್ಕಿದ್ದ ಹಾಗೆ ಜಾಮಿಯಾ ಮಸೀದಿಯೊಳಗೆ ನುಗ್ಗಿದರು. ಇದರಿಂದ ಜಾಮಿಯಾ ಮಸೀದಿ ಬಳಿ ಉದ್ವಿಗ್ನ ವಾತಾವರಣ ಉಂಟಾಗಿತ್ತು. ಮಾಲಧಾರಿಗಳು, ಪೊಲೀಸರ ನಡುವೆ ತಳ್ಳಾಟ–ನೂಕಾಟ ನಡೆಯಿತು.

ಹನುಮ ಧ್ವಜ ಹಿಡಿದ ಸಾವಿರಾರು ಭಕ್ತರು ಯಾತ್ರೆಯಲ್ಲಿ ಭಾಗಿಯಾಗಿದ್ದರು. ಗಂಜಾಂನ ಹಜರತ್ ಸೈಯದ್ ಜವಾರ್ ದರ್ಗಾದ ಮುಂದೆ ಹನುಮ ಮಾಲಾಧಾರಿಗಳ ಯಾತ್ರೆ ಸಾಗಿಬಂದು ಜಾಮೀಯಾ ಮಸೀದಿ ತಲುಪಿತ್ತು. ಈ ವೇಳೆ ಸಂಕೀರ್ತನ ಯಾತ್ರೆ, ಜಾಮೀಯಾ ಮಸೀದಿ ಕಡೆಗೆ ನುಗ್ಗಲು ಮಾಲಧಾರಿಗಳು ಯತ್ನಿಸಿದರು.



ಜಾಮೀಯಾ ಮಸೀದಿ ತಲುಪಿದ ಮಾಲಾಧಾರಿಗಳು ಮಸೀದಿ ಬಳಿ ಜೈ ಶ್ರೀರಾಮ್, ಜೈ ಹನುಮಾನ್, ನಾವೆಲ್ಲಾ ಒಂದು ನಾವೆಲ್ಲಾ ಹಿಂದೂ, ಹನುಮನ ಪಾದದ ಮೇಲಾಣೆ ಮಂದಿರವಿಲ್ಲೇ ಕಟ್ಟುವೆವು ಎಂದು ಘೋಷಣೆ ಕೂಗಿದರು. ಮಸೀದಿ ಬಳಿಯ ವೃತ್ತದಲ್ಲಿ ನಿಂಬೆ ಹಣ್ಣು ಇಟ್ಟು ಕರ್ಪೂರ ಹಚ್ಚಿದ ಮಾಲಧಾರಿಗಳು ಮಸೀದಿ ಜಾಗ ನಮ್ಮದು ಎಂದು ಘೋಷಣೆ ಕೂಗಿದರು.

ಜಾಮೀಯಾ ಮಸೀದಿ ಬಳಿ ಭಾರೀ ಸಂಖ್ಯೆಯ ಹನುಮ ಮಾಲಾಧಾರಿಗಳು ಸೇರುತ್ತಿದ್ದಂತೆ

ಪುಟ 2ಕ್ಕೆ

### ಬಿಗಿ ಪೊಲೀಸ್ ಬಂದೋಬಸ್ತ್

ಶ್ರೀರಂಗಪಟ್ಟಣ ಟೌನ್, ಗಂಜಾಂ ವ್ಯಾಪ್ತಿಯಲ್ಲಿ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. 1,500 ಕ್ಕೂ ಹೆಚ್ಚು ಪೊಲೀಸರು, ಸಿಬ್ಬಂದಿ ನಿಯೋಜನೆ ಮಾಡಲಾಗಿತ್ತು. ದಕ್ಷಿಣ ವಲಯ ಐಜಿಪಿ ನೇತೃತ್ವದಲ್ಲಿ ಮೂವರು ಎಸ್ಪಿ, ಮೂವರು ಎಎಸ್ಪಿ ಸೇರಿ 1,100 ಅಧಿಕಾರಿಗಳು, ಸಿಬ್ಬಂದಿ, 300ಕ್ಕೂ ಹೆಚ್ಚು ಹೋಂ ಗಾರ್ಡ್ಸ್‌ಗಳ ನಿಯೋಜನೆ ಮಾಡಲಾಗಿತ್ತು. ಯಾತ್ರೆ ಸಾಗುವ ಮಾರ್ಗದಲ್ಲಿ 110 ಸಿಸಿಟಿವಿ ಅಳವಡಿಸಲಾಗಿದೆ. ಮೆರವಣಿಗೆ ಮೇಲೆ ಹೆಚ್ಚುವರಿಯಾಗಿ 20 ವಿಡಿಯೋ ಕ್ಯಾಮೆರಾ, 4 ಡ್ರೋಣ್ ಕ್ಯಾಮೆರಾಗಳ ಕಣ್ಗಾವಲು ಇಡಲಾಗಿತ್ತು. ಅಹಿತಕರ ಘಟನೆ ನಡೆಯದಂತೆ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿತ್ತು. ವಿವಾದಕ್ಕೆ

ಪುಟ 2ಕ್ಕೆ

# ಸಡಗರದ ಆಂಜನೇಯಸ್ವಾಮಿ 86ನೇ ವರ್ಷದ ಪಲ್ಲಕ್ಕಿ ಉತ್ಸವ

ಕೆ.ಆರ್.ಪೇಟೆ, ತಾಲ್ಲೂಕಿನ ಅಘಲಯ ಗ್ರಾಮದಲ್ಲಿ ಹನುಮ ಜಯಂತಿಯ ಅಂಗವಾಗಿ ಶ್ರೀ ಪ್ರಸನ್ನ ಆಂಜನೇಯಸ್ವಾಮಿಯವರ 86ನೇ ವರ್ಷದ ಪಲ್ಲಕ್ಕಿ ಉತ್ಸವವು ಸಡಗರ ಸಂಭ್ರಮದಿಂದ ನಡೆಯಿತು.

ಹನುಮ ಜಯಂತಿಯ ಅಂಗವಾಗಿ ಶ್ರೀ ಪ್ರಸನ್ನ ಆಂಜನೇಯಸ್ವಾಮಿಯ ಮೂಲ ವಿಗ್ರಹಕ್ಕೆ ಅಭಿಷೇಕ, ವಿವಿಧ ಪುಷ್ಪಾಲಂಕಾರ, ಆಂಜನೇಯಸ್ವಾಮಿಯ ಅಡ್ಡಪಲ್ಲಕ್ಕಿ ಉತ್ಸವ, ಸಿಡಿಮದ್ದು ಪ್ರದರ್ಶನ, ಅನ್ನದಾನ ಮತ್ತಿತರ ಕಾರ್ಯಕ್ರಮಗಳು ನಡೆದವು. ನಂತರ ಸರ್ವಾಲಂಕಾರಗೊಂಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿಯವರ ಉತ್ಸವ ಮೂರ್ತಿಯನ್ನು ಡೊಳ್ಳು ಕುಣಿತ, ವೀರಗಾಸೆ ಕುಣಿತ, ಪೂಜಾ ಕುಣಿತ, ಮಂಗಳವಾದ್ಯ ವಾದನ ಮತ್ತಿತರ ಜಾನಪದ ಕಲಾ ತಂಡಗಳೊಂದಿಗೆ ಅಘಲಯ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅಡ್ಡ ಪಲ್ಲಕ್ಕಿ ಉತ್ಸವದ ಮೆರವಣಿಗೆ ನಡೆಯಿತು.

ಗ್ರಾಮದ ಹಿರಿಯ ಮುಖಂಡ ಹಾಗೂ ನಿವೃತ್ತ ಶಿಕ್ಷಕ ನಂಜಪ್ಪ ಮಾತನಾಡಿ ಅಘಲಯ ಗ್ರಾಮದಲ್ಲಿ ಕಳೆದ 86ವರ್ಷಗಳಿಂದಲೂ ಪ್ರಸನ್ನ ಆಂಜನೇಯ ಸ್ವಾಮಿಯ ಪಲ್ಲಕ್ಕಿ ಉತ್ಸವವನ್ನು ಹನುಮ ಜಯಂತಿಯಂದು ನಡೆಸಿಕೊಂಡು ಬರಲಾಗುತ್ತಿದೆ. ಕಳೆದ 20 ವರ್ಷಗಳಿಂದ ಹನುಮ ಜಯಂತಿ ಉತ್ಸವವನ್ನು ವಿಜಯರಾಘವನ್ ಕುಟುಂಬದ ಸಹಕಾರದಿಂದ ನಡೆಸಿಕೊಂಡು ಬರಲಾಗುತ್ತಿದೆ ಅದರಂತೆ ಈ ಭಾರಿಯೂ ಸಹ ಅನುರಾಧಾ ವಿಜಯರಾಘವನ್ ಕುಟುಂಬದವರು ಅಘಲಯ ಪ್ರಸನ್ನ ಆಂಜನೇಯಸ್ವಾಮಿಯವರ ಪೂಜಾ ಕೈಂಕರ್ಯಗಳು, ಅನ್ನಧಾನ ಕಾರ್ಯಕ್ರಮ ಹಾಗೂ ಹನುಮ ಜಯಂತಿ ಉತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು ಇದಕ್ಕೆ ಅನುರಾಧಾ ವಿಜಯರಾಘವನ್ ನೇತೃತ್ವದ ಬೆಂಗಳೂರಿನ ಅಂತರಾಳ ಚಾರಿಟೇಬಲ್ ಟ್ರಸ್ಟಿನ ಪೂರ್ಣ ಸಹಕಾರದಿಂದ ಅದ್ದೂರಿಯಾಗಿ ನಡೆಸಲಾಯಿತು. ಹಾಗಾಗಿ ನಮ್ಮೂರಿನ ಮನೆಮಗಳು ಅನುರಾಧಾವಿಜಯರಾಘವನ್ ತಂದೆ ಛತ್ರಿ ಶ್ರೀನಿವಾಸ ಅಯ್ಯಂಗಾರ್ ಹಾಗೂ ಪತಿ ವಿಜಯರಾಘವನ್ ಅವರಂತೆಯೇ ಗ್ರಾಮದ ಶ್ರೀ ಪ್ರಸನ್ನ ಆಂಜನೇಯಯ ಸ್ವಾಮಿಯ ಸೇವೆಯನ್ನು ಮಾಡುತ್ತಿರುವುದು ಶ್ಲಾಘನೀಯವಾದುದು ಎಂದು ಮಾಸ್ಟರ್ ನಂಜಪ್ಪ ಹಾಗೂ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಶ್ರೀಧರ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಲೋಕೇಶ್



ತಿಳಿಸಿದರು.

ಅಘಲಯದಲ್ಲಿ ಹನುಮ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಹ ಹೆಚ್.ಟಿ.ಮಂಜು ಅವರು ಸ್ವಾಮಿ ನಿಷ್ಠೆ ಹಾಗೂ ಅಛಲವಾದ ಭಕ್ತಿಗೆ ಶ್ರೀಆಂಜನೇಯನಿಗಿಂತ ಬೇರೆ ಉದಾಹರಣೆಯು ನಮ್ಮ ಕಣ್ಣ ಮುಂದಿಲ್ಲ. ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರ ಪ್ರಭುವಿನ ಆಜ್ಞಾಪಾಲಕನಾದ ಸ್ವಾಮಿ ಭಕ್ತನ ಹಲವಾರು ಸಾಹಸಗಳ ಬಗ್ಗೆ ಪುರಾಣದಲ್ಲಿ ಕೇಳಿ ತಿಳಿದಿದ್ದೇವೆ. ಹನುಮಂತನ ಸ್ವಾಮಿ ನಿಷ್ಠೆ ಹಾಗೂ ಕರ್ತವ್ಯ ಪ್ರಜ್ಞೆಯು ಎಲ್ಲರಿಗೂ ಮಾದರಿಯಾಗಿದೆ ಎಂದು ಗುಣಗಾನ ಮಾಡಿದರು.

ಹನುಮ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಟಿ.ಮಂಜು, ದಾನಿಗಳಾದ ಅನುರಾಧಾರಾಘವನ್, ಮಾಜಿ ಸಚಿವ ಡಾ.ನಾರಾಯಣಗೌಡ, ತಾ.ಪಂ.ಮಾಜಿ ಅಧ್ಯಕ್ಷ ಜಾನಕೀರಾಂ, ಪಿ.ಎಲ್.ಡಿ.ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್.ರಮೇಶ್, ಟಿಎಪಿಸಿಎಂಎಸ್ ನಿರ್ದೇಶಕ ನಾಗರಘಟ್ಟ ದಿಲೀಪ್‌ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಮಹಡಿಮನೆ ಮಂಜಣ್ಣ, ತಾಲ್ಲೂಕು ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಎ.ಎಸ್.ಶ್ರೀಧರ್, ಅಘಲಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗರಘಟ್ಟ ಮಂಜೇಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷರುಗಳಾದ ಹೋಬಳಿ ಲೋಕೇಶ್, ಹೇಮಾವತಿಲೋಕೇಶ್, ಭಾರತಿಶ್ರೀಧರ್, ಮುಖಂಡರಾದ ಮಾಸ್ಟರ್ ನಂಜಪ್ಪ, ಹೋಬಳಿ ಲೋಕೇಶ್, ಸಂಪತ್‌ಕುಮಾರ್, ಶ್ರೀನಿವಾಸ ಅಯ್ಯಂಗಾರ್, ಜಗನ್ನಾಥ್, ನಂಜುಂಡನ್, ರಾಮನಕೊಪ್ಪಲು ಶಿವಣ್ಣನ ಕುಟುಂಬ, ಅಂತರಾಳ ಚಾರಿಟೇಬಲ್ ಟ್ರಸ್ಟಿನ ಎಲ್ಲಾ ಪದಾಧಿಕಾರಿಗಳು ಸೇರಿದಂತೆ ನೂರಾರು ಗಣ್ಯರು, ಸಾವಿರಾರು ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬೆಂಗಳೂರು, ಮೈಸೂರು, ಮಂಡ್ಯ, ಹಾಸನ, ಕೆ.ಆರ್.ಪೇಟೆ, ಮೇಲುಕೋಟೆ, ಚನ್ನರಾಯಪಟ್ಟಣ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ಹನುಮ ಜಯಂತಿ ಉತ್ಸವದಲ್ಲಿ ಭಾಗವಹಿಸಿ ಆಂಜನೇಯಸ್ವಾಮಿಯವರ ದೇವರ ಕೃಫೆಗೆ ಪಾತ್ರರಾದರು.

ಹನುಮ ಜಯಂತಿಯ ಅಂಗವಾಗಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಭಕ್ತಾಧಿಗಳಿಗೆ ಅನ್ನಸಂಪರ್ಪಣಾ ಕಾರ್ಯಕ್ರಮ ನಡೆಯಿತು. ಗ್ರಾಮದ ಮೂಲ ನಿವಾಸಿಗಳಾದ ಛತ್ರಿ ಶ್ರೀನಿವಾಸ ಅಯ್ಯಂಗಾರ್ ಕುಟುಂಬದ ಅನುರಾಧಾ ವಿಜಯರಾಘವನ್ ಅವರ ಎಲ್ಲ ರೀತಿಯ ನೆರವಿನೊಂದಿಗೆ, ಅವರ ಶಿಷ್ಯ ವೃಂದದ ಹಾಗೂ ಅಘಲಯ ಗ್ರಾಮಸ್ಥರ ಸಹಕಾರದೊಂದಿಗೆ ಸಡಗರ ಸಂಭ್ರಮದಿಂದ ಹನುಮ ಜಯಂತಿಯನ್ನು ಆಚರಣೆ ಮಾಡಲಾಯಿತು. ಹನುಮ ಜಯಂತಿ ಅಂಗವಾಗಿ ಗ್ರಾಮದ ಮುಖ್ಯ ಬೀದಿಗಳನ್ನು ಹಾಗೂ ದೇವಾಲಯವನ್ನು ವಿದ್ಯುತ್ ದೀಪಗಳು ಮತ್ತು ತಳಿರು ತೋರಣಗಳಿಂದ ಸಿಂಗಾರ ಮಾಡಲಾಗಿತ್ತು. ಇದರಿಂದಾಗಿ ಗ್ರಾಮವು ನವ ವಧುವಿನಂತೆ ಕಂಗೊಳಿಸುತ್ತಿತ್ತು.

**ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ತಡೆಗಟ್ಟುವ ಕುರಿತು**

## ಕಾನೂನು ಅರಿವು–ನೆರವು ಸಂಪನ್ನ

ರಾಮನಗರ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ ಡಿ. 2ರ ಮಂಗಳವಾರ ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ತಡೆಗಟ್ಟುವ ಕುರಿತು ಕಾನೂನು ಅರಿವು–ನೆರವು ಜಾಗೃತಿ ಕಾರ್ಯಕ್ರಮವನ್ನು ಡಿ.2ರ ಮಂಗಳವಾರ ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಅಣ್ಣಯ್ಯನವರ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತಾ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಜಿನಿ, ಕಾಲೇಜಿನ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ವಿಕಲಚೇತನರು ಇತರರಿಗಿಂತ ಹೆಚ್ಚಿನ ಸಾಧನೆ ಮಾಡಬಲ್ಲರು

## ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅಭಿಮತ

ಮೈಸೂರು: ವಿಕಲಚೇತನರು ಇತರರಿಗಿಂತ ಹೆಚ್ಚಿನ ಸಾಧನೆ ಮಾಡುವ ಮೂಲಕ ಇತರರಿಗೆ ಮಾದರಿಯಾಗುವ ಮೂಲಕ ಈ ದೇಶದ ಸಂಪತ್ತು ಆಗಿದ್ದಾರೆ. ಅವರಿಗೆ ವಿಕಲತೆ ಇದೆ ಏನು ಸಾಧನೆ ಮಾಡಲು ಆಗುವುದಿಲ್ಲ ಎಂಬ ಮಾತು ಸತ್ಯಕ್ಕೆ ದೂರವಾಗಿದ್ದು, ವಿಕಲಚೇತನ ಮಕ್ಕಳು ಎಲ್ಲಾ ಅಂಗಗಳು ಸರಿ ಇರುವವರಿಗಿಂತ ಹೆಚ್ಚಿನ ಸಾಧನೆ ಮಾಡಿರುವಂತಹ ಉದಾಹರಣೆಗಳು ನಮ್ಮ ಕಣ್ಣ ಮುಂದೆ ಇದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಡಾ.ಪಿ.ಶಿವರಾಜು ಹೇಳಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಜಿಲ್ಲಾ ಕಾನೂನ ಸೇವೆಗಳ ಪ್ರಾಧಿಕಾರ, ಮೈಸೂರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿಕಲಚೇತನರಿಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಹಯೋಗದಲ್ಲಿ ದಸರಾ ವಸ್ತುಪ್ರದರ್ಶನ ಆವರಣದ ಪಿ. ಕಾಳಿಂಗರಾವ್ ಗಾನಮಂಟಪ ಇಲ್ಲಿ ಆಯೋಜಿಸಲಾಗಿದ್ದ ವಿಶ್ವ ವಿಕಲಚೇತನರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು. ಪ್ರತಿಭೆ ಯಾರ ಸ್ವತ್ತು ಅಲ್ಲ ಅದು ಸಾಧಕರ ಸ್ವತ್ತು. ಎಲ್ಲಾ ವಿಕಲಚೇತನರು ಸಹ ತಮ್ಮ ತಮ್ಮ ಸಾಮರ್ಥ್ಯ ಗರಿಷ್ಠ ಪ್ರಮಾಣದ ಪ್ರದರ್ಶನ ನೀಡುತ್ತಾ ನೀವು ನಿಮ್ಮ ಪ್ರತಿಭೆಯ ಮೂಲಕ ಸಮಾಜಕ್ಕೆ ಕೊಡುಗೆಯನ್ನು ನೀಡಬೇಕು. ನೀವು ಸಹ ಸಮಾಜದ ಆಸ್ತಿ ಆಗಬೇಕು ಎಂದರು.



ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪಾಧ್ಯಕ್ಷರಾದ ಭಾಸ್ಕರ್ ನಾಯಕ್ ಅವರು ಮಾತನಾಡಿ ಈ ಸಮಾಜದಲ್ಲಿ ಇರುವಂತಹ ಪ್ರತಿಯೊಂದು ಪ್ರಾಣಿ ಪಕ್ಷಿ ಮನುಷ್ಯರು ಮತ್ತು ಗಿಡ ಮರ ಎಲ್ಲರು ಕೂಡ ಸಹಬಾಳ್ವೆಯಿಂದ ಬದುಕಬೇಕು. ಇಲ್ಲಿಗೆ ಯಾರೇ ಸಶಕ್ತರಾಗಿರುವಂತಹ ವ್ಯಕ್ತಿಗಳು ತಮ್ಮ ಮನೆಯಲ್ಲಿ ಶಕ್ತಿಯಲ್ಲಿ ಕಡಿಮೆ ಇರುವಂತಹ ಸಹೋದರ ಅಥವಾ ಸಹೋದರಿಯನ್ನು ತಮ್ಮ ತಂದೆ ತಾಯಿಯರನ್ನು ಅಥವಾ ನೆರೆಹೊರೆಯರನ್ನು ಪ್ರೀತಿಯಿಂದ ಕಾಣಬೇಕು. ನಾವು ಮಾನವೀಯ ಧರ್ಮವನ್ನು ಪಾಲಿಸಬೇಕು ನಮ್ಮ ಜೊತೆಯಲ್ಲಿರುವಂತಹ ಎಲ್ಲಾ ಪ್ರತಿ ಜೀವಿಗಳನ್ನು ಗೌರವಾನ್ವಿತವಾಗಿ ಅವರಿಗೂ ಬದುಕಲು ಅವಕಾಶ ಕೊಟ್ಟು ನಾವು ಕೂಡ ಸಮಾಜದಲ್ಲಿ ಬದುಕಬೇಕು. ಜಿಲ್ಲಾಡಳಿತ ಮತ್ತು ಜಿಲ್ಲಾ ಕಾನೂನು ಸೇವೆಯು ಎಲ್ಲಾ ವಿಕಲಚೇತನ ಮಕ್ಕಳು ಮಹಿಳೆಯರ ಏಳಿಗೆಗೆ ಯಾವಾಗಲೂ ಇರುತ್ತೇವೆ. ನಿಮ್ಮ ಯಾವುದೇ ಕುಂದು ಕೊರತೆಗಳನ್ನು ಪ್ರಥಮ ಆದ್ಯತೆಗಳಲ್ಲಿ ಪರಿಶೀಲಿಸುತ್ತೇವೆ ನೀವು ಧೈರ್ಯ ಕಳೆದುಕೊಳ್ಳಬಾರದು ಎಂದು ಹೇಳಿದರು.

ಸಮಾಜದಲ್ಲಿ ಮನುಷ್ಯ ಹುಟ್ಟಬೇಕಾದರೆ ಅವರಿಗೆ ಯಾವುದಾದರೂ ತೊಂದರೆ ಇದ್ದರೆ ಅದನ್ನು ತೊಂದರೆ ಅಂತ ಅಂದುಕೊಳ್ಳಬಾರದು. ಬದಲಿಗೆ ದೇವರು ನಿಮಗೆ ಮತ್ತೊಂದು ರೀತಿಯಲ್ಲಿ ಶಕ್ತಿಯನ್ನು ಕೊಟ್ಟಿರುತ್ತಾನೆ. ನಿಮ್ಮಲ್ಲಿ ಸಾಕಷ್ಟು ಪ್ರತಿಭೆಗಳು ಇವೆ ಅದನ್ನು ಉಪಯೋಗಿಸಿಕೊಂಡು ನಿಮ್ಮ ಪ್ರತಿಭೆಗಳನ್ನು ಹೊರ ಹಾಕಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಬಿ.ಬಸವರಾಜು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ಎಸ್.ರಾಘವೇಂದ್ರ, ಕ್ರೀಡಾ ವಿಕಲಚೇತನ ಒಕ್ಕೂಟದ ಅಧ್ಯಕ್ಷ ದೀಕ್ಷಿತ್, ಸರ್ಕಾರಿ ಬ್ರೈಲ್ ಮುದ್ರಣಾಲಯದ ಅಧ್ಯಕ್ಷ ಮೋಹನ್, ಸರ್ಕಾರಿ ಅಂದ ಮಕ್ಕಳ ಅಧ್ಯಕ್ಷ ಸತೀಶ್, ಸರ್ಕಾರಿ ಕಿವುಡ ಮಕ್ಕಳ ಅಧ್ಯಕ್ಷ ನೀರಜ್ ಹಾಗೂ ಮತ್ತಿತರು ಉಪಸ್ಥಿತರಿದ್ದರು.

**ಮೊದಲ ಪುಟದಿಂದ**

## 82 ಲಕ್ಷ ಐಟಿ ವಶಕ್ಕೆ ನೀಡಿದ ಕೋರ್ಟ್

ಐಟಿ ಇನ್ನೂ ಸ್ಪಷ್ಟವಾದ ಮಾಹಿತಿ ನೀಡಿರಲಿಲ್ಲ. ಈ ಸಂದರ್ಭದಲ್ಲಿ ದರ್ಶನ್ 82 ಲಕ್ಷ ರೂ. ಹಣ ವಾಪಸ್ ನೀಡಲು ಕೋರ್ಟ್‌ಗೆ ಮನವಿ ಮಾಡಿದ್ದರು. ದರ್ಶನ್ ಅರ್ಜಿಗೆ ಆಕ್ಷೇಪಣೆ ಎತ್ತಿದ ಐಟಿ ದರ್ಶನ್ ಇದೂವರೆಗೂ ಸ್ಪಷ್ಟ ಮಾಹಿತಿ ನೀಡಿಲ್ಲ. ಹೀಗಾಗಿ ತನಿಖೆ ಮುಂದುವರೆಸಬೇಕಾಗಿದೆ ಎಂದಿತ್ತು. ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯ 82 ಲಕ್ಷ ಹಣ ಐಟಿ ಬಳಿಯಲ್ಲೇ ಇರಲಿ, ತನಿಖೆ ಮುಂದುವರೆಸಲಿ ಎಂದು ಆದೇಶ ನೀಡಿದೆ. ಈ ಹಣ ದರ್ಶನ್ ಮನೆಗೆ ಹೇಗೆ ಬಂತು ಎನ್ನುವುದಕ್ಕೆ ದರ್ಶನ್ ಪರ ವಕೀಲರು ವಾದಿಸಿದ್ದರು. ದರ್ಶನ್ ಅವರು ಮೋಹನ್ ರಾಜ್‌ಗೆ ಸಾಲವಾಗಿ ಹಣ ನೀಡಿದ್ದರು. ಮೋಹನ್ ರಾಜ್ ಅವರು ದರ್ಶನ್‌ಗೆ ಮರಳಿಸಿದ್ದರು. ದರ್ಶನ್ ಇದನ್ನು ಮನೆಯಲ್ಲಿಟ್ಟಿದ್ದರು ಎಂದು ದರ್ಶನ್ ವಕೀಲರು ಹೇಳಿದ್ದರು. ಇದಕ್ಕೆ ಆದಾಯ ತೆರಿಗೆ ಇಲಾಖೆ ದರ್ಶನ್ ಈ ಹಣಕ್ಕೆ ಸೂಕ್ತ ದಾಖಲೆಯನ್ನು ಸಲ್ಲಿಕೆ ಮಾಡಿಲ್ಲ. ಇದು ವಂಚನೆಯ ಹಣ ಎಂದು ವಾದಿಸಿತ್ತು.

## ಡಿ.17ರಿಂದ ವಿಚಾರಣೆ

**ಹಾಜರಾಗಿದ್ದರು. ಸಾಕ್ಷಿಗಳ ಪಟ್ಟಿಯನ್ನು ಸಹಾಯಕ ಎಸ್ ಪಿಪಿ ಸಚಿನ್ ಅವರು ಕೋರ್ಟ್ ಗೆ ಸಲ್ಲಿಸಿದರು. ಪ್ರತ್ಯಕ್ಷ ಸಾಕ್ಷಿಗಳು, ಈಖಖಿ ಸಾಕ್ಷಿಗಳು, ತಾಂತ್ರಿಕ ಸಾಕ್ಷಿಗಳ ಪ್ರತ್ಯೇಕ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.**

## ನವೆಂಬರ್ ‘ಕ್ರಾಂತಿಗೆ ಕೋಳಿ ಬಲಿ’

ಸಚಿವರ ಅಡಿಯಲ್ಲಿ ಬರುತ್ತವೆ. ಇದರ ಬಗ್ಗೆ ಚರ್ಚೆಗಳಿದ್ದಾಗ ಅವರೊಬ್ಬರೇ ಅಲ್ಲ, ಇತರೆ ಎಲ್ಲಾ ನಿರ್ದೇಶಕರು ಹೋಗುತ್ತಾರೆ. ಅಮಿತ್ ಶಾ ಕೂಡ ಸಭೆ ಕರೆಯುತ್ತಿರುತ್ತಾರೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸೋದು ಬೇಡ ಎಂದು ತಿಳಿಸಿದರು.

**ಮೊದಲ ಪುಟದಿಂದ**

## ಅಹಿಂದ ನಾಯಕರ ಸಾಥ್

**ಆದರೆ ಡಿಸಿಎಂ ಡಿ.ಕೆ ಶಿವಕುಮಾರ್ ಕಾರ್ಯಕ್ರಮದಿಂದ ದೂರವಿದ್ದರು.**

## ಪ್ರಜ್ವಲ್‌ಗೆ ಹೈಕೋರ್ಟ್ ಶಾಕ್

ತಲೆಮರೆಸಿಕೊಂಡಿದ್ದ ಭವಾನಿ ರೇವಣ್ಣ ಅವರಿಗೆ ಬಳಿಕ ನಿರೀಕ್ಷಣಾ ಜಾಮೀನು ಪಡೆದಿದ್ದರು. ಸಂತ್ರಸ್ತೆಯನ್ನು ಬೆತ್ತಲುಗೊಳಿಸಿ ಬಲವಂತವಾಗಿ ಲೈಂಗಿಕ ಕಿರುಕುಳ ನೀಡಿದ್ದ ವಿಡಿಯೋವೊಂದು ಪ್ರಜ್ವಲ್ ರೇವಣ್ಣ ಮೊಬೈಲ್‌ನಲ್ಲಿ ಪತ್ತೆಯಾಗಿತ್ತು. ಇದು ಪ್ರಕರಣದ ಬಹುದೊಡ್ಡ ಸಾಕ್ಷ್ಯವಾಗಿ ಪರಿಣಮಿಸಿತು. ಕೊನೆಗೆ ಎಫ್ಎಸ್ಎಲ್ ಮೂಲಕ ವಿಡಿಯೋ ತುಣುಕಿನಲ್ಲಿರುವುದು ಪ್ರಜ್ವಲ್ ರೇವಣ್ಣ ಎನ್ನುವುದು ಸಾಬೀತಾಗಿತ್ತು. ಪ್ರಕರಣ ಸಂಬಂಧ 2024ರ ಮೇ 31ರಂದು ಪ್ರಜ್ವಲ್ ರೇವಣ್ಣ ಅವರನ್ನ ಪೊಲೀಸರು ಬಂಧಿಸಿದ್ದರು.

## ಮಸೀದಿಗೆ ನುಗ್ಗಿದ ಹನುಮ ಮಾಲಾಧಾರಿಗಳು

ಜಾಮೀಯಾ ಮಸೀದಿ ಸುತ್ತ ಭಾರೀ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು. ಮಾಲಾಧಾರಿಗಳ ನಡುವೆ ತಳ್ಳಾಟ ನೂಕಾಟ ಉಂಟಾದ ಬೆನ್ನಲ್ಲೇ ಮಾಲಧಾರಿಗಳನ್ನ ಮನವೊಲಿಸಿ ಪೊಲೀಸರು ಕಳುಹಿಸಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ಹನುಮ ಮಾಲಧಾರಿಗಳ ಸಂಕೀರ್ತನಾ ಯಾತ್ರೆಯಲ್ಲಿ ಜೈ ಶ್ರೀರಾಮ್, ಜೈ ಹನುಮಾನ್ ಘೋಷಣೆ ಮೊಳಗಿದೆ. ಡಿಜೆ ಹಾಗೂ ತಮಟೆ ಸದ್ದಿಗೆ ಬಾವುಟ ಹಿಡಿದು ಮಾಲಧಾರಿಗಳು ಕುಣಿದು ಕುಪ್ಪಳಿಸಿದರು. ಮೂಡಲ ಬಾಗಿಲು ಆಂಜನೇಯಸ್ವಾಮಿ ಪುನರ್ ಪ್ರತಿಷ್ಠಾಪನೆ, ಜಾಮಿಯಾ ಮಸೀದಿ ಜಾಗದಲ್ಲಿ ಮತ್ತೆ ಹನುಮ ಮಂದಿರ ನಿರ್ಮಾಣದ ಸಂಕಲ್ಪ ಮಾಡಿ ಸಾವಿರಾರು ಹನುಮ ಭಕ್ತರು, ಹಿಂದೂ ಕಾರ್ಯಕರ್ತರು ಯಾತ್ರೆಯಲ್ಲಿ ಭಾಗಿಯಾಗಿದ್ದಾರೆ. ಸುಮಾರು 4 ಕಿಮೀ ದೂರ ಹನುಮ ಮೂರ್ತಿ ಜೊತೆ ಮೆರವಣಿಗೆ ನಡೆಯಿತು.

## ಬಿಗಿ ಪೊಲೀಸ್ ಬಂದೋಬಸ್ತ್

**ಕಾರಣವಾಗಿದ್ದ ಹನುಮ ಮಾಲಧಾರಿಗಳ ಸಂಕೀರ್ತನಾ ಯಾತ್ರೆ ರಂಗನಾಥಸ್ವಾಮಿ ದೇಗುಲದ ಮೈದಾನದಲ್ಲಿ ಮುಕ್ತಾಯಗೊಂಡಿತು. ಪೇಟೆ ಬೀದಿ ಮೂಲಕ ತೆರಳಿ ಯಾತ್ರೆ ಮುಕ್ತಾಯಗೊಂಡಿದೆ. ಯಾತ್ರೆ ಸಲುವಾಗಿ ಶ್ರೀರಂಗಪಟ್ಟಣ ಸಂಪೂರ್ಣ ಕೇಸರಿಮಯವಾಗಿತ್ತು.**

## ರಾಜ್ಯದಲ್ಲಿ 2.43 ಲಕ್ಷ ಬಿಪಿಎಲ್ ಕಾರ್ಡ್ ರದ್ದು

ಅವಧಿಯಲ್ಲಿ 2.25 ಕೋಟಿ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗಿದೆ ಎಂದು ವಿವರ ನೀಡಿದರು.

## ಅತಿಥಿ ಉಪನ್ಯಾಸಕರ ಕೌನ್ಸಿಲಿಂಗ್ ತಡೆಗೆ ಒತ್ತಾಯ

ಮೈಸೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 2025–26ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಸಾಮಾಜಿಕ ನ್ಯಾಯದ ನೀತಿಗೆ ವಿರುದ್ಧವಾಗಿರುವ ನಿಯಮಬಾಹಿರ ಕೌನ್ಸಿಲಿಂಗ್ ಪ್ರಕ್ರಿಯೆಗೆ ತಡೆ ನೀಡಬೇಕೆಂದು ಒತ್ತಾಯಿಸಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ವತಿಯಿಂದ ಕಾಲೇಜು ಶಿಕ್ಷಣ ಇಲಾಖೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು 2024–25ನೇ ಸಾಲಿನಲ್ಲಿ 10972 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, ಹತ್ತು, ಇಪ್ಪತ್ತು ವರ್ಷಗಳಿಂದಲೂ ಕನಿಷ್ಠ ಗೌರವಧನಕ್ಕೆ ಕಾರ್ಯ ನಿರ್ವಹಿಸುತ್ತಿದ್ದೇವೆ. ಪ್ರಸಕ್ತ ಸಾಲಿನಲ್ಲಿ ಯುಜಿಸಿ ಅರ್ಹತೆ ಪಡೆಯದ ಸುಮಾರು 6,904 ಅತಿಥಿ ಉಪನ್ಯಾಸಕರನ್ನು ಶಾಶ್ವತವಾಗಿ ಸೇವೆಯಿಂದ ಕೈಬಿಟ್ಟು, ಯುಜಿಸಿ ಅರ್ಹತೆ ಪಡೆದವರ ನೇಮಕಾತಿಗೆ ಕೌನ್ಸಿಲಿಂಗ್ ನಡೆಸುತ್ತಿರುವುದು ಆಘಾತಕಾರಿ ಸಂಗತಿ. ಇದರಿಂದ ಸಾವಿರಾರು ಅತಿಥಿ ಉಪನ್ಯಾಸಕರ ಕುಟುಂಬಗಳು ಬೀದಿಗೆ ಬೀಳಲಿವೆ ಎಂದು ಅತಿಥಿ ಉಪನ್ಯಾಸಕರು ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭವನ್ನು ಸರ್ಕಾರ ಅತ್ಯಂತ ಮಾನವೀಯ ದೃಷ್ಟಿಯಿಂದ ಪರಿಶೀಲಿಸಬೇಕು. ಪೂರ್ಣಕಾಲಿಕ ಉಪನ್ಯಾಸಕರಿಗೆ ಹಂಚಿಕೆ ಮಾಡಿ ಹೆಚ್ಚುವರಿ ಕಾರ್ಯಭಾರ ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಉತ್ಕಾಲಿಕ ವ್ಯವಸ್ಥೆಯಾಗಿದೆ.



ಹೀಗಾಗಿ ನ್ಯಾಯಾಲಯದ ಮಧ್ಯಂತರ ಆದೇಶ, ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ 2025–26ನೇ ಸಾಲಿನ ಹಾಲಿ ಸೆಮಿಸ್ಟರ್ ಪೂರ್ಣಗೊಳ್ಳುವವರೆಗೆ ಹಾಲಿ ಇರುವವರನ್ನೇ ಮುಂದುವರಿಸಬೇಕು. ಉಳಿಕೆ ಕಾರ್ಯಭಾರಕ್ಕೆ ಪ್ರಸ್ತುತ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಯುಜಿಸಿ ವಿದ್ಯಾರ್ಹತೆ ಅನುಸಾರ ನೇಮಕ ಮಾಡಿಕೊಳ್ಳಬೇಕು ಎಂದು ನ್ಯಾಯಾಲಯ ಮಧ್ಯಂತರ ಆದೇಶ ನೀಡಿದೆ. ಸರ್ಕಾರ ಒಂದು ಐತಿಹಾಸಿಕ ನಿರ್ಧಾರ ಕೈಗೊಂಡು ಹತ್ತಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಮಾನವೀಯ ದೃಷ್ಟಿಯಿಂದ ಸೇವೆಯಲ್ಲಿ ಮುಂದುವರಿಸಬೇಕೆಂದು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಹನುಮಂತೇಶ್, ರವೀಂದ್ರ, ಶಿವಣ್ಣ, ನಾಗಾರ್ಜುನ್, ಸುರೇಶ್, ನಂದೀಶ್, ಆಶಾ, ಸಂತೋಷ್ ಜಯಂತ್, ನಾಗರಾಜೇಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಮತ್ತೆ ಬಣ ರಾಜಕೀಯ ಸ್ಫೋಟ

ಸಂತೋಷಪಡುತ್ತಾರೆ. ಈ ಘೋಷಣೆ ಕೂಗುವಿಕೆ ತಳಮಟ್ಟದ ಕಾರ್ಯಕರ್ತರಲ್ಲಿ ಶಿವಕುಮಾರ್ ಬಗ್ಗೆ ಇರುವ ಸಹಜ ಪ್ರೀತಿಯ ಅಭಿವ್ಯಕ್ತಿ ಎಂದು ಬಣ್ಣಿಸಿದರು. ಸಿಎಂ ಸಿದ್ದರಾಮಯ್ಯ ಮತ್ತು ಡಿ.ಕೆ ಶಿವಕುಮಾರ್ ಇಬ್ಬರೂ ಒಗ್ಗಟ್ಟಾಗಿದ್ದೇವೆ ಎಂದು ಸಾರ್ವಜನಿಕವಾಗಿ ಸಮರ್ಥಿಸಿಕೊಂಡಿದ್ದರೂ, ಶಿವಕುಮಾರ್ ಅವರಿಗೆ ಸಿಎಂ ಹುದ್ದೆ ನೀಡಬೇಕೆಂದು ಬಹಿರಂಗವಾಗಿ ಬೆಂಬಲ ನೀಡುವ ಶಾಸಕರು ಸೇರಿದಂತೆ ಅವರ ಬೆಂಬಲಿಗರ ಹೇಳಿಕೆಗಳು ಸಿಎಂ ಹುದ್ದೆ ಬದಲಾವಣೆ ಚರ್ಚೆಯನ್ನು ಜೀವಂತವಾಗಿಸಿದೆ. ಸರ್ಕಾರ ಸ್ಥಿರವಾಗಿದೆ ಮತ್ತು ಸುಗಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳುವ ಮೂಲಕ ಹೈಕಮಾಂಡ್ ಈ ವಿಷಯವನ್ನು ತಣ್ಣಗಾಗಿಸಲು ಪ್ರಯತ್ನಿಸುತ್ತಿದೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

**ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯ**
ಮೈಸೂರು ಜಿಲ್ಲೆ – 570026 , ದೂ: 0821–2330109
ಇ–ಮೇಲ್: itstaff_ulb_srirampur@yaoo.com

ಸಂ.: ಶ್ರೀ.ಪ.ಪಂ.ಕಾ/ಆ.ಶಾ./ಟೆಂ.ಪ್ರ.02/2025–26 ದಿನಾಂಕ: 01.12.2025

**ಟೆಂಡರ್ ಪ್ರಕಟಣೆ** (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ನಿಯಮದನ್ವಯ ಕೆ.ಪಿ.ಪಿ.–ಪೋರ್ಟಲ್ ಮುಖಾಂತರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು ಬೀದಿ ನಾಯಿಗಳನ್ನು ನಿಯಂತ್ರಿಸಲು ಮತ್ತು ಪಂಚಾಯಿತಿಯಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಖಾಯಂ ಹಾಗೂ ಹೊರಗುತ್ತಿಗೆ ಪೌರಕಾರ್ಮಿಕರಿಗೆ ಸಂಪೂರ್ಣ ಆರೋಗ್ಯ ತಪಾಸಣೆ ಮಾಡಲು ಅರ್ಹ ಸಂಸ್ಥೆದಾರರು/ಗುತ್ತಿಗೆದಾರರು/ ಸರಬರಾಜುದಾರರು ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇ–ವೆಬ್‌ಸೈಟ್ https://kppp.karnataka.gov.in ಮೂಲಕ ಇಎಂಡಿ, ಗುತ್ತಿಗೆ ಮತ್ತು ಇತರೆ ಷರತ್ತುಗಳನ್ನು ಗಮನಿಸಿಕೊಳ್ಳುವುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ **www.srirampuratown.mrc.gov.in**ನಿಂದ ಪಡೆದುಕೊಳ್ಳಬಹುದು.

1) ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: **17.12.2025 ಸಂಜೆ 5.30 ಗಂಟೆಗೆ** 2) ಸ್ವೀಕೃತವಾದ ದರ ಟೆಂಡರ್ ತೆರೆಯುವ ದಿನಾಂಕ: **22.12.2025 ಪೂರ್ವಾಹ್ನ 11.00 ಗಂಟೆಗೆ.**

| ಕ್ರ. ಸಂ. | ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ ರೂ. |
|---|---|---|---|
| 01 | DMA/2025-26/SE6695 | 2.98 | 7,500/- |
| 02 | DMA/2025-26/SE6696 | 2.20 | 5,500/- |

**ಸೂಚನೆ:** ಹೆಚ್ಚಿನ ವಿವರ ಹಾಗೂ ಮಾಹಿತಿಗಳನ್ನು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– (ಮಹೇಶ್‌ಕುಮಾರ್ ಕೆ.ಎಂ.) **ಆಡಳಿತಾಧಿಕಾರಿಗಳು** ಪಟ್ಟಣ ಪಂಚಾಯಿತಿ ಶ್ರೀರಾಂಪುರ

ಸಹಿ/– (ಹೆಚ್.ಎಂ.ಸುರೇಶ) **ಮುಖ್ಯಾಧಿಕಾರಿ** ಪಟ್ಟಣ ಪಂಚಾಯಿತಿ ಶ್ರೀರಾಂಪುರ

DIPR/MYS/1317/SA/2025-26

**ಸೂತ್ರ ಫೌಂಡೇಶನ್ ಸಂಸ್ಥೆ ವತಿಯಿಂದ ಹವ್ಯಾಸಿ ಕಲಾವಿದರಿಗಾಗಿ ಆಯೋಜನೆ**

# ನಾಳೆ ದೃಶ್ಯ ರಾಗ ರಂಗ ಸಂಗಮ ತರಬೇತಿ ಕಾರ್ಯಾಗಾರ

ಮೈಸೂರು: ಮೈಸೂರಿನ ಸೂತ್ರ ಫೌಂಡೇಶನ್ ಸಂಸ್ಥೆ ವತಿಯಿಂದ ಹವ್ಯಾಸಿ ಕಲಾವಿದರಿಗಾಗಿ ಆಯೋಜಿಸಲಾಗಿದ್ದ ‘ದೃಶ್ಯ ರಾಗ ರಂಗಸಂಗಮ’ ಉಚಿತ ರಂಗ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭ ಡಿ.5ರಂದು ಸಂಜೆ 6.30ಗಂಟೆಗೆ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರ ವೇದಿಕೆಯಲ್ಲಿ ನಡೆಯಲಿದೆ ಎಂದು ಸಂಸ್ಥಾಪಕ ಕಾರ್ಯದರ್ಶಿ ಜಿ. ಜಗದೀಶ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.10ರಿಂದ ಡಿ.5ರವರೆಗೆ 18ರ ಮೇಲ್ಪಟ್ಟ ಎಲ್ಲಾ ವಯೋಮಾನದ 30 ಜನರಿಗೆ 25 ದಿನಗಳ ಕಾಲ ಬೆಂಗಳೂರಿನ ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯಗಳ ಸಹಯೋಗದಲ್ಲಿ ಅಭಿನಯ ಮತ್ತು ರಂಗಸಂಗೀತಗಳ ತರಬೇತಿಯನ್ನು ಉಚಿತವಾಗಿ ನೀಡಲಾಗಿದೆ ಎಂದರು.



ಅಂದು ಸಮಾರೋಪ ಸಮಾರಂಭದ ಉದ್ಘಾಟನೆ ನಂತರ ಸಮೂಹ ರಂಗಗೀತೆಗಳ ಗಾಯನ ಮತ್ತು ದೃಶ್ಯಾಭಿನಯ, ರಂಗಗೀತೆಗಳ ಕಾರ್ಯಕ್ರಮ ಮತ್ತು ನಾಟಕಗಳ ದೃಶ್ಯಾಭಿನಯ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ 2025ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ರಂಗಕರ್ಮಿ ಮೈಮ್ ರಮೇಶ್ ಮತ್ತು 2025ನೇ ಸಾಲಿನ ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಕೆ.ಎಸ್. ಮಧುಸೂದನ್ ಅವರನ್ನು ಅಭಿನಂದಿಸಲಾಗುವುದು ಎಂದು ತಿಳಿಸಿದರು.

ಎನ್.ಆರ್.ಫೌಂಡೇಶನ್ ಮುಖ್ಯಸ್ಥ ಆರ್. ಹರೀಶ್ ಮತ್ತು ಹಿರಿಯ ರಂಗಕರ್ಮಿ ಇಂದಿರಾ ನಾಯರ್ ಅವರು ಹೊಸ ನಾಟಕದ ಪೋಸ್ಟರ್ ಅನ್ನು ಬಿಡುಗಡೆ ಮಾಡಲಿದ್ದಾರೆ. ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ಮತ್ತು ರಂಗ ತಂತ್ರಜ್ಞರಿಗೆ ಗೌರವ ಸಮರ್ಪಣೆ ನೀಡಲಾಗುವುದು ಎಂದರು.

ಸಮಾರೋಪ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಬೆಂಗಳೂರು ಎನ್ಎಸ್‌ಡಿ ಕೇಂದ್ರ ನಿರ್ದೇಶಕರಾದ ಡಾ.ವೀಣಾ ಶರ್ಮ ಭೂಸನೂರ ಮಠ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾದ ಎ.ಎಸ್. ಚಂದ್ರಶೇಖರ್, ಡಾ.ರವೀಂದ್ರನಾಥ ಸಿರಿವರ, ರಂಗನಿರ್ದೇಶಕ ದಿನೇಶ್ ಚಮ್ಮಾಳಿಗೆ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿ ಚಂದ್ರಶೇಖರ ಆಚಾರ್ ಹೆಗ್ಗೊತಾರ, ದಿನೇಶ್ ಚಮ್ಮಾಳಿಗೆ, ಹೇಮಂತ್ ನಾಗರಾಜ್, ಶಿಬಿರಾರ್ಥಿಗಳಾದ ಅಂಜನಾ ಮಲ್ಲೇಶ್, ಶ್ವೇತಾ ಉಪಸ್ಥಿತರಿದ್ದರು.

# ರೈತರ ಸೋಲಾರ್ ನೀರಾವರಿ ಪಂಪ್‌ಸೆಟ್‌ಗೆ ಶೇ.80 ಸಬ್ಸಿಡಿ



ಮೈಸೂರು: ಹಗಲು ವೇಳೆಯಲ್ಲಿ ನೀರಾವರಿಗೆ ವಿದ್ಯುತ್ ಸೌಕರ್ಯವನ್ನು ಒದಗಿಸುವ ಮಹತ್ವಾಕಾಂಕ್ಷಿ ಪಿ.ಎಂ. ಕುಸುಮ್-ಬಿ ಯೋಜನೆಯಡಿ ಸೋಲಾರ್ ಪಂಪ್-ಸೆಟ್ ಪಡೆದುಕೊಳ್ಳಲು ಕೃಷಿಕರಿಂದ ಅರ್ಜಿ ಆಹ್ವಾನಿಸಲಾಗಿದೆ.


ಸೌರಶಕ್ತಿ ಬಳಕೆ ಹೆಚ್ಚಿಸಲು ಹಲವು ಕ್ರಮಗಳನ್ನು ಕೈಗೊಂಡಿರುವ ಕರ್ನಾಟಕ ಸರ್ಕಾರವು ರೈತರು ಸೋಲಾರ್ ಪಂಪ್‌ಸೆಟ್ ಅಳವಡಿಕೆ ಮಾಡಿಕೊಳ್ಳಲು 'ಕುಸುಮ್ ಬಿ' ಯೋಜನೆ ಅನುಷ್ಠಾನಗೊಳಿಸಿದೆ. ಈ ಯೋಜನೆಯಡಿ ರೈತರು ಸಬ್ಸಿಡಿ ದರದಲ್ಲಿ ಸೋಲಾರ್ ಪಂಪ್‌ಸೆಟ್ ಅಳವಡಿಕೆ ಮಾಡಿಕೊಳ್ಳಬಹುದು. ಇದರಿಂದಾಗಿ ಸಾಂಪ್ರದಾಯಿಕ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆಯಾಗಲಿದೆ. ಕುಸುಮ್-ಬಿ ಯೋಜನೆ ಅಡಿಯಲ್ಲಿ ನೀರಾವರಿಗೆ ಸಾಂಪ್ರದಾಯಿಕ ವಿದ್ಯುತ್ ಅವಲಂಬನೆಯನ್ನು ಕಡಿಮೆ ಮಾಡಿ, ಸೌರಶಕ್ತಿಯ ಬಳಕೆ ಮೂಲಕ ರೈತರು ಸ್ವಾವಲಂಬನೆ ಸಾಧಿಸಲು ರೂಪಿಸಲಾಗಿದೆ. ಆ ಮೂಲಕ ಕೃಷಿ ಕ್ಷೇತ್ರವನ್ನು ಲಾಭದಾಯಕವಾಗಿಸಲು, ಸೌರಶಕ್ತಿ ಬಳಕೆಯ ಉತ್ತೇಜನಕ್ಕೆ ಶೇ.80ರಷ್ಟು ಸಹಾಯಧನ ನೀಡಲಾಗುತ್ತಿದೆ. ಕುಸುಮ್-ಬಿ ಯೋಜನೆಯಡಿ ಜಾಲ ಮುಕ್ತ ಸೌರ ಕೃಷಿ ಪಂಪ್‌ಸೆಟ್ ಅಳವಡಿಸಲು ಒತ್ತು ನೀಡಲಾಗಿದೆ. ಈ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರ ಶೇ.50, ಕೇಂದ್ರ ಸರ್ಕಾರ ಶೇ.30 ಮತ್ತು ಫಲಾನುಭವಿಗಳು ಶೇ.20 ಮೊತ್ತವನ್ನು ಪಾವತಿಸಬೇಕಿದೆ. ರಾಜ್ಯದಲ್ಲಿ ಎಂಎನ್‌ಆರ್‌ಇ ಮತ್ತು ಕೆಆರ್‌ಇಡಿಎಲ್ ಸಹಯೋಗದೊಂದಿಗೆ ರೈತರ ಜಮೀನಿನ ಕೊಳವೆ/ತೆರೆದ ಬಾವಿಗಳಿಗೆ ಸೋಲಾರ್ ಪಂಪ್-ಸೆಟ್‌ಗಳನ್ನು ಅಳವಡಿಸಲು ರೈತರಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕವಾಗಿ www.souramitra.com ವೆಬ್‌ಸೈಟ್‌ನಲ್ಲಿ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.



ಸದರಿ ಪೋರ್ಟಲ್ ಮೂಲಕ ಸೋಲಾರ್ ಪಂಪ್-ಸೆಟ್‌ಗಳ ಅಳವಡಿಕೆಗಾಗಿ ರೈತರು www.souramitra.com ಪೋರ್ಟಲ್‌ನಲ್ಲಿ ಅರ್ಜಿ ನೋಂದಾಯಿಸಿ, ವೆಂಡರ್/ಏಜೆನ್ಸಿಯನ್ನು ಆಯ್ಕೆ ಮಾಡಿಕೊಂಡು ಶೇ.20ಹಣ ವನ್ನು ಪಾವತಿಸಬೇಕಿದೆ.

ರೈತರಿಗೆ ತಿಳಿಸುವುದೇನೆಂದರೆ, ಪಿಎಂ ಕುಸುಮ್-ಬಿ ಯೋಜನೆಗೆ ಸಂಬಂಧಿಸಿದಂತೆ, www.kreld.karnataka.gov.in ವೆಬ್‌ಸೈಟ್‌ನಲ್ಲಿ ಹೊರಡಿಸಿದ ಪ್ರಕಟಣೆ/ಮಾಹಿತಿಗಳನ್ನು ಮಾತ್ರ ಪರಿಗಣಿಸಲು ಕೋರಲಾಗಿದೆ. ಸೌರ ಪಂಪ್ ಸೆಟ್ ನೋಂದಣಿ ಹಾಗೂ ಪಾವತಿಗೆ ಸಂಬಂಧಿಸಿದಂತೆ www.souramitra.com ನಲ್ಲಿ ಹಾಗೂ ಕೆಆರ್‌ಇಡಿಎಲ್ ನ ಸಹಾಯವಾಣಿ 080-22202100,8095132100 ಮುಖಾಂತರ ಅಥವಾ ಹತ್ತಿರದ ಚಾವಿಸನಿನಿ ಕಚೇರಿ/ಅಧಿಕಾರಿಗಳನ್ನು ಸಂಪರ್ಕಿಸಬಹುದು. ಸದರಿ ನೋಂದಣಿ ಪ್ರಕ್ರಿಯೆಯಲ್ಲಿ ಸ್ವೀಕೃತವಾಗುವ ಒಟಿಪಿಗಳನ್ನು ಯಾರೊಂದಿಗೂ ಹಂಚಿಕೊಳ್ಳದೆ ತಾವೇ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ) ದೂರವಾಣಿ 9449598669 ಸಂಪರ್ಕಿಸಬಹುದಾಗಿದೆ.

> ರೈತರಿಗೆ ಹಗಲು ವೇಳೆಯಲ್ಲಿ ಸೋಲಾರ್ ಪಂಪ್‌ಸೆಟ್ ಮೂಲಕ ನೀರಾವರಿ ಸೌಕರ್ಯವನ್ನು ಒದಗಿಸುವಲ್ಲಿ ಕುಸುಮ್-ಬಿ ಯೋಜನೆ ಮಹತ್ವದ್ದಾಗಿದೆ. *ಈ ಯೋಜನೆಯಲ್ಲಿ ರೈತರಿಗೆ ಶೇ.80 ಸಬ್ಸಿಡಿ ಸಿಗಲಿದೆ.* ಈ ಯೋಜನೆ ಡಿಸೆಂಬರ್ ತಿಂಗಳಲ್ಲಿ ಕೊನೆಗೊಳ್ಳುವುದರಿಂದ ರೈತರು ಕೂಡಲೇ ಈ ಯೋಜನೆಯನ್ನು ಸದುಪಯೋಗ ಮಾಡಿಕೊಳ್ಳಬೇಕಿದೆ.
>
> ▶▶ **ಕೆ.ಎಂ.ಮುನಿಗೋಪಾಲ್ ರಾಜು** ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ



## ಕೃಷ್ಣ ವಂದನ



ಸ್ನೇಹಾ ಆನಂದ್

### ಹೇ ಕೃಷ್ಣಾ !

**ಈಗ ಬರುವೆನೆಂದು ಪೋದೆ**
**ಎಲ್ಲಿ ನೀ ಮರೆಯಾದೆ!**
**ಜಗದೋದ್ಧಾರಕ , ಜಗನಿಯಾಮಕ**
**ಜಗದ ರಕ್ಷಕ , ರಕ್ಕಸರ ಶಿಕ್ಷಕ!**

**ಮುರಲಿಯನು ಧರಿಸಿ ಮಂದಹಾಸವ**
**ಬೀರಿ, ಈ ರಾಧೆಯ ಮನವನು ಕದ್ದು , ಎತ್ತ**
**ಪೋದೆ**
**ಸದ್ದು ಮಾಡದೆ ಕೃಷ್ಣಾ !**

**ಯಾದವರು ಕಾದಿಹರು**
**ಯಾವ ಹಾದಿಗೆ ಪೋದೆ ಎಂದು,**
**ಹಸುಗಳು ಅರಸುತಿಹವು ಗೋಕುಲದಲಿ**
**ಗೋವಿಂದ, ಗೋಪಾಲ ಎಲ್ಲಿಹನೆಂದು!**

**ಅಮ್ಮ ಮರಗುವಳು,**
**ಗೊಲ್ಲರು ಕೊರಗುವರು,**
**ಗೋವುಗಳು ಸೊರಗುವವು ನೀನಿಲ್ಲದೇ**
**ಬಂದು ಬಿಡುಬೇಗ ಹೇ ಗೋಪಾಲನೇ !**

7ರಂದು ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ

## ನಿಷೇಧಾಜ್ಞೆ ಹೊರಡಿಸಿ ಜಿಲ್ಲಾಧಿಕಾರಿ ಆದೇಶ

ಚಾಮರಾಜನಗರ, ಕರ್ನಾಟಕ ಶಿಕ್ಷಕರ ಅರ್ಹತಾ (ಕೆಎಆರ್‌ಟಿಇಟಿ-2025) ಪರೀಕ್ಷೆಯು ಡಿಸೆಂಬರ್ 7ರಂದು ಚಾಮರಾಜನಗರ ಪಟ್ಟಣದ 14 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕಾರ್ಯವು ನ್ಯಾಯೋಚಿತವಾಗಿ, ಶಾಂತಿ ಸುವ್ಯವಸ್ಥೆಯಿಂದ ನಡೆಯಲು ಹಾಗೂ ಪರೀಕ್ಷಾ ಅಕ್ರಮಗಳನ್ನು ತಡೆಯಲು ಪರೀಕ್ಷಾ ಕೇಂದ್ರಗಳ ಸುತ್ತಲಿನ 200ಮೀ ವ್ಯಾಪ್ತಿಯ ಪ್ರದೇಶದಲ್ಲಿ ಬೆಳಿಗ್ಗೆ 6 ರಿಂದ ಸಂಜೆ 5 ಗಂಟೆಯವರೆಗೆ 'ಸಾರ್ವಜನಿಕ ನಿಷೇಧಿತ ಪ್ರದೇಶ' ಎಂದು ಘೋಷಿಸಿ ನಿಷೇಧಾಜ್ಞೆ ಹೊರಡಿಸಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಆದೇಶಿಸಿದ್ದಾರೆ.

ನಗರದ ಸತ್ತಿ ರಸ್ತೆಯಲ್ಲಿರುವ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌ.ಶಾ.ವಿ), ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌ.ಶಾ.ವಿ), ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯೂನಿವರ್ಸಲ್ ಪ್ರೌಢಶಾಲೆ, ನಗರದ ಜೆ.ಎಸ್.ಎಸ್ ಬಾಲಕರ ಪ್ರೌಢಶಾಲೆ, ಜೆ.ಎಸ್.ಎಸ್ ಬಾಲಕಿಯರ ಪ್ರೌಢಶಾಲೆ, ಜೆ.ಎಸ್.ಎಸ್ ಪದವಿಪೂರ್ವ ಕಾಲೇಜು, ಶ್ರೀ ರಾಮಚಂದ್ರ ಪ್ರೌಢಶಾಲೆ, ಸೋಮವಾರಪೇಟೆಯ ಎಂ.ಸಿ.ಎಸ್ ಪ್ರೌಢಶಾಲೆ, ಚೆನ್ನಿಪುರದ ಮೋಳೆ ರಸ್ತೆಯಲ್ಲಿರುವ ಸೇವಾಭಾರತಿ ಪದವಿ ಪೂರ್ವ ಕಾಲೇಜು, ಸೇವಾಭಾರತಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ರೈಲ್ವೆ ನಿಲ್ದಾಣದ ಹತ್ತಿರವಿರುವ ಸಂತಪೌಲರ ಪ್ರೌಢಶಾಲೆ, ಬೈಪಾಸ್ ರಸ್ತೆಯ ಬಂಜಾರ ಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಬಂಜಾರ ಇಂಡಿಯನ್ ಶಾಲೆ, ಸಿದ್ದಾರ್ಥ ನಗರದಲ್ಲಿರುವ ಸಂತ ಜೋಸೆಫರ ಪ್ರೌಢಶಾಲೆಗಳು ಪರೀಕ್ಷಾ ಕೇಂದ್ರಗಳಾಗಿವೆ. ಡಿಸೆಂಬರ್ 7ರಂದು ಪರೀಕ್ಷಾ ಕೇಂದ್ರಗಳ ಸುತ್ತಾ 200ಮೀ ವ್ಯಾಪ್ತಿಯ ಪ್ರದೇಶದಲ್ಲಿ ಬರುವ ಜೆರಾಕ್ಸ್ ಮತ್ತು ಕಂಪ್ಯೂಟರ್ ಅಂಗಡಿಗಳನ್ನು ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಮುಚ್ಚುವಂತೆ ಆದೇಶಿಸಲಾಗಿದೆ. ಈ ಆದೇಶವು ಪರೀಕ್ಷಾ ಕೆಲಸಕ್ಕೆ ಸಿಬ್ಬಂದಿಗೆ ಮತ್ತು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

## ವನ್ಯಜೀವಿ-ಮಾನವ ಸಂಘರ್ಷ ನಿಯಂತ್ರಣಕ್ಕೆ ಆಧುನಿಕ ತಂತ್ರಜ್ಞಾನ ಬಳಕೆ: ಸಚಿವರಾದ ಈಶ್ವರ ಖಂಡ್ರೆ

ಚಾಮರಾಜನಗರ, ಅರಣ್ಯ ಕ್ಷೀಣಿಸುತ್ತಿದ್ದು, ವನ್ಯಜೀವಿಗಳ ಸಂಖ್ಯೆಯಲ್ಲಿ ಹೆಚ್ಚಳ ಆಗುತ್ತಿರುವುದು ಮಾನವ-ವನ್ಯಜೀವಿ ಸಂಘರ್ಷಕ್ಕೆ ಕಾರಣವಾಗಿದ್ದು, ಅತ್ಯಾಧುನಿಕ ತಂತ್ರಜ್ಞಾನದ ಬಳಕೆ ಹಾಗೂ ಸಹಬಾಳ್ವೆಯಿಂದ ಮಾತ್ರ ಇದರ ನಿಯಂತ್ರಣ ಸಾಧ್ಯ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಕೊಳ್ಳೇಗಾಲದ ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ಅರಣ್ಯ ಇಲಾಖೆಯ ಕಚೇರಿ ಆವರಣದಲ್ಲಿ ಸಮಗ್ರ ಕಮಾಂಡ್ ಸೆಂಟರ್ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಗಸ್ತು ಹೆಚ್ಚಳದ ಮೂಲಕ ಹಾಗೂ ಅರಣ್ಯದಂಚಿನ ಜನರಲ್ಲಿ ಸಹಬಾಳ್ವೆಯ ಬಗ್ಗೆ ಅರಿವು ಮೂಡಿಸುವ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದ್ದು, ಈ ನಿಟ್ಟಿನಲ್ಲಿ ಕಮಾಂಡ್ ಕೇಂದ್ರ ಒಂದು ಯಶಸ್ವಿ ಪರಿಹಾರ ಆಗಲಿದೆ ಎಂದರು.



ಪ್ರಸ್ತುತ ನಾಗರಹೊಳೆ, ಎಂ.ಎಂ.ಹಿಲ್ಸ್, ಕಾಳಿ, ಮಡಿಕೇರಿ ಸೇರಿ ನಾಲ್ಕು ಕಡೆಗಳಲ್ಲಿ ಕಮಾಂಡ್ ಕೇಂದ್ರ ಸಿದ್ಧವಾಗಿದ್ದು ಸಿಬ್ಬಂದಿಗೆ ತರಬೇತಿಯನ್ನೂ ನೀಡಲಾಗಿದೆ. ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಿರುವ ಚಿಕ್ಕಮಗಳೂರು ವಿಭಾಗ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಮೈಸೂರು ವಿಭಾಗ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ ಹಾಗೂ ಹಾಸನ ವಲಯದಲ್ಲಿ ಕಮಾಂಡ್ ಸೆಂಟರ್ ತೆರೆಯಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ರಾಜ್ಯ ಮಟ್ಟದ ಕೇಂದ್ರ ಸಿದ್ಧವಾಗುತ್ತಿದ್ದು, ಅಧಿವೇಶನದ ನಂತರ ಇದನ್ನು ಉದ್ಘಾಟಿಸಲಾಗುವುದು ಎಂದು ಸಚಿವರು ತಿಳಿಸಿದರು. ಕೃತಕ ಬುದ್ಧಿಮತ್ತೆಯ (ಎ.ಐ) ಕ್ಯಾಮರಾ, ಥರ್ಮಲ್ ಡ್ರೋನ್ ಕ್ಯಾಮರಾ ಇತ್ಯಾದಿಗಳನ್ನು ಬಳಸಿ ವನ್ಯಜೀವಿಗಳ ಚಲನ ವಲನದ ಬಗ್ಗೆ ನಿಗಾ ಇಟ್ಟು, ಯಾವ ಕಾಡಿನಂಚಿನ ಗ್ರಾಮದ ಬಳಿ ವನ್ಯಜೀವಿ ಇದೆ ಎಂಬ ಬಗ್ಗೆ ತತ್ ಕ್ಷಣ ಮಾಹಿತಿ ನೀಡಿದರೆ ಅಮೂಲ್ಯ ಜೀವಹಾನಿ ತಡೆಯಬಹುದು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಕಚೇರಿಯಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಕಮಾಂಡ್ ಸೆಂಟರ್ ಮಾಹಿತಿ ನೀಡಿದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ರಾಜನ್, ಈ ತಂತ್ರಾಂಶದಲ್ಲಿ ಯಾವ ಸಿಬ್ಬಂದಿ ಎಷ್ಟು ಹೊತ್ತಿನಲ್ಲಿ ಯಾವ ವಲಯದಲ್ಲಿ ಗಸ್ತಿನಲ್ಲಿದ್ದರು ಎಂಬ ಮಾಹಿತಿ ಲಭಿಸಲಿದೆ. ಅದೇ ರೀತಿ ವನ್ಯಜೀವಿಗಳು ನಾಡಿನತ್ತ ಬಂದಾಗ ಸಕಾಲಿಕ ಮಾಹಿತಿ ಪಡೆದು ಕಾಡಿನಂಚಿನ ಜನರಿಗೆ ವಾಟ್ಸ್ ಅಪ್ ಮತ್ತು ಇತರ ಮಾಧ್ಯಮಗಳ ಮೂಲಕ ಮಾಹಿತಿ ನೀಡಲು ಕಮಾಂಡ್ ಸೆಂಟರ್ ಮಹತ್ವದ ಪಾತ್ರ ವಹಿಸಲಿದೆ ಎಂದರು. ಕಮಾಂಡ್ ಸೆಂಟರ್ ಉದ್ಘಾಟನಾ ಸಮಾರಂಭದಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾದಿಕಾರದ ಅಧ್ಯಕ್ಷರಾದ ಎಚ್.ವಿ.ಚಂದ್ರು,ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಲ್ಲಾ ಪಂಚಾಯತ್ ಸಿಇಓ ಮೋನಾ ರೌತ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್, ಡಿ.ಸಿಎಫ್. ಭಾಸ್ಕರ್ ಮತ್ತಿತರರು ಪಾಲ್ಗೊಂಡಿದ್ದರು.

# ಸರಳ ವಿವಾಹ ಜೋಡಿಗೆ 50 ಸಾವಿರ ರೂ.: ತನ್ವೀರ್ ಸೇಠ್

## ಸರಳ ವಿವಾಹದ ಪ್ರೋತ್ಸಾಹಧನ ಕಾರ್ಯಕ್ರಮದ ಸಭೆ

ಮೈಸೂರು: ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದವರ ಸರಳ ವಿವಾಹಕ್ಕೆ ಪ್ರತಿ ಜೋಡಿಗೆ 50,000/-ರೂ. ಸಹಾಯಧನ ನೀಡಲಾಗುವುದು ಎಂದು ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸರಳ ವಿವಾಹದ ಪ್ರೋತ್ಸಾಹಧನ ಕಾರ್ಯಕ್ರಮದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಗೆ 150ಗುರಿ ನಿಗದಿಪಡಿಸಲಾಗಿದ್ದು, ಸರಳ ವಿವಾಹ ಯೋಜನೆಯನ್ನು ಅರ್ಹ ಫಲಾನುಭವಿಗಳನ್ನು ಗುರುತಿಸಬೇಕು. ಅರ್ಜಿ ಸಲ್ಲಿಸುವ ಅಲ್ಪಸಂಖ್ಯಾತ ವಧುವಿಗೆ ಕನಿಷ್ಠ 18 ವರ್ಷದಿಂದ ಗರಿಷ್ಠ 42 ವರ್ಷಗಳು ಹಾಗೂ ವರನಿಗೆ ಕನಿಷ್ಠ 21 ವರ್ಷದಿಂದ ಗರಿಷ್ಠ 45 ವರ್ಷ ವಯಸ್ಸಾಗಿರಬೇಕು. ಯಾವುದೇ ಬಾಲ್ಯವಿವಾಹಕ್ಕೆ ಆಸ್ಪದ ಕೊಡದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ ವಯೋಮಿತಿಯ ಬಗ್ಗೆ ಪರಿಶೀಲಿಸುವಾಗ ಕಡ್ಡಾಯವಾಗಿ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ಜನನ ಪ್ರಮಾಣ ಪತ್ರದ ಮೂಲಕ ಮಾಡಿ. ವಿವಾಹದ ನೋದಣಿಗೆ ನೋದಣಾಧಿಕಾರಿಗಳ ಕಚೇರಿಯೊಂದಿಗೆ ಸಮನ್ವಯ ಸಾಧಿಸಿ ವಿವಾಹದ ಸಂದರ್ಭದಲ್ಲಿ ನೋದಣಿಗೆ ಕ್ರಮ ಕೈಗೊಳ್ಳಿ ಎಂದರು. ಸಭೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಅಸೀಫ್, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಶಿಲ್ಪ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ಎಸ್.ಹೆಚ್.ನಿರ್ಮಲಾ ಸೇರಿ ಇತರರು ಉಪಸ್ಥಿತರಿದ್ದರು.



### ಫಲಾನುಭವಿಗಳ ಗುರುತಿಸಲು ಹೆಚ್ಚಿನ ಶ್ರಮ ವಹಿಸಿ

**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಈ ಯೋಜನೆಗಾಗಿ ಫಲಾನುಭವಿಗಳನ್ನು ಗುರುತಿಸಲು ಹೆಚ್ಚಿನ ಶ್ರಮ ವಹಿಸಿ ಕೆಲಸ ನಿರ್ವಹಿಸಬೇಕು. ತಂದೆ ಅಥವಾ ತಾಯಿ ಇಲ್ಲದ ವಧುವನ್ನು ಗುರುತಿಸಿ ಸರಳ ವಿವಾಹ ಯೋಜನೆಯ ಸವಲತ್ತು ಒದಗಿಸಿ ದರೆ ಯೋಜನೆ ಹೆಚ್ಚಿನ ಸಾರ್ಥಕತೆ ಪಡೆಯುತ್ತದೆ. ಅಲ್ಪಸಂಖ್ಯಾತ ಸಮುದಾಯದಡಿ ಬರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಹಾಗೂ ಪಾರ್ಸಿ ಅವರಿಗೆ ಸರಳ ವಿವಾಹ ಯೋಜನೆಯಡಿ ಗುರಿ ನಿಗದಿ ಮಾಡಿ ಅರ್ಜಿ ಆಹ್ವಾನಿಸಿ ಹೆಚ್ಚಿನ ಪ್ರಚಾರ ನೀಡಿ ಕೆಲವು ಸಮುದಾಯದಿಂದ ಅರ್ಜಿ ಬರದೇ ಇದ್ದಲ್ಲಿ ನಂತರ ಬೇರೆ ಸಮುದಾಯಕ್ಕೆ ಹೆಚ್ಚುವರಿಯಾಗಿ ನೀಡುವುದು ಉತ್ತಮ ಎಂದರು. ಸರಳ ವಿವಾಹ ಯೋಜನೆಯಡಿ ಅರ್ಜಿ ಸ್ವೀಕೃತಿಯಾದ ನಂತರ ವಧು ಹಾಗೂ ವರ ನೀಡಿರುವ ವಯಸ್ಸಿನ ದಾಖಲಾತಿಗಳನ್ನು ಪರಿಶೀಲಿಸಿ ಹಾಗೂ ಅವರು ವಾಸವಿರುವ ಸ್ಥಳಕ್ಕೆ ಭೇಟಿ ಮಾಡಿ ವರನಿಗೆ ಜೀವಂತ ಪತ್ನಿ ಹಾಗೂ ವಧುವಿಗೆ ಜೀವಂತ ಪತಿ ಇಲ್ಲದಿರುವುದನ್ನು ಖಾತ್ರಿ ಪಡಿಸಿಕೊಂಡು ನಂತರ ಯೋಜನೆಯ ಸೌಲಭ್ಯ ಒದಗಿಸಿಕೊಡಿ ಎಂದರು.**

## ಡಿ.6ರಿಂದ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್

ಮೈಸೂರು: ಸದ್ವಿದ್ಯಾ ಶಿಕ್ಷಣ ಸಂಸ್ಥೆ, ಕಾವೇರಿ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರ್ ಸೈನ್ಸ್ ಫೌಂಡೇಷನ್ ವತಿಯಿಂದ ಡಿ.6 ಮತ್ತು 7 ರಂದು ವಿಜಯನಗರ 2ನೇ ಹಂತದಲ್ಲಿರುವ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನಲ್ಲಿ ವಿಜ್ಞಾನ ಮತ್ತು ಗಣಿತೋತ್ಸವ ಆಯೋಜಿಸಲಾಗಿದೆ ಎಂದು ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರೊ.ಎಂ.ಎಸ್.ಕೆ.ನರಹರಿ ಬಾಬು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ. 6ರಂದು ಬೆಳಗ್ಗೆ 10.30ಕ್ಕೆ ವಿಶ್ರಾಂತ ಪ್ರಾಧ್ಯಾಪಕ ಡಾ.ಎಸ್.ಭಾರ್ಗವ ಗಣಿತೋತ್ಸವ, ಬಿಎಆರ್‌ಸಿ ವಿಶ್ರಾಂತ ಕಾರ್ಯ ನಿರ್ವಾಹಕ ನಿರ್ದೇಶಕ ಎನ್.ರಾಮಮೋಹನ್ ವಿಜ್ಞಾನೋತ್ಸವ ಚಾಲನೆ ನೀಡಲಿದ್ದಾರೆ ಎಂದರು. ಮುಖ್ಯ ಅತಿಥಿಗಳಾಗಿ ಚಂದ್ರಯಾನ-3 ಯೋಜನೆಯ ಉಪ ನಿರ್ದೇಶಕಿ ಎಂ.ವಿ.ರೂಪ ಡಿಡಿಪಿಐ ಡಿ.ಉದಯಕುಮಾರ್, ಸದ್ವಿದ್ಯಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ವಿ.ಎಸ್.ಎಸ್ ಶಾಸ್ತ್ರಿ, ನಿವೃತ್ತ ವಿಜ್ಞಾನಿ ಡಾ.ಟಿ.ತಿಪ್ಪೇಸ್ವಾಮಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ತಿಳಿಸಿದರು. ಮೈಸೂರು ಸೈನ್ಸ್ ಫೌಂಡೇಷನ್ ಪ್ರಧಾನ ಕಾರ್ಯದರ್ಶಿ ಜಿ.ಬಿ.ಸಂತೋಷ್ ಕುಮಾರ್ ಮಾತನಾಡಿ, ಇಸ್ರೋ ಸಂಸ್ಥೆಯ ಗಾಲಿಗಳ ಮೇಲೆ ಬಾಹ್ಯಾಕಾಶ ಸಂಚಾರಿ ಬಸ್, ಸಂಚಾರಿ ತಾರಾಲಯ- 3 ಡಿ ವಿಡಿಯೋ ಪ್ರದರ್ಶನ, ಯುವರಾಜ ಕಾಲೇಜು ಆಹಾರ ಮತ್ತು ಪೌಷ್ಠಿಕ ವಿಭಾಗದಿಂದ ಆಹಾರ ಕಲಬೆರೆಕೆ ಪ್ರಾತ್ಯಕ್ಷಿಕೆ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಿಂದ ಮಾನವನ ಅಂಗಾಂಗಗಳ ಮಾದರಿ ಪ್ರದರ್ಶನ, ಅಂಚೆ ಇಲಾಖೆಯಿಂದ ವಿವಿಧ ಪ್ರದರ್ಶನ ಮೊದಲಾದವು ಪ್ರಮುಖ ಆಕರ್ಷಣೆಗಳಾಗಿವೆ. ಡಿ. 7 ರಂದು ಬೆಳಗ್ಗೆ 10 ಗಂಟೆಯಿಂದ 5 ರಿಂದ 8 ನೆ ತರಗತಿ ವಿದ್ಯಾರ್ಥಿಗಳಿಗೆ ಭಾರತದಲ್ಲಿ ಕಂಡು ಬರುವ ಚಿಟ್ಟೆ ವಿಷಯ ಕುರಿತ ಪೋಸ್ಟ್ ಕಾರ್ಡ್ ಚಿತ್ರ ರಚನೆ ಆಯೋಜಿಸಲಾಗಿದೆ ಎಂದು ವಿವರಿಸಿದರು. ಗೋಷ್ಠಿಯಲ್ಲಿ ಎಂ.ಡಿ.ಗೋಪಿನಾಥ್, ಡಾ.ಟಿ.ತಿಪ್ಪೇಸ್ವಾಮಿ ಇದ್ದರು.



## ಪುನರ್ವಸತಿ ಕೇಂದ್ರ ಉದ್ಘಾಟನೆ

ಚಾಮರಾಜನಗರ, ನಗರದ ಹೊರವಲಯದ ಸಿಮ್ಸ್ ಬೋಧನಾ ಆಸ್ಪತ್ರೆಯಲ್ಲಿ ನಿರ್ಮಿಸಿರುವ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

30 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ವಿಕಲಚೇತನರ ಪುನರ್ವಸತಿ ಕೇಂದ್ರವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿ ಶುಭ ಕೋರಿದರು. ಈ ವೇಳೆ ಮಾತನಾಡಿದ ಅವರು ಪುನರ್ವಸತಿ ಕೇಂದ್ರ ದಲ್ಲಿ ವಿಕಲಚೇತನರಿಗೆ ಕೃತಕ ಅಂಗಾಗಗಳನ್ನು ಜೋಡಣೆ ಮಾಡುವುದು, ದುರಸ್ತಿಪಡಿಸುವುದು, ಯುಡಿಐಡಿ ಕಾರ್ಡ್ ವಿತರಣೆ ಸೇರಿದಂತೆ ಇತರೆ ಕಾರ್ಯಗಳಿಗೆ ಅನುಕೂಲವಾಗಿದೆ ಎಂದು ತಿಳಿಸಿದರು.

ವಿಕಲಚೇತನರಿಗೆ ಪುನರ್ ವಸತಿ ಕಲ್ಪಿಸುವುದರ ಜೊತೆಗೆ ವಿಕಲಚೇತನರಿಗೆ ಫಿಜಿಯೋಥೆರಪಿ, ಆಡಿಯಾಲಜಿ ಸೇರಿದಂತೆ ಇತರೆ ಹಲವು ಸೌಲಭ್ಯಗಳು ಪುನರ್ವಸತಿ ಕೇಂದ್ರದಲ್ಲಿ ಲಭ್ಯವಿರಲಿದೆ. ಪುನರ್ವಸತಿ ಕೇಂದ್ರವು ಪ್ರಮುಖವಾಗಿ ವಿಕಲಚೇತನರ ಕ್ಷೇಯೋಭಿವೃದ್ಧಿಗಾಗಿ ಕಾರ್ಯ ನಿರ್ವಹಿಸಲಿದೆ ಎಂದು ಹೇಳಿದರು.



ಈ ಸಂದರ್ಭದಲ್ಲಿ ಸಿಮ್ಸ್ ಡೀನ್ ಡಾ. ಮಂಜುನಾಥ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಡಿಡಿ ಸುರೇಶ್, ಅಂಗವಿಕಲರ ಇಲಾಖೆಯ ಅಧಿಕಾರಿ ಡಾ.ಮಂಜುನಾಥ್, ಡಿಎಸ್ ಚಿನಭೋವಿ, ಆರ್‌ಎಂಒ ಯೋಗೇಶ್, ಡಿಡಿಆರ್‌ಸಿ ಪ್ರಭುಸ್ವಾಮಿ, ನಿರ್ಮಿತಿ ಕೇಂದ್ರದ ಭೀಮಸಾಗರ್, ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಮೇಶ್, ರೂಪೇಶ್, ಕೃಷ್ಣಮೂರ್ತಿ, ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

## ಭಾಷೆಯ ಬಗ್ಗೆ ಅಭಿಮಾನ ಅವಶ್ಯಕ

ಗುಂಡ್ಲುಪೇಟೆ: ಮಾತೃಭಾಷೆಯ ಮೇಲೆ ಭಾಷಾಭಿಮಾನ ಬೆಳೆಸಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯಾಲಯದ ನ್ಯಾಯಾಧೀಶ ಬಸವರಾಜ್ ತಳವಾರ್ ಅಭಿಪ್ರಾಯಪಟ್ಟರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ ದಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಗಡಿನಾಡು ಗುಂಡ್ಲುಪೇಟೆಯಂತಹ ಸಣ್ಣ ಪಟ್ಟಣಗಳಲ್ಲಿ ಪರ ಭಾಷಿಕರ ಸಂಖ್ಯೆ ಸಹಜವಾಗಿ ಹೆಚ್ಚಾಗುತ್ತದೆ. ಆದರೆ ನಾವು ಭಾಷಾಭಿಮಾನ ಬೆಳೆಸಿಕೊಂಡಾಗ ಮಾತ್ರ ನಮ್ಮ ಮಾತೃಭಾಷೆ ಮತ್ತಷ್ಟು ಎತ್ತರಕ್ಕೆ ಏರುತ್ತದೆ ಎಂದು ತಿಳಿಸಿದರು.

> ▶▶ **ನ್ಯಾಯಾಧೀಶ ಬಸವರಾಜ್ ತಳವಾರ್ ಹೇಳಿಕೆ**
>
> ▶▶ **ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ**

ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಎಂ.ಟಿ.ದೀಪು ಮಾತನಾಡಿ, ಪರಭಾಷೆಯ ಮೇಲಿನ ಮೋಹ ಕಡಿಮೆಯಾದಾಗ ಮಾತ್ರ ನಮ್ಮ ಭಾಷೆಯ ಮೇಲಿನ ಅಭಿಮಾನ ಹೆಚ್ಚುತ್ತದೆ ಎಂದರು. ಹಾಗೆಯೇ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಎಂಬ ಗೀತೆಯನ್ನು ಸಹ ಹಾಡಿ ರಂಜಿಸಿದರು.



ಈ ಸಂದರ್ಭದಲ್ಲಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಗಿರೀಶ್, ವೃತ್ತ ನಿರೀಕ್ಷಕ ಜಯಕುಮಾರ್, ಶಿರಸ್ತೇದಾರ್ ಶಬ್ಬೀರ್ ಅಲಿ, ರಾಘವೇಂದ್ರ, ಮನುಶ್ಯಾನುಭೋಗ್, ವಕೀಲರು, ನ್ಯಾಯಲಯದ ಸಿಬ್ಬಂದಿಗಳು, ಪೋಲೀಸರು ಹಾಜರಿದ್ದರು.

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ

## ಸಹಾಯಧನ ವಿವರ

ರಾಮನಗರ: ತೋಟಗಾರಿಕೆ ಇಲಾಖೆಯ ವತಿಯಿಂದ 2025-26 ನೇ ಸಾಲಿನ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ತೋಟಗಾರಿಕೆ ಬೆಳೆಗಾರರಿಗೆ ಹನಿ ನೀರಾವರಿಯನ್ನು ಎಲ್ಲಾ ರೀತಿಯ ತೋಟಗಾರಿಕೆ ಬೆಳೆಗಳಿಗೆ (ಕಾಫಿ, ಟೀ, ರಬ್ಬರ್, ಅಡಿಕೆ ಹೊರತು ಪಡಿಸಿ) ಅಳವಡಿಸಿಕೊಳ್ಳಲು ಸಹಾಯಧನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಪ್ರಥಮ 5 ಎಕರೆಗೆ ಶೇ. 90 ಹಾಗೂ ಉಳಿದ 7ಎಕರೆ 20 ಗುಂಟೆಗೆ ಶೇ. 45 ರ ಸಹಾಯಧನ ಪಡೆಯಲು ಅವಕಾಶವಿದ್ದು, ಹನಿ ನೀರಾವರಿ ಅಳವಡಿಸಿ 7 ವರ್ಷ ಕಳೆದಿರುವ ತೋಟಗಾರಿಕೆ ಬೆಳೆಗಾರರು ಮತ್ತೊಮ್ಮೆ ಹನಿ ನೀರಾವರಿ ಅಳವಡಿಸಿಕೊಳ್ಳಬಹುದಾಗಿದೆ.ಮಾಹಿತಿಗೆ ಆಯಾ ಹೋಬಳಿ ಮಟ್ಟದ ಸಹಾಯಕ ತೋಟಗಾರಿಕೆ ಅಧಿಕಾರಿ ಗಳನ್ನ ಅಥವಾ ಚನ್ನಪಟ್ಟಣ ತಾಲ್ಲೂಕು ತೋಟಗಾರಿಕೆ ಇಲಾಖೆ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಹೇಳಿಕೆ

## ನೈಜ ಫಲಾನುಭವಿಗಳಿಗೆ ತೊಂದರೆಯಾಗದಿರಲಿ

ಚಾಮರಾಜನಗರ, ಜಿಲ್ಲೆಯಲ್ಲಿ ಅಕ್ರಮ ಬಿಪಿಎಲ್ ಕಾರ್ಡ್‌ಗಳನ್ನು ಅನರ್ಹಗೊಳಿಸುವ ಪ್ರಕ್ರಿಯೆಯಲ್ಲಿ ನೈಜ ಫಲಾನುಭವಿಗಳಿಗೆ ತೊಂದರೆಯಾಗದಂತೆ ನಿಗಾ ವಹಿಸುವಂತೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆ.ಡಿ.ಪಿ. ಸಭಾಂಗಣದಲ್ಲಿಂದು ನಡೆದ ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಸಿವು ಮುಕ್ತ ಕರ್ನಾಟಕವನ್ನಾಗಿಸುವ ನಿಟ್ಟಿನಲ್ಲಿ ಸರ್ಕಾರವು ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದ್ದು, ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಅನ್ನಭಾಗ್ಯ ಯೋಜನೆಯು ಪ್ರಮುಖವಾಗಿದೆ. ಬಡವರನ್ನು ಈ ಯೋಜನೆ ಕೇಂದ್ರಿಕರಿಸಿದೆ. ಅಕ್ರಮ ಬಿ.ಪಿ.ಎಲ್ ಪಡಿತರ ಚೀಟಿಗಳನ್ನು ಅನರ್ಹಗೊಳಿಸುವ ಕಾರ್ಯದಲ್ಲಿ ನೈಜ ಫಲಾನುಭವಿಗಳಿಗೆ ಯಾವುದೇ ಅನಾನುಕೂಲವಾಗದಂತೆ ನೋಡಿಕೊಳ್ಳುವಂತೆ ಅಧಿಕಾರಿಗಳಿಗೆ ಹೇಳಿದರು.



ಸರ್ಕಾರಕ್ಕೆ ನೇರ ತೆರಿಗೆ ಪಾವತಿ ಮಾಡುವವರು, ಕಾರ್ಡ್ ಪಡೆದು ಪಡಿತರವನ್ನೇ ಪಡೆಯದವರು ಸೇರಿದಂತೆ ಜಿಲ್ಲೆಯಲ್ಲಿ 8211 ಪಡಿತರ ಚೀಟಿಗಳನ್ನು ಗುರುತಿಸಲಾಗಿದೆ. ಅನರ್ಹ ಬಿ.ಪಿ.ಎಲ್ ಕಾರ್ಡ್‌ಗಳನ್ನು ರದ್ದುಗೊಳಿಸುವ ಮೊದಲು ತಾಲೂಕು ಆಹಾರ ನಿರೀಕ್ಷಕರು ಕಾರ್ಡ್‌ಗಳನ್ನು ಮರುಪರಿಶೀಲಿಸುವುದು ಅವಶ್ಯವಾಗಿದೆ. ಈ ಬಗ್ಗೆ ಯಾವುದೇ ಗೊಂದಲಗಳಿಗೆ ಅವಕಾಶವಾಗಬಾರದು ಎಂದರು.

ಗೃಹಲಕ್ಷ್ಮೀ ಯೋಜನೆಯಡಿ ಬಾಕಿ ಇರುವ ಎನ್.ಪಿ.ಸಿ.ಐ. ಮ್ಯಾಪಿಂಗ್ ಕಾರ್ಯದಲ್ಲಿ ಎದುರಾಗುವ ತಾಂತ್ರಿಕ ದೋಷಗಳನ್ನು ನಿವಾರಿಸಿ ಅದಷ್ಟು ಬೇಗನೆ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗುವಂತೆ ನೋಡಿಕೊಳ್ಳಬೇಕು. ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಅಂಗನವಾಡಿ, ಆಶಾ ಕಾರ್ಯಕರ್ತೆಯರ ಸಹಕಾರ ಪಡೆದು ಮ್ಯಾಪಿಂಗ್ ಆಗದಿರುವವರ ಮಾಹಿತಿ ಸಂಗ್ರಹಿಸಿ ಯೋಜನೆಗೆ ನೊಂದಾಯಿಸುವ ಪ್ರಕ್ರಿಯೆ ಕೈಗೊಳ್ಳಬೇಕು. ಗ್ಯಾರಂಟಿ ಯೋಜನೆಗಳು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಯೋಜನೆಗಳ ಅನುಷ್ಠಾನದಲ್ಲಿ ಜಿಲ್ಲೆ ಮುಂದಿದೆ. ಅಧಿಕಾರಿಗಳು ಯೋಜನೆಗಳ ಅನುಷ್ಠಾನದಲ್ಲಿ ನಿರ್ಲಕ್ಷ್ಯ ವಹಿಸದೇ ಪರಿಣಾಮಕಾರಿ ಪ್ರಗತಿಗೆ ಮುಂದಾಗಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷರಾದ ರವಿ ಬಸ್ತಿಪುರ, ಸಿದ್ದರಾಜು, ಸದಸ್ಯರಾದ ಕೆ.ಬಿ. ಚಿನ್ನಸ್ವಾಮಿ, ಉಮಾಪತಿ, ರಾಚಯ್ಯ, ಆರ್. ರಾಜೇಂದ್ರ, ಎಚ್.ಎನ್. ಜಯರಾಜು, ಭಾಗ್ಯ, ಎಂ. ದೇವರಾಜು, ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಶಿವನಸಮುದ್ರ ನಾಲೆಯಿಂದ ಆನೆ ರಕ್ಷಿಸಿದ ಸಿಬ್ಬಂದಿ ಸನ್ಮಾನಿಸಿದ ಖಂಡ್ರೆ




ಚಾಮರಾಜನಗರ,ಶಿವನಸಮುದ್ರದ ಜಲವಿದ್ಯುತ್ ಗಾರದ ಜಲಾಶಯದ ಬಳಿಯ ನಾಲೆಯಲ್ಲಿ ಸಿಲುಕಿದ್ದ ಸಲಗವನ್ನು ಯಶಸ್ವಿಯಾಗಿ ರಕ್ಷಿಸಿದ ಅರಣ್ಯ ಸಿಬ್ಬಂದಿ ಮತ್ತು ಪಶುವೈದ್ಯರನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಈಶ್ವರ ಬಿ ಖಂಡ್ರೆ ಇಂದು ಸನ್ಮಾನಿಸಿದರು.

ಕೊಳ್ಳೆಗಾಲದಲ್ಲಿಂದು ಕಮಾಂಡ್ ಸೆಂಟರ್ ಉದ್ಘಾಟಿಸಿದ ತರುವಾಯ ನಡೆದ ಅಧಿಕಾರಿಗಳ ಸಭೆಗೂ ಮುನ್ನ 40 ಅಡಿ ಆಳದಿಂದ ಆನೆಯನ್ನು ರಕ್ಷಿಸಿದ ತಂಡದಲ್ಲಿದ್ದ ಮಂಡ್ಯ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ರಘು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹದೇವಸ್ವಾಮಿ, ವಲಯ ಅರಣ್ಯಾಧಿಕಾರಿ ಗವಿಯಪ್ಪ, ಪಶುವೈದ್ಯ ಆದರ್ಶ್ ಹಾಗೂ ಶಾರ್ಪ್ ಶೂಟರ್ ಅಕ್ರಮ್ ಅವರನ್ನು ಈಶ್ವರ ಖಂಡ್ರೆ ಸನ್ಮಾನಿಸಿದರು.

ಉತ್ತಮ ಕಾರ್ಯ ಮಾಡಿದ ಸಿಬ್ಬಂದಿ ಪ್ರಶಂಸೆಗೆ ಮತ್ತು ಸನ್ಮಾನಕ್ಕೆ ಅರ್ಹರಾಗುತ್ತಾರೆ. ಅದೇ ರೀತಿ ತಪ್ಪು ಮಾಡುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಯನ್ನೂ ನೀಡಿದರು.

## ರೈತರು ಗೊಂದಲಕ್ಕೆ ಈಡಾಗುವುದು ಬೇಡ

ಹನೂರು : ಹನೂರು ವಿಧಾನಸಭಾ ಕ್ಷೇತ್ರ ಭೌಗೋಳಿಕವಾಗಿ ಬಹಳ ವಿಸ್ತೀರ್ಣವನ್ನು ಹೊಂದಿದ್ದು ಹೆಚ್ಚಿನ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಲು ಈಗಾಗಲೇ ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಹೆಚ್ ಸಿ ಮಹದೇವಪ್ಪ ಸಂಸದ ಸುನೀಲ್ ಬೋಸ್ ಸೂಚನೆ ನೀಡಿದ್ದೂ ಅದರಂತೆ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಿದ್ದಾರೆ. ಹಾಗಾಗಿ ರೈತರು ಗೊಂದಲಕ್ಕೆ ಈಡಾಗುವುದು ಬೇಡ ಎಂದು ಕೆಪಿಸಿಸಿ ಜಿಲ್ಲಾ ವಕ್ತಾರ ಮಧುವನಹಳ್ಳಿ ಎಸ್. ಶಿವಕುಮಾರ್ ತಿಳಿಸಿದರು.



ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್, ಹಾಗೂ ಸಂಸದ ಸುನೀಲ್ ಬೋಸ್ ರವರು ಧರಣಿ ಸ್ಥಳಕ್ಕೆ ಬರಲಿಲ್ಲವೆಂಬ ಕಾರಣ ಒಡ್ಡಿ ಅವರನ್ನು ಹುಡುಕಿ ತರುವಂತೆ ಪೊಲೀಸ್ ಠಾಣೆಯಲ್ಲಿ ದೂರು ನೀಡಬಾರದಾಗಿತ್ತು.

ಹನೂರು ವಿಧಾನಸಭಾ ಕ್ಷೇತ್ರಕ್ಕೆ ಈಗಾಗಲೇ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಲು ಅಧಿಕಾರಿಗಳ ಜೊತೆ ಸಮಾಲೋಚಿಸಿ ಆದಷ್ಟು ಬೇಗ ನೀರಾವರಿ ವ್ಯವಸ್ಥೆಯನ್ನು ಜಾರಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಕ್ರಿಯಾಯೋಜನೆ ತಯಾರಿಸಲು ಸೂಚನೆ ನೀಡಿದ್ದಾರೆ. ಅಧಿಕಾರಿಗಳು ಸಹ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ರೈತ ಸಂಘದ ಪದಾಧಿಕಾರಿಗಳು ಆತುರದ ನಿರ್ಧಾರ ತೆಗೆದುಕೊಳ್ಳದೆ ಗೊಂದಲಕ್ಕೆ ಒಳಗಾಗದೆ ತಾಳ್ಮೆಯಿಂದ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು. ನಮ್ಮ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಲೋಕಸಭಾ ಸದಸ್ಯರು ಧರಣಿ ಸ್ಥಳಕ್ಕೆ ಬರಲಿಲ್ಲ ಎಂಬ ಒಂದೇ ಒಂದು ಕಾರಣ ಹೇಳಿ ದೂರು ನೀಡಿರುವುದು ಸರಿಯಲ್ಲ. ಅವರು ಸ್ಥಳಕ್ಕೆ ಬಾರದಿರುವ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸುವ ಬದಲು ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ ಏನು ಯೋಜನೆಗಳನ್ನು ರೂಪಿಸಿದ್ದಾರೆ, ಅಭಿವೃದ್ಧಿಗೆ ಪೂರಕವಾಗಿಯೇ ಕೆಲಸ ಮಾಡುತ್ತಿದ್ದಾರೆ ಎಂಬುದನ್ನ ತಿಳಿದುಕೊಳ್ಳುವುದು ಒಳ್ಳೆಯದು ಎಂದರು.

### ರೈತರ ಪರ ಸರ್ಕಾರ

ನಮ್ಮ ಕಾಂಗ್ರೆಸ್ ಸರ್ಕಾರ ರೈತ ಪರವಾದಂತಹ ಸರ್ಕಾರವಾಗಿದೆ. ರೈತರಿಗೆ ಎಲ್ಲಾ ರೀತಿಯ ನೆರವನ್ನು ನೀಡಲು ಸಿದ್ಧವಾಗಿದೆ. ಹಲವಾರು ವರ್ಷಗಳಿಂದ ಮಾಜಿ ಸಚಿವ ದಿ. ರಾಜುಗೌಡ, ಸಂಸದರಾದ ದಿ ಶ್ರೀನಿವಾಸ್ ಪ್ರಸಾದ್, ಆರ್ ಧ್ರುವ ನಾರಾಯಣ ಮಾಜಿ ಶಾಸಕರಾದ ಆರ್ ನರೇಂದ್ರ ರವರು ಕಳೆದ ಹಲವಾರು ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಭೌಗೋಳಿಕವಾಗಿ ವಿಸ್ತೀರ್ಣ ಹೊಂದಿರುವುದರಿಂದ ಅನುದಾನದ ಕೊರತೆಯಿಂದ ಕಾಮಗಾರಿಗಳು ವಿಳಂಬವಾಗಿದೆ. ಇದೀಗ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್ ಸಿ ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ರವರು ಸಭೆ ನಡೆಸಿ 25 ಸಾವಿರ ಎಕರೆ ಪ್ರದೇಶಗಳಿಗೆ ನೀರಾವರಿ ಯೋಜನೆ ಕಲ್ಪಿಸಲು ಡಿಪಿಆರ್ ಸಿದ್ದಪಡಿಸಲು ಸೂಚನೆ ನೀಡಿದ್ದಾರೆ. ಇದಲ್ಲದೆ ಸರ್ವೆ ಕಾರ್ಯವು ಪ್ರಗತಿಯಲ್ಲಿರುವುದರಿಂದ ರೈತ ಮುಖಂಡರುಗಳು ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

## ಅರಣ್ಯ ಇಲಾಖೆಗೆ ಜರ್ಕಿನ್ ಕೊಡುಗೆ



ಎಚ್.ಡಿ.ಕೋಟೆ: ಬೆಂಗಳೂರಿನ ಜೀವ ಎಂಟರ್ ಪ್ರೈಸಸ್ ನ ಮಾಲೀಕ ಹಾಗೂ ವಿದ್ಯುತ್ ಪ್ರಥಮ ದರ್ಜೆ ಗುತ್ತಿಗೆದಾರ ಎಂ.ಆರ್.ಜೀವನ್ ಕುಮಾರ್ ಅವರು ಗುಂಡ್ರೆ ವನ್ಯಜೀವಿ ವ್ಯಾಪ್ತಿಯ ಅರಣ್ಯಾಧಿಕಾರಿಗಳು, ಸಿಬ್ಬಂದಿಗಳಿಗೆ ಮಳೆಗಾಲ ಹಾಗೂ ಬೇಸಿಗೆ ಕಾಲಕ್ಕೆ ಹೊಂದುಕೊಳ್ಳುವ ಜರ್ಕಿನ್, ಪ್ಯಾಂಟ್ ಗಳನ್ನು ಉಡುಗೊರೆಯಾಗಿ ನೀಡಿದರು. ಬಂಡೀಪುರ ವ್ಯಾಪ್ತಿಯ ಸಿಎಫ್ ಪ್ರಭಾಕರನ್, ಗುಂಡ್ರೆ ಆರ್.ಎಫ್.ಒ ಅಮೃತೇಶ್, ಡಿ.ಆರ್.ಎಫ್.ಒ ಕಲೀಂಪಾಷ, ಸುನೀತಾರಾಜ್, ಎನ್.ಡಿ. ರಾಜಣ್ಣ, ಕಾರ್ತಿಕ್, ಚಂದ್ರು, ಜಗದೀಶ್ ಸೇರಿದಂತೆ ಮತ್ತಿತರರಿದ್ದಾರೆ.

# ಆಯಿಷ್ ನಲ್ಲಿ ಅರ್ಥಪೂರ್ಣ ವಿಕಲಚೇತನರ ದಿನಾಚರಣೆ

ಮೈಸೂರು: ಅಂಗವಿಕಲರ ಹಕ್ಕುಗಳು, ಘನತೆ ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವ ಮಹತ್ವದ ಉದ್ದೇಶದೊಂದಿಗೆ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಅಂಗವಿಕಲರ ದಿನಾಚರಣೆಯನ್ನು ಸರಣಿ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಉದ್ಘಾಟನಾ ಭಾಷಣ ಮಾಡಿದ ಮುಖ್ಯಅತಿಥಿಯಾದ ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಹಲವಾರು ಪರಿವರ್ತಕ ಉಪಕ್ರಮಗಳ ಹಿಂದಿನ ಚಾಲಕ ಶಕ್ತಿಯಾಗಿರುವ ಸಂಸ್ಥೆಯ ಕಾರ್ಯವನ್ನು ಶ್ಲಾಘಿಸಿದರು. ಐಶ್ ಕೇವಲ ಒಂದು ಸಂಸ್ಥೆಯಲ್ಲ. ಇದು ಸಾಧನೆಯ ವೇದಿಕೆಯಾಗಿ, ಭವಿಷ್ಯವನ್ನು ರೂಪಿಸುವ ಮಾರ್ಗವಾಗಿ, ಮತ್ತು ಸವಾಲುಗಳನ್ನು ಕುತೂಹಲ ಹಾಗೂ ಸ್ಥಿತಿಸ್ಥಾಪಕತ್ವದಿಂದ ಎದುರಿಸುವ ವಾತಾವರಣವಾಗಿ ರೂಪುಗೊಂಡಿದೆ ಎಂದು ಹೇಳಿದರು. ಪ್ರತಿಯೊಂದು ಮಗುವಿನಲ್ಲಿ ಅನನ್ಯ ಸಾಮರ್ಥ್ಯಗಳಿವೆ. ಪೋಷಕರ ಸೂಕ್ತ ಬೆಂಬಲ ಮತ್ತು ಸಕಾಲಿಕ ಹಸ್ತಕ್ಷೇಪದಿಂದ ಅವರು ಗಮನಾರ್ಹ ಪ್ರಗತಿ ಸಾಧಿಸಲು ಸಾಧ್ಯವಿದೆ



ಎಂದರು. ಅಂಗವಿಕಲ ಮಕ್ಕಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು ಸಮುದಾಯದ ಸಾಮೂಹಿಕ ಜವಾಬ್ದಾರಿಯಾಗಿದೆ. ಅಂಗವಿಕಲ ಮಕ್ಕಳ ತಾಯಂದಿರನ್ನು ಶಕ್ತಿ ಮತ್ತು ಮಮತೆಯ ಸಾಕಾರಮೂರ್ತಿಗಳು ಎಂದು ಹಾಡಿಹೊಗಳಿದರು.

ಗ್ಲೋಬಲ್ ಸೆನ್ಸಾರ್ ಪ್ರೊಡಕ್ಷನ್ ಗ್ರೈಡ್ ಗೌರವ್ ಕುಮಾರ್ ಗರ್ಗ್ ಮಾತನಾಡಿ, ವೈಜ್ಞಾನಿಕ ಶ್ರೇಷ್ಠತೆ ಮತ್ತು ಸಹಾನುಭೂತಿಯ ಮೂಲಕ ಅಸಂಖ್ಯಾತ ಜೀವನವನ್ನು ಪರಿವರ್ತಿಸಿರುವ ಈ ಸಂಸ್ಥೆಯಲ್ಲಿರುವುದು ತಮ್ಮ ಗೌರವ ಎಂದರು. ಸಂವಹನ ತೊಂದರೆಗಳನ್ನು ಇಲ್ಲಿ ಮಿತಿಗಳೆಂದು ಪರಿಗಣಿಸದೆ, ಸರಿಯಾದ ಬೆಂಬಲದೊಂದಿಗೆ ಜಯಿಸಬಹುದಾದ ಸವಾಲುಗಳೆಂದು ನೋಡುವ ಭರವಸೆಯ ದೀಪವೇ ಐಶ್ ಎಂದು ಅವರು ಬಣ್ಣಿಸಿದರು. ಪ್ರತಿಯೊಬ್ಬ ವ್ಯಕ್ತಿಯೂ ಘನತೆ, ಗೌರವ ಮತ್ತು ಸಮಾನ ಅವಕಾಶಗಳೊಂದಿಗೆ ಸಮಾಜದಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಡುವುದರಲ್ಲೇ ನಿಜವಾದ ಸಾಮಾಜಿಕ ಪ್ರಗತಿ ಅಡಗಿದೆ ಎಂದು ಅಭಿಪ್ರಾಯಪಟ್ಟರು.

ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪವತಿ ಮಾತನಾಡಿ, ಅಂಗವಿಕಲರಿಗಾಗಿ ಸಂಸ್ಥೆಯು ನಿರಂತರವಾಗಿ ನಡೆಸುತ್ತಿರುವ ವಿವಿಧ ಶೈಕ್ಷಣಿಕ, ಸಂಶೋಧನಾ ಮತ್ತು ಕ್ಲಿನಿಕಲ್ ಸೇವೆಗಳ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಿದರು. ಕಾರ್ಯಕ್ರಮದ ಭಾಗವಾಗಿ, ಸಂಸ್ಥೆಯಲ್ಲಿ ಚಿಕಿತ್ಸಕ ಸೇವೆಗಳನ್ನು ಪಡೆದು ಸಮಾಜಕ್ಕೆ ಗಣನೀಯ ಕೊಡುಗೆಗಳನ್ನು ನೀಡಿರುವ ವಿಕಲಚೇತನ ವ್ಯಕ್ತಿಗಳನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. "ಅತ್ಯುತ್ತಮ ತಾಯಿ ಪ್ರಶಸ್ತಿ"ಗಳನ್ನು ವಿತರಿಸಿ, ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿಕಲಚೇತನ ವಿದ್ಯಾರ್ಥಿಗಳನ್ನು ಸಹ ಸನ್ಮಾನಿಸಲಾಯಿತು. ಶ್ರವಣ ದೋಷವುಳ್ಳ ವ್ಯಕ್ತಿಗಳಿಗೆ ಶ್ರವಣ ಸಾಧನ, ಕಾಕ್ಲಿಯರ್ ಇಂಪ್ಲಾಂಟ್ ಪರಿಕರಗಳು ಸೇರಿ ಇತರೆ ಸಹಾಯಕ ಸಾಧನಗಳನ್ನು ಉಚಿತವಾಗಿ ವಿತರಿಸಲಾಯಿತು.

# ಅರಣ್ಯಗಸ್ತು: ನಿಗಾ ಅಗತ್ಯ

## ಈಶ್ವರ ಖಂಡ್ರೆ ಸೂಚನೆ | ಅರಣ್ಯಾಧಿಕಾರಿಗಳೊಂದಿಗೆ ಸಭೆ

ಚಾಮರಾಜನಗರ, ರಾಜ್ಯ ಅರಣ್ಯ ಇಲಾಖೆ ಅಭಿವೃದ್ಧಿಪಡಿಸಿರುವ ಇ–ಗಸ್ತು ತಂತ್ರಾಂಶದ ಮೂಲಕ ಇಲಾಖೆಯ ಮುಂಚೂಣಿ ಸಿಬ್ಬಂದಿ ದಿನವೊಂದಕ್ಕೆ ಎಷ್ಟು ಗಸ್ತು ತಿರುಗುತ್ತಾರೆ ಎಂಬ ಬಗ್ಗೆ ನಿಗಾ ಇಡಲು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸೂಚಿಸಿದರು.

ಕೊಳ್ಳೆಗಾಲದ ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಚಾಮರಾಜನಗರ ಮತ್ತು ಮೈಸೂರು ವೃತ್ತದ ಅರಣ್ಯಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಹೊಸದಾಗಿ ರೂಪಿಸಲಾಗಿರುವ ಈ ತಂತ್ರಾಂಶದ ಬಗ್ಗೆ ಸೂಕ್ತ ಪ್ರತಿಕ್ರಿಯೆ ನೀಡಿ, ತಂತ್ರಾಂಶ ಅಭಿವೃದ್ಧಿಪಡಿಸಿ ಎಂದೂ ಆದೇಶಿಸಿದರು.

ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಿಸಲು ಗಸ್ತು ಅತ್ಯಂತ ಮುಖ್ಯವಾಗಿದ್ದು, ಇದನ್ನು ಬಲಪಡಿಸುವ ಅಗತ್ಯವಿದೆ. ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಈಗಾಗಲೇ ಅಳವಡಿಸಲಾಗಿರುವ ಎಂ.ಸ್ಟ್ರೈಪ್ ಜೊತೆಗೆ ನಮ್ಮ ಇ–ಗಸ್ತು ತಂತ್ರಾಂಶವನ್ನೂ ಜಾರಿ ಮಾಡಿ ನಿಗಾ ಇಡುವಂತೆ ಸಚಿವರು ಸೂಚಿಸಿದರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್,ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಎಚ್.ವಿ.ಚಂದ್ರು,ಜಿಲ್ಲಾಧಿಕಾರಿ ಶಿಲ್ಪಾ ನಾಗ್,ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ,ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್,ಡಿಸಿಎಫ್ ಭಾಸ್ಕರ್,ಜಿಲ್ಲಾ ಪರಿಸರ ಅಧಿಕಾರಿ ಕೆ.ಎಲ್.ಸವಿತಾ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.



### ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ

ಇಂದಿನ ಯುವ ಪೀಳಿಗೆಗೆ ಮತ್ತು ಮಕ್ಕಳಿಗೆ ಅರಣ್ಯ ಮತ್ತು ವನ್ಯಜೀವಿಗಳ ಸ್ವಭಾವದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಯಲ್ಲಿರುವ ಉತ್ತಮ ವಾಗ್ಮಿಗಳು ಅಥವಾ ಆಸಕ್ತ ಎನ್.ಜಿ.ಓ. ಬಳಸಿಕೊಂಡು ಜಾಗೃತಿ ಮೂಡಿಸುವ ಕಾರ್ಯ ಮಾಡಿ, ಹುಲಿ ಪ್ರತಿಷ್ಠಾನದ ಹಣದಲ್ಲಿ ಮೂರನೇ ಒಂದು ಭಾಗವನ್ನು ಅರಣ್ಯದಂಚಿನ ಗ್ರಾಮಗಳಲ್ಲಿನ ಜನ ಸಂಪರ್ಕ ಕಾರ್ಯಕ್ಕೆ ವೆಚ್ಚ ಮಾಡಿ ಎಂದು ನಿರ್ದೇಶನ ನೀಡಿದರು. ಅದೇ ರೀತಿ ಹುಲಿ ಬಂದಾಗ ಏನು ಮಾಡಬೇಕು, ಚಿರತೆ, ಕರಡಿ, ಆನೆ ಬಂದರೆ ಹೇಗೆ ನಡೆದುಕೊಳ್ಳಬೇಕು, ಹಾವು ಕಂಡಾಗ ಏನು ಮಾಡಬೇಕು ಎಂಬ ಬಗ್ಗೆ ಕಾಡಿನಂಚಿನ ಮಕ್ಕಳಿಗೆ ತಿಳಿವಳಿಕೆ ಮೂಡಿಸಲು ಅಣಕು ಪ್ರದರ್ಶನಗಳನ್ನು ಏರ್ಪಡಿಸಿ ಎಂದು ಸಚಿವರು ತಿಳಿಸಿದರು. ಅರಣ್ಯ ಪ್ರದೇಶದಲ್ಲಿ ಹೆಚ್ಚಳವಾಗುತ್ತಿಲ್ಲ. ಬದಲಾಗಿ ವನ್ಯಜೀವಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಒಂದು ಗಂಡು ಹುಲಿಗೆ ಕನಿಷ್ಠ 14 ಚದರ ಕಿಲೋ ಮೀಟರ್ ಪ್ರದೇಶ ಬೇಕಿದ್ದರೆ, ಹೆಣ್ಣು ಹುಲಿಗೆ 8ರಿಂದ 10 ಚದರ ಕಿಲೋ ಮೀಟರ್ ಬೇಕಾಗುತ್ತದೆ ಎಂದು ತಜ್ಞರು ಹೇಳುತ್ತಾರೆ. ಆದರೆ ಒಂದು ಅಂದಾಜಿನ ರೀತ್ಯ ಬಂಡೀಪುರದಲ್ಲಿ 190 ಹುಲಿಗಳಿದ್ದು, ಅರಣ್ಯ ಪ್ರದೇಶ ಇರುವುದು 950 ಚದರ ಕಿಲೋ ಮೀಟರ್. ಅಂದರೆ ಕಾಡಿಗಿಂತ ಹುಲಿಯ ಸಂಖ್ಯೆ ಹೆಚ್ಚಿದೆ. ಇದಕ್ಕೆ ಸಹಬಾಳ್ವೆಯೊಂದೇ ಪರಿಹಾರವಾಗಿದೆ ಎಂದು ಹೇಳಿದರು. ಅರಣ್ಯ ಸಿಬ್ಬಂದಿ ಗ್ರಾಮದಂಚಿನ ಜನರೊಂದಿಗೆ ಹೆಚ್ಚು ಸ್ನೇಹಪರವಾಗಿದ್ದಾಗ ಸಮಸ್ಯೆ ಪರಿಹರಿಸಲು ಸಾಧ್ಯ. ಗ್ರಾಮದ ಜನರಿಂದಲೇ ನಿಮಗೆ ಮಾಹಿತಿ ಲಭಿಸುತ್ತದೆ. ವನ್ಯಜೀವಿಗಳೂ ಸುರಕ್ಷಿತವಾಗಿರುತ್ತವೆ. ತಕ್ಷಣ ನೀವು ಸ್ಪಂದಿಸಿದರೆ ಜನರ ಜೀವ, ಬೆಳೆಯೂ ಉಳಿಯುತ್ತದೆ ಎಂದರು. ವನ್ಯಜೀವಿಗಳು ವಸತಿ ಪ್ರದೇಶದ ಬಳಿ ಬಂದ ಬಗ್ಗೆ ಮಾಹಿತಿ ದೊರೆತ ಕೂಡಲೇ ಅಲ್ಲಿಗೆ ಧಾವಿಸಲು ವಾಹನ ಮತ್ತು ಸಿಬ್ಬಂದಿ ಸಜ್ಜಾಗಿರುವಂತೆ ನೋಡಿಕೊಳ್ಳಿ ಮತ್ತು ಹುಲಿ ಸಂಚಾರ ಇರುವ 100 ಕಿಲೋ ಮೀಟರ್ ವ್ಯಾಪ್ತಿಯ ಗ್ರಾಮಗಳ ಬಳಿ ಪ್ರತಿ 5 ಕಿಲೋ ಮೀಟರ್ ಗೆ ಒಂದು ತಾತ್ಕಾಲಿಕ ಶಿಬಿರ ಮಾಡಿ ಗಸ್ತು ಹೆಚ್ಚಿಸಿ ಎಂದು ತಿಳಿಸಿದರು. ಹಿರಿಯ ಅಧಿಕಾರಿಗಳು ವನ್ಯಜೀವಿ–ಮಾನವ ಸಂಘರ್ಷ ಹೆಚ್ಚಿರುವ ಗ್ರಾಮಗಳಲ್ಲಿ ವಾಸ್ತವ್ಯ ಹೂಡಿ ಜನರ ಸಮಸ್ಯೆ ಆಲಿಸಬೇಕು. ಸಮಸ್ಯೆಗೆ ಪರಿಹಾರ ದೊರಕಿಸಬೇಕು ಎಂದು ತಿಳಿಸಿದರು.

## ಹರಿಹರಪುರದಲ್ಲಿ ಶ್ರೀ ಆಂಜನೇಯಸ್ವಾಮಿ ರಥೋತ್ಸವ

ಕೆ.ಆರ್.ಪೇಟೆ: ತಾಲ್ಲೂಕಿನ ಕಸಬಾ ಹೋಬಳಿಯ ಹರಿಹರಪುರ ಗ್ರಾಮದಲ್ಲಿ ಹನುಮಜಯಂತಿ ಅಂಗವಾಗಿ ಗ್ರಾಮ ದೇವತೆ ಶ್ರೀ ಆಂಜನೇಯಸ್ವಾಮಿಯವರ ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಕ್ಷೇತ್ರದ ಶಾಸಕರಾದ ಹೆಚ್.ಟಿ.ಮಂಜು ಮತ್ತು ತಹಸೀಲ್ದಾರ್ ಡಾ.ಎಸ್.ಯು.ಅಶೋಕ್ ಅವರು ರಥೋತ್ಸವಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ರಥೋತ್ಸವದ ಸಾನಿಧ್ಯವನ್ನು ಅರಸೀಕೆರೆ ಹಾರನಹಳ್ಳಿ ಕೋಡಿಮಠದ ಶ್ರೀಗಳು ವಹಿಸಿದ್ದರು. ಸಮಾಜ ಸೇವಕ ಆರ್.ಟಿ.ಓ.ಮಲ್ಲಿಕಾರ್ಜುನ್, ಮಾಜಿ ಸಚಿವ ನಾರಾಯಣ ಗೌಡ, ಸಾಹಿತಿ ಹೆಚ್.ವಿ.ಗಣೇಶ್, ಮಾಜಿ ಶಾಸಕ ಬಿ.ಪ್ರಕಾಶ್, ತಾಲ್ಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಹರಿಹರಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ರತಿಶ್ರೀಧರ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹೆಚ್.ಆರ್.ಪೂರ್ಣಚಂದ್ರತೇಜಸ್ವಿ, ಮುಖಂಡರಾದ ಮಹಾದೇವೇಗೌಡ, ಹೆಚ್.ವೈ.ಜಯಕುಮಾರ್, ಬಲರಾಮೇಗೌಡ, ಹರಿಹರಪುರ ನರಸಿಂಹ, ಎಲ್.ಐ.ಸಿ.ನಾರಾಯಣ್ ಸೇರಿದಂತೆ ಸಾವಿರಾರು ಮಂದಿ ಭಕ್ತಾಧಿಗಳು ರಥೋತ್ಸವದಲ್ಲಿ ಭಾಗವಹಿಸಿದ್ದರು. ಕೋಡಿಮಠದ ಶ್ರೀಗಳನ್ನು ಬೆಳ್ಳಿ ಪಲ್ಲಕ್ಕಿಯ ಮೇಲೆ ಗ್ರಾಮದ ರಾಜಬೀದಿಗಳಲ್ಲಿ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಡೊಳ್ಳು ಕುಣಿತ, ವೀರಗಾಸೆ ಕುಣಿತ, ಗೊಂಬೆ ಕುಣಿತ, ಪೂಜಾ ಕುಣಿತ, ಕೋಲಾಟ ಪ್ರದರ್ಶನಗಳು ರಥೋತ್ಸವ ಹಾಗೂ ಜಾತ್ರಾ ಮಹೋತ್ಸವದ ರಂಗನ್ನು ಹೆಚ್ಚಿಸಿದ್ದವು.



## ತರಬೇತಿ ಕೇಂದ್ರಕ್ಕೆ ವರ್ಷದ ಸಂಭ್ರಮ



ಗುಂಡ್ಲುಪೇಟೆ, –ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾರತ ದೇಶದಲ್ಲಿಯೇ ಮೊದಲ ಬಾರಿಗೆ ಸ್ಥಾಪನೆಯಾಗಿರುವ ಶ್ವಾನ ದಳ ತರಬೇತಿ ಕೇಂದ್ರಕ್ಕೆ ವರ್ಷದ ಸಂಭ್ರಮ.

ಇದೇ ವೇಳೆ ಮೇಲುಕಾಮನಹಳ್ಳಿ ಬಳಿ ಇರುವ ಶ್ವಾನ ದಳ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದ 10 ಶ್ವಾನಗಳನ್ನು 5 ಹುಲಿ ಸಂರಕ್ಷಿತ ಪ್ರದೇಶಕ್ಕೆ ತಲಾ ಎರಡರಂತೆ ಹಂಚಿಕೆ ಮಾಡಲಾಯಿತು.

ಶ್ವಾನಗಳಿಗೆ ಮತ್ತು ಸಿಬ್ಬಂದಿಗಳಿಗೆ ಡಾ.ಅಮೃತ್ ಎಸ್ ಹಿರಣ್ಯ ಎಂಬುವವರು ಶ್ವಾನ ಮನೋವೈದ್ಯ ತಜ್ಞರಿಂದ ಹಾಗೂ ಅರಣ್ಯ ಇಲಾಖೆಯ ನೆರವಿನಿಂದ ಒಂದು ವರ್ಷದ ತರಬೇತಿ ಪೂರ್ಣಗೊಳಿಸಿದ್ದಾರೆ. ಅರಣ್ಯಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕ ಎಸ್ ಪ್ರಬಾಕರನ್ ತರಬೇತುದಾರರಿಗೆ ಹಾಗೂ ಶ್ವಾನ ಸಿಬ್ಬಂದಿಗೆ ಪ್ರಮಾಣಪತ್ರವನ್ನು ವಿತರಣೆ ಮಾಡಿದರು. ಬಂಡೀಪುರದ ಉಪ ಅರಣ್ಯ ಸಂರಕ್ಷಣಾಧಿಕಾರಿ ನವೀನ್ ಕುಮಾರ್, ವಲಯ ಅರಣ್ಯ ಅಧಿಕಾರಿ ಮಲ್ಲೇಶ್ ಎಂ, ಶ್ರೀರಾಮಲು ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಮೈಸೂರಿನಲ್ಲಿ ಸಂಭ್ರಮದ ಹನುಮದ್ ವ್ರತ

ಮೈಸೂರು: ನಗರದ ಸಿ.ಎಫ್.ಟಿ.ಆರ್.ಐ ಪಕ್ಕದ ಯಾದವಗಿರಿಯಲ್ಲಿರುವ ಶ್ರೀ ಉತ್ತರಾದಿ ಮಠದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀ ಹನುಮದ್ ವ್ರತ ಪ್ರಯುಕ್ತ ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀಮದುತ್ತರಾದಿ ಮಠಾಧೀಶ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ

ಆಜ್ಞೆ ಹಾಗೂ ಅನುಗ್ರಹದಿ0ದ ಬೆ.8.30 "ಪವಮಾನ ಹೋಮ ಹಾಗೂ ನವಗ್ರಹ ಹೋಮ" ಆದ್ಯಗೋವಿಂದಾಚಾರ್ಯರಿಂದ ನೇರವೇರಿತು. 9ಗಂಟೆಗೆ ಶ್ರೀಮದಾನಂದ ತೀರ್ಥ ಹರಿವಾಯುಸ್ತುತಿ ಪಾರಾಯಣ ಸಂಘದಿಂದ "ಹರಿವಾಯುಸ್ತುತಿ ಪಾರಾ ಯಣ", 9.30ಕ್ಕೆ ಮಧು ಅಭಿಷೇಕ ಮತ್ತು ಪಂಚಾಮೃತ ಅಭಿಷೇಕ ಅನಿರುದ್ಧಾಚಾರ್ಯ ಪಾಂಡುರಂಗಿ ಇವರಿಂದ ನಡೆಸಲಾಯಿತು. ನಂತರ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಶಾಸಕ ಕೆ.ಹರೀಶ್ ಗೌಡ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಭಾರತ ಅಖಿಲ ಬ್ರಾಹ್ಮಣ




ಏಕೀಕೃತ ಪರಿಷತ್ ರಾಜ್ಯಾಧ್ಯಕ್ಷ ಎನ್.ಎಂ. ನವೀನ್ ಕುಮಾರ್ ಗೆ ಸನ್ಮಾನ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಉತ್ತರಾದಿ ಮಠ ವ್ಯವಸ್ಥಾಪಕ ಶ್ರೀ ಅನಿರು ದ್ಧಾಚಾಯ9 ಪಾಂಡುರಂಗಿ, ಹಾಗೂ ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯ ನಾರಾಯಣ, ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್, ಅಗಸ್ತ್ಯ ಕೋಆಪರೇಟಿವ್ ಸೊಸೈಟಿ ನಿಕಟ ಪೂರ್ವ ಅಧ್ಯಕ್ಷ ಪಾರ್ಥಸಾರಥಿ, ಹಿರಿಯ ಸಮಾಜ ಸೇವಕ ರಘುರಾಮ ವಾಜಪೇಯಿ, ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ ಸಂಘಟನಾ ಕಾರ್ಯದರ್ಶಿ ಎಸ್.ಎಸ್.ಪ್ರಸಾದ್ ಮುಂತಾದವರು ಭಾಗಿಯಾಗಿದ್ದರು.

## ಪಿಡಬ್ಲ್ಯುಡಿ ನೌಕರ ಸೋಮಣ್ಣಗೆ ಬಿಳ್ಕೊಡುಗೆ



ಚಾಮರಾಜನಗರ, ನಗರದ ಪಿಬ್ಲ್ಯುಡಿ ಇಲಾಖೆಯಲ್ಲಿ 32 ವರ್ಷಗಳ ಧೀರ್ಘ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದೆ ನೌಕರರ ಸೋಮಣ್ಣ ಅವರನ್ನು ಅತ್ಮೀಯವಾಗಿ ಬೀಳ್ಕೋಡುಗೆ ನೀಡಲಾಯಿತು.

ನಗರದ ಲೋಕೋಪಯೋಗಿ ಇಲಾಖೆಯ ಉಪ ವಿಭಾಗದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸೋಮಣ್ಣ ಅವರನ್ನು ಸರ್ಕಾರಿ ನೌಕರರ ಸಂಘ ದ ಅಧ್ಯಕ್ಷೆ ರೇಣುಕಾದೇವಿ, ಇಲಾಖೆಯ ಸಹಾಯಕ ನಿರ್ದೇಶಕಿ ಶಾಂತಮ್ಮ ಅವರು ಸೋಮಣ್ಣ ಅವರಿಗೆ ಶಾಲು ಹೊದಿಸಿ, ಫಲಾತುಂಬೂಲ ನೀಡಿ ಅಭಿನಂದಿಸಿ, ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಶುಭ ಕೋರಿದರು. ಬಳಿಕ ಮಾತನಾಡಿದ ಅವರು, ಸೋಮಣ್ಣ ಅವರು ಕಳೆದ 32 ವರ್ಷಗಳು ಸುಧೀರ್ಘ ಸೇವೆಯಲ್ಲಿ ಒಂದು ಕಪ್ಪು ಚುಕ್ಕೆ ಇಲ್ಲದೇ ಉತ್ತಮ ಸೇವೆ ಸಲ್ಲಿಸಿ, ಎಲ್ಲಾ ವರ್ಗದ ನೌಕರರು ಹಾಗೂ ಅಧಿಕಾರಿಗಳಿಗೆ ಪ್ರೀತಿ ಪಾತ್ರರಾಗಿದ್ದರು. ಅವರ ಒಳ್ಳೆತನ ಒಂದೇ ಕಡೆ ಕರ್ತವ್ಯ ನಿರ್ವಹಿಸುವಂತೆ ಮಾಡಿದೆ. ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘ ಗೌರವ ಅಧ್ಯಕ್ಷ ಮಹದೇವಸ್ವಾಮಿ, ಖಜಾಂಚಿ ಶಿವಕುಮಾರಯ್ಯ, ರಾಜ್ಯ ಪರಿಷತ್ ಸದಸ್ಯ ನಟರಾಜು, ಮಹದೇವಸ್ವಾಮಿ, ಮಹದೇವಯ್ಯ, ಮಹೇಂದ್ರ, ವಾಸು, ಪಿಬ್ಲ್ಯುಡಿ ಇಲಾಖೆಯ ನಂಜುಂಡ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಅಧ್ಯಕ್ಷ ಸಿ.ಕೆ. ರಾಮಸ್ವಾಮಿ ಮೊದಲಾದವರು ಇದ್ದರು.

### ಕುಂತೂರು ಗ್ರಾ.ಪಂ.ಹಲವು ಗ್ರಾಮಗಳಲ್ಲಿ

## ಸಮುದಾಯ ಭವನಗಳ ಉದ್ಘಾಟನೆ, ಭೂಮಿಪೂಜೆ

ಕೊಳ್ಳೇಗಾಲ: ತಾಲೂಕಿನ ಕುಂತೂರು ಗ್ರಾ.ಪಂ.ಹಲವು ಗ್ರಾಮಗಳಲ್ಲಿ ಸಮುದಾಯ ಭವನಗಳ ಉದ್ಘಾಟನೆ ಹಾಗೂ ಭೂಮಿಪೂಜೆಯನ್ನು ಶಾಸಕ ಎಆರ್ ಕೃಷ್ಣಮೂರ್ತಿ ಅವರು ನೇರವೇರಿಸಿದರು.

ಮಲ್ಲಹಳ್ಳಿಮಾಳ ಗ್ರಾಮದಲ್ಲಿ ನಿರ್ಮಾಣವಾಗಿರುವ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ನೂತನ ಕಟ್ಟಡ ಉದ್ಘಾಟನೆ ಹಾಗೂ ಕುಂತೂರು ಮೋಳೆ ಗ್ರಾಮದಲ್ಲಿ ನಿರ್ಮಾಣವಾಗಿರುವ ಭಗೀರಥ ಉಪ್ಪಾರ ಸಮುದಾಯ ಭವನ ನೂತನ ಕಟ್ಟಡ ಉದ್ಘಾಟನೆ ಮತ್ತು ಮುಂದುವರಿದ ಕಾಮಗಾರಿಗೆ ಭೂಮಿ ಪೂಜೆ





ನೆರವೇರಿಸಿದರು. ಕುಂತೂರು ಗ್ರಾಮದಲ್ಲಿ 10 ಲಕ್ಷ ವೆಚ್ಚದಲ್ಲಿ ಅಂಬೇಡ್ಕರ್ ಭವನ ಮುಂದುವರೆದ ಕಾಮಗಾರಿಗಳಿಗೆ ಶಾಸಕ ಎ ಆರ್ ಕೃಷ್ಣಮೂರ್ತಿ ನೇರವೇರಿಸಿ ಮಾತನಾಡಿದ ಅವರು ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು. ಆದಷ್ಟು ಬೇಗ ಕಾಮಗಾರಿಗಳನ್ನು ಪೂರ್ಣಗೊಳಿಸಿ ಗ್ರಾಮಸ್ಥರ ಸದುಪಯೋಗಕ್ಕೆ ಬಳಕೆಯಾಗಲಿ ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರು ಚಂದ್ರು, ತಾಲ್ಲೂಕು ಅಧ್ಯಕ್ಷರು ರಾಜೇಂದ್ರ, ಯಳಂದೂರು ತಾಲ್ಲೂಕು ಅಧ್ಯಕ್ಷರು ಪ್ರಭುಪ್ರಸಾದ್, ಉಪ್ಪಾರ ನಿಗಮ ಮಾಜಿ ರಾಜ್ಯಾಧ್ಯಕ್ಷ ಶಿವಕುಮಾರ್, ಕುಂತೂರು ಗ್ರಾ.ಪಂ ಅಧ್ಯಕ್ಷರು ಗಂಗಮ್ಮಣಿ, ಉಪಾಧ್ಯಕ್ಷರು ನಾಗರತ್ನಮ್ಮ, ಉಪ್ಪಾರ ಸಂಘದ ಅಧ್ಯಕ್ಷರು ರಮೇಶ್, ತಾ.ಪಂ ಮಾಜಿ ಉಪಾಧ್ಯಕ್ಷರು ಮಲ್ಲಣ್ಣ, ಮುಖಂಡರು ತೋಟೇಶ್, ಚೇತನ್ ದೊರೆ, ತಾ.ಪಂ ಇ ಓ ಗುರುಶಾಂತಪ್ಪ ಬೆಳ್ಳುಂಡಗಿ, ನಿರ್ಮಿತಿ ಕೇಂದ್ರ ಉಪಯೋಜನಾ ವ್ಯವಸ್ಥಾಪಕರು ಪ್ರತಾಪ್, ಗುತ್ತಿಗೆದಾರ ರಾಚಯ್ಯ ಗೂಬ್ಲಿಪುರ ಇತರರು ಇದ್ದರು.

# ವಿಶೇಷ ಚೇತನರಿಗೆ ಅನುಕಂಪ-ಅವಕಾಶ ಕಲ್ಪಿಸಿ: ಎಂ. ಆನಂದ್



**ಮಂಡ್ಯ:** ವಿಶೇಷಚೇತನರಿಗೆ ಅನುಕಂಪದ ಜತೆಗೆ ಸಮಾಜದ ಪ್ರತಿ ಕ್ಷೇತ್ರ, ರಂಗದಲ್ಲೂ ಪ್ರತಿಭೆ ಅನಾವರಣಗೊಳಿಸಲು ಅವಕಾಶಗಳನ್ನು ಕಲ್ಪಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಆನಂದ್ ಅವರು ಹೇಳಿದರು.

ಅವರು ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗ್ರಾಮೀಣ ಪುನರ್ವಸತಿ ಯೋಜನೆ ಹಾಗೂ ಜಿಲ್ಲೆಯಲ್ಲಿ ವಿಕಲಚೇತನರ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಸ್ವಯಂಸೇವಾ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ವಿಶ್ವ ವಿಕಲಚೇತನರ ದಿನಾಚರಣೆ –2025 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿಶೇಷ ಚೇತನರ ದಿನಾಚರಣೆಯ ಪ್ರಮುಖ ಉದ್ದೇಶ ವಿಶೇಷ ಚೇತನರ ಹಕ್ಕು, ಯೋಗ, ಕ್ಷೇಮ ವೃದ್ಧಿಸುವುದು ಹಾಗೂ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವುದಾಗಿದೆ. ಸಮಾಜದಲ್ಲಿ ಉನ್ನತ ಸ್ಥಾನ, ಮಾನ ಹೊಂದಲು ಪ್ರತಿ ಕ್ಷೇತ್ರದಲ್ಲೂ ವಿಶೇಷ ಚೇತನರಿಗೆ ಅವಕಾಶ ಕಲ್ಪಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದರು.

ಸರ್ಕಾರವು ವಿಶೇಷ ಚೇತನರಿಗಾಗಿ ಅನೇಕ ಯೋಜನೆ ಹಾಗೂ ಸೌಲಭ್ಯಗಳನ್ನು ಜಾರಿಗೆ ತಂದಿದೆ. ಯೋಜನೆಗಳು ಯಶಸ್ವಿಯಾಗುವುದು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಾಗ ಮಾತ್ರ ಆಗಾಗಿ ವಿಶೇಷ ಸಂಸ್ಥೆಗಳು ಹಾಗೂ ಅಧಿಕಾರಿಗಳು ವಿಶೇಷ ಚೇತನರಿಗಾಗಿ ರೂಪಿಸಿರುವ ಸರ್ಕಾರದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ನಿಷ್ಪಕ್ಷಪಾತವಾಗಿ ಕೆಲಸ ನಿರ್ವಹಿಸಿ ಎಂದರು.

ಭಾರತ ದೇಶವು ಶ್ರೇಷ್ಠವಾದ ಸಂವಿಧಾನವನ್ನು ಹೊಂದಿದೆ. ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕವಾಗಿ ಗೌರವಾನ್ವಿತ ಜೀವನ ನಡೆಸಲು ಎಲ್ಲರಿಗೂ ಅವಕಾಶವಿದೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ವಿಶೇಷಚೇತನರಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಉಚಿತ ಅರಿವು –ನೆರವು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ ಪ್ರತಿಯೊಬ್ಬರೂ ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಹೇಳಿದರು.

ದೇಶದ ಪ್ರತಿಯೊಬ್ಬ ವಿಕಲಚೇತನರು ತಮಗಾಗಿ ಸೀಮಿತವಾಗಿರುವ ಹಕ್ಕು, ಸೌಲಭ್ಯಗಳನ್ನು ಪಡೆಯುವ ಅಧಿಕಾರ ಹೊಂದಿದ್ದಾರೆ. ಹಕ್ಕುಗಳಿಂದ ವಂಚಿತರಾಗದೆ ಹಕ್ಕು, ಸೌಲಭ್ಯಗಳನ್ನು ಕೇಳಿ ಪಡೆಯಿರಿ ಹಾಗೂ ಎಲ್ಲಾ ರಂಗದಲ್ಲೂ ಅವಕಾಶ ಪಡೆದು ಯಶಸ್ವಿಯುತವಾದ ಬದುಕು ನಿಮ್ಮದಾಗಿಸಿಕೊಳ್ಳಿ ಎಂದು ಆತ್ಮಸ್ಥೈರ್ಯದ ನುಡಿಗಳನ್ನು ಹೇಳಿದರು.

ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ. ಹೆಚ್. ಕೃಷ್ಣ ಅವರು ಮಾತನಾಡಿ ವಿಶೇಷ ಚೇತನರಲ್ಲಿ ವಿಶೇಷವಾದ ಶಕ್ತಿಯಿದೆ. ಮಾನಸಿಕವಾಗಿ ಅಂಗವೈಫಲ್ಯತೆ ನನ್ನಲ್ಲಿದೆ ಎಂಬುವುದನ್ನು ಮರೆತು ಸದೃಢವಾದ ಬದುಕು ನಿಮ್ಮದಾಗಿಸಿಕೊಳ್ಳಲು ಸರ್ಕಾರವು ಹಲವಾರು ಸೌಲಭ್ಯಗಳನ್ನು ವಿಶೇಷ ಚೇತನರಿಗಾಗಿ ಒದಗಿಸುತ್ತಿದೆ ಎಂದರು.

ಕಂದಾಯ ಇಲಾಖೆ ಮೂಲಕ ಮಾಸಿಕ ನಿರ್ವಹಣಾ ಭತ್ಯೆಯನ್ನು ವಿಶೇಷ ಚೇತನರಿಗಾಗಿ ನೀಡುತ್ತಿದ್ದು, ಶೇ 40 ರಿಂದ 74% ಅಂಗವೈಫಲ್ಯತೆ ಹೊಂದಿರುವವರಿಗೆ ಮಾಸಿಕ ರೂ.800, ಶೇ 75 ರಿಂದ 100% ಅಂಗವೈಫಲ್ಯತೆ ಹೊಂದಿರುವವರಿಗೆ 1,400 ಹಾಗೂ ಭೌತಿಕ ಅಂಗವಿಕಲತೆ ಹೊಂದಿರುವ ವಿಶೇಷ ಚೇತನರಿಗೆ ರೂ. 2000 ಹಣ ನೀಡಲಾಗುವುದು ಎಂದು ತಿಳಿಸಿದರು.

ವಿಶೇಷಚೇತನ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಅನುಕೂಲವಾಗಲು ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ, ಟಾಕಿಂಗ್ ಲ್ಯಾಪ್ ಟಾಪ್ ಯೋಜನೆ ಹಾಗೂ ಸಾಧನ ಸಲಕರಣೆಗಳ ಸೌಲಭ್ಯ ಹೀಗೆ ಅನೇಕ ಸೌಲಭ್ಯಗಳಿವೆ ಪ್ರತಿಯೊಬ್ಬರೂ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಎಂದರು

ಕಾರ್ಯಕ್ರಮದಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು, ವಿಶೇಷ ಚೇತನರಿಗೆ ಸಾಧನ ಸಲಕರಣೆ ವಿತರಿಸಲಾಯಿತು ಹಾಗೂ ವಿಶೇಷ ಸಾಧಕರಿಗೆ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಭಾಧ್ಯಕ್ಷೆ ಮೀರಾ ಶಿವಲಿಂಗಯ್ಯ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಕೋಮಲ್ ಕುಮಾರ್, ಯುವ ಸಬಲೀಕರಣ ಇಲಾಖೆ ಅಧೀಕ್ಷಕರಾದ ನಾಗಭೂಷಣ್, ಮುಖಂಡರಾದ ರಮೇಶ್, ಸಂಪನ್ಮೂಲ ವ್ಯಕ್ತಿ ನಂದೀಶ್ ಹಾಗೂ ಜಿಲ್ಲೆಯಲ್ಲಿನ ವಿಶೇಷ ಚೇತನರ ವಿದ್ಯಾ ಸಂಸ್ಥೆಯ ಮುಖ್ಯಸ್ಥರುಗಳು ಉಪಸ್ಥಿತರಿದ್ದರು.

# ಬಿಜಾಪುರದಲ್ಲಿ ಎನ್‌ಕೌಂಟರ್‌ಗೆ ಐವರು ನಕ್ಸಲರು ಬಲಿ; ಒಬ್ಬ ಪೊಲೀಸ್ ಹುತಾತ್ಮ



ಬಿಜಾಪುರ: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ಬುಧವಾರ ನಡೆದ ಎನ್‌ಕೌಂಟರ್‌ನಲ್ಲಿ ಐವರು ನಕ್ಸಲರನ್ನು ಹತ್ಯೆ ಮಾಡಲಾಗಿದೆ. ಗುಂಡಿನ ಕಾಳಗದಲ್ಲಿ ಜಿಲ್ಲಾ ಮೀಸಲು ಪೊಲೀಸ್ ಪಡೆ(ಡಿಆರ್‌ಜಿ)ಯ ಒಬ್ಬ ಜವಾನ್ ಹುತಾತ್ಮರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗುಂಡಿನ ಚಕಮಕಿಯಲ್ಲಿ ಮತ್ತೊಬ್ಬ ಜವಾನ್ ಗಾಯಗೊಂಡಿದ್ದು, ಕಾರ್ಯಾಚರಣೆ ಇನ್ನೂ ಮುಂದುವರೆದಿದೆ ಎಂದು ಅವರು ಹೇಳಿದ್ದಾರೆ.

ದಂತೇವಾಡ ಜಿಲ್ಲೆಯ ಪಕ್ಕದಲ್ಲಿರುವ ಗಂಗಲೂರು ಪ್ರದೇಶದ ಕಾಡಿನಲ್ಲಿ ಭದ್ರತಾ ಸಿಬ್ಬಂದಿಯ ಜಂಟಿ ತಂಡ ನಕ್ಸಲ್ ವಿರೋಧಿ ಕಾರ್ಯಾಚರಣೆಗೆ ಹೊರಟಿದ್ದಾಗ ಗುಂಡಿನ ಚಕಮಕಿ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ರಾಜ್ಯ ಪೊಲೀಸರ ಎರಡೂ ಘಟಕಗಳಾದ ಡಿಆರ್‌ಜಿ ಮತ್ತು ವಿಶೇಷ ಕಾರ್ಯಪಡೆ ಹಾಗೂ ಕೋಬ್ರಾ(ಕಮಾಂಡೋ ಬೆಟಾಲಿಯನ್ ಫಾರ್ ರೆಸಲ್ಯೂಟ್ ಆಕ್ಷನ್) ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ಅವರು ಹೇಳಿದ್ದಾರೆ. ಇಲ್ಲಿಯವರೆಗೆ, ಸ್ಥಳದಿಂದ ಐದು ನಕ್ಸಲರ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. "ಕಾರ್ಯಾಚರಣೆಯಲ್ಲಿ ಒಬ್ಬ ಡಿಆರ್‌ಜಿ ಸಿಬ್ಬಂದಿ ಹುತಾತ್ಮರಾಗಿದ್ದು, ಮತ್ತೊಬ್ಬ ಜವಾನ್ ಗಾಯಗೊಂಡಿದ್ದಾರೆ. ಗಾಯಗೊಂಡ ಜವಾನ್‌ನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ" ಎಂದು ಅವರು ಹೇಳಿದರು.

# ಕೃಷಿ ಮೇಳವನ್ನು ರೈತರು ಸದುಪಯೋಗ ಪಡೆದುಕೊಳ್ಳಿ




ಮಂಡ್ಯ.ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯದ ವತಿಯಿಂದ ಡಿಸೆಂಬರ್ 5 ರಿಂದ 7 ರವರೆಗೂ ನಡೆಯಲಿರುವ ಕೃಷಿ ಮೇಳ 2025 ಅನ್ನು ರೈತರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ಹೇಳಿದ್ದಾರೆ.

ಇಂದು ಕೃಷಿ ಮೇಳ 2025 ರ ಅಂಗವಾಗಿ ಜಿಲ್ಲಾ ಪಂಚಾಯತಿನಿಂದ ವಿಸಿ ಫಾರ್ಮ್ ವರೆಗೂ ಆಯೋಜಿಸಲಾಗಿದ್ದ ಸೈಕಲ್ ಮತ್ತು ಬೈಕ್ ಜಾಥಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೃಷಿಯಲ್ಲಿ ನಾವಿನ್ಯತೆ, ತಂತ್ರಜ್ಞಾನ ಬಳಕೆ ಕುರಿತು ರೈತರಿಗೆ ಮಾಹಿತಿ ನೀಡುವ ಅರ್ಥಪೂರ್ಣವಾದ ಕಾರ್ಯಕ್ರಮ ಇದಾಗಿದ್ದು ಕೃಷಿ ದೇಶದ ಬೆನ್ನೆಲುಬು. ಕೃಷಿಯಲ್ಲಿ ಪ್ರಗತಿ ಹೊಂದಿದಾಗ ಮಾತ್ರ ದೇಶ ಅಭಿವೃದ್ಧಿ ಕಾಣುತ್ತದೆ. ಸದರಿ ಕೃಷಿ ಮೇಳದಲ್ಲಿ ಹೊಸ ಹೊಸ ತಂತ್ರಜ್ಞಾನ ಬಳಕೆ ಮತ್ತು ಹೊಸ ತಳಿಗಳ ಪ್ರದರ್ಶನ ಮಾಡಲಾಗುತ್ತದೆ ಎಲ್ಲಾ ರೈತರು ಕೃಷಿ ಮೇಳದಲ್ಲಿ ಭಾಗವಹಿಸಿ ಎಂದು ಕರೆ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧಿಕಾರಿ ಕೆ.ಆರ್ ನಂದಿನಿ ಅವರು ಮಾತನಾಡಿ ಡಿಸೆಂಬರ್ 5 ರಿಂದ 7 ರವರೆಗೂ ನಡೆಯಲಿರುವ ಕೃಷಿ ಮೇಳ 2025ರ ಕುರಿತಾಗಿ ರೈತರಿಗೆ ಜಾಗೃತಿ ಮೂಡಿಸುವ ಸಲುವಾಗಿ ಇಂದು ಬೈಕ್ ಮತ್ತು ಸೈಕಲ್ ಜಾಥಾ ವನ್ನು ಹಮ್ಮಿಕೊಳ್ಳಲಾಗಿದೆ. ಮಂಡ್ಯ ಜಿಲ್ಲಾ ಪಂಚಾಯತ್ ನಿಂದ ವಿ.ಸಿ ಫಾರ್ಮ್ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ವರೆಗೂ ಜಾಥಾ ಸಾಗಲಿದೆ. ಇದರ ಉದ್ದೇಶ ಕೃಷಿ ಸಂಜೀವಿನಿಯ ಬಲವರ್ಧನೆಯನ್ನು ಹೇಗೆ ಸಾಧಿಸಬೇಕು ಇದರಿಂದ ಜನರಿಗೆ ಹೇಗೆ ಉಪಯೋಗ ಆಗುತ್ತದೆ ಎಂಬುದರ ಕುರಿತ ತಿಳಿಸುವುದು. ಹೊಸ ತಂತ್ರಜ್ಞಾನ ಬಳಸಿ ಸಮಗ್ರ ಕೃಷಿಯಿಂದ ಸುಸ್ಥಿರ ಪಡೆಯಬಹುದು ಎಂಬುದರ ಕುರಿತು ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ರೈತರು ಸಾಮಾನ್ಯ ಜನರು ಸಹ ಕೃಷಿ ಮೇಳದಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆಯಬಹುದು. ಐದು ಜಿಲ್ಲೆಗಳಿಂದ ಬಂದ ಎನ್ ಆರ್ ಎಲ್ ಎಂ ಮಹಿಳಾ ಸ್ವಸಹಾಯ ಗುಂಪಿನ ಮಹಿಳೆಯರು 50 ಹೆಚ್ಚು ಮಳಿಗೆಗಳನ್ನು ಕೃಷಿ ಮೇಳದಲ್ಲಿ ಸ್ಥಾಪನೆ ಮಾಡಲಿದ್ದಾರೆ. ವಿಭಿನ್ನ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತದೆ ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಮಾತನಾಡಿ ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯ ಆದ ನಂತರ ಪ್ರಥಮ ಬಾರಿಗೆ ಕೃಷಿ ಮೇಳವನ್ನು ಆಯೋಜಿಸಲಾಗಿದೆಎಂದು ಹೇಳಿದರು. ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಹರಿಣಿ ಕುಮಾರ್ ಅವರು ಮಾತನಾಡಿ ಐದು ಕೊಡಗು, ಮೈಸೂರು, ಚಾಮರಾಜನಗರ ಸೇರಿದಂತೆ 5 ಜಿಲ್ಲೆಗಳ ರೈತ ಬಾಂಧವರು ಕೃಷಿ ಮೇಳದಲ್ಲಿ ಭಾಗವಹಿಸಲಿದ್ದಾರೆ. ಸಮಗ್ರ ಕೃಷಿಯಿಂದ ಸುಸ್ಥಿರತೆ ಕಾಣಬಹುದು, ರೈತರು ಸಮಗ್ರ ಕೃಷಿಗೆ ಆದ್ಯತೆ ನೀಡಬೇಕು. ಸೂಕ್ತ ವಿಧಾನದ ಮೂಲಕ ವ್ಯವಸಾಯ ಮಾಡಿ ಆದಾಯ ಗಳಿಸುವುದು ಹೇಗೆ ಎಂಬುದರ ಬಗ್ಗೆ ಕೃಷಿ ಮೇಳದಲ್ಲಿ ತಿಳಿಸಲಾಗುವುದು. ರೈತರು ಕೃಷಿ ವಿಜ್ಞಾನಗಳ ಜೊತೆಗೆ ಸಂವಾದ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಹೆಚ್ಚಿನ ರೈತರು ಕೃಷಿ ಮೇಳದಲ್ಲಿ ಭಾಗವಹಿಸಿ ಕೃಷಿ ಮೇಳದಲ್ಲಿ ಪ್ರಯೋಜನ ಪಡೆಯಬೇಕು ಎಂದು ಹೇಳಿದರು.

# ಎರಡೂವರೆ ವರ್ಷದಲ್ಲಿ ಜಿಲ್ಲೆಯ ಅಭಿವೃದ್ಧಿಗೆ 10 ಸಾವಿರ ಕೋಟಿ ಅನುದಾನ: ಎನ್ ಚಲುವರಾಯಸ್ವಾಮಿ



ಮಂಡ್ಯ: ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ಎರಡೂವರೆ ವರ್ಷಗಳಲ್ಲಿ ಮಂಡ್ಯ ಜಿಲ್ಲೆಗೆ 10 ಸಾವಿರಕ್ಕೂ ಹೆಚ್ಚು ಅನುದಾನವನ್ನು ಜಿಲ್ಲೆಯ ಅಭಿವೃದ್ಧಿಗೆ ತರಲಾಗಿದೆ ಎಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿಬುಧವಾರ ಹೇಳಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ವತಿಯಿಂದ ಮದ್ದೂರಿನ ಕೊಪ್ಪದಲ್ಲಿ ಆಯೋಜಿಸಲಾಗಿದ್ದ ಜನಸ್ಪಂದನ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಸಚಿವರು ಗ್ಯಾರಂಟಿ ಯೋಜನೆಗಳನ್ನು ವಿರೋಧಿಸಿದವರು ಇಂದು ರಾಷ್ಟ್ರಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ನೀಡಿದಷ್ಟು ಇನ್ಯಾವುದೇ ರಾಜ್ಯಗಳಲ್ಲಿ ನೀಡಿಲ್ಲ ಎಂದು ಹೇಳಿದರು.

ಪಂಚ ಗ್ಯಾರಂಟಿಗಳ ಮೂಲಕ ಪ್ರತಿ ತಾಲೂಕಿಗೆ ವಾರ್ಷಿಕ ರೂ 250 ಕೋಟಿ ಅನುದಾನವನ್ನು ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲೂ ಸಹ ಗ್ಯಾರಂಟಿ ಯೋಜನೆ ಮುಂದುವರೆಯುತ್ತದೆ. ಮುಂದಿನ ಚುನಾವಣೆಯಲ್ಲೂ ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಪಂಚ ಗ್ಯಾರಂಟಿಗಳನ್ನು ಘೋಷಿಸಲಾಗುವುದು ಎಂದು ತಿಳಿಸಿದರು.

ಕೃಷಿ ಇಲಾಖೆ ವತಿಯಿಂದ ಸದರಿ ವರ್ಷದ ಏಪ್ರಿಲ್ ನಿಂದ ಇಲ್ಲಿಯವರೆಗೂ ಕೊಪ್ಪ ಹೋಬಳಿಯ 520 ಫಲಾನುಭವಿಗಳಿಗೆ 150 ಲಕ್ಷ ರೂಗಳ ಸಹಾಯಧನ ನೀಡಲಾಗಿದೆ. ಒಟ್ಟು ಜಿಲ್ಲೆಯಲ್ಲಿ 49,330 ಫಲಾನುಭವಿಗಳಿಗೆ ಕೃಷಿ ಇಲಾಖೆಯ ವಿವಿಧ ಯೋಜನೆಗಳಿಂದ 2390.80 ಲಕ್ಷಗಳ ಸಹಾಯಧನ ನೀಡಲಾಗಿದೆ. ಒಬ್ಬರಿಗೆ ಸುಮಾರು 50 ಲಕ್ಷದವರೆಗೂ ಸಬ್ಸಿಡಿ ನೀಡಲಾಗಿದೆ ಎಂದರು.

ನಮ್ಮ ಸರ್ಕಾರ ವಿವಿಧ ಯೋಜನೆಗಳ ಮೂಲಕ ಜನರಿಗೆ ಅಭಿವೃದ್ಧಿ ಕಾರ್ಯವನ್ನು ಮಾಡಲಾಗುತ್ತಿದೆ. ಕೊಪ್ಪ ಹೋಬಳಿಯಲ್ಲಿ ಇಲ್ಲಿಯವರೆಗೆ 1300 ಹೊಸ ಪೌತಿ ಖಾತೆ, 5800 ಹಳೆ ಪೌತಿ ಖಾತೆ ಹಾಗೂ 150 ಪೊಡಿ ಗಳನ್ನು ಪೌತಿ ಖಾತೆ ಆಂದೋಲನದ ಮೂಲಕ ಮಾಡಲಾಗಿದೆ. ಜಿಲ್ಲೆಯಲ್ಲಿ ಸುಮಾರು 18.31 ಸಾವಿರ ಕಂದಾಯ ಇಲಾಖೆಯ ದಾಖಲೆ ಹಾಳೆಗಳನ್ನು ಈಗಾಗಲೇ ಸ್ಕ್ಯಾನ್ ಮಾಡಲಾಗಿದೆ. 33 ಸಾವಿರ ಕಂದಾಯ ಪ್ರಕರಣಗಳನ್ನು ಇತ್ಯರ್ಥ ಮಾಡಲಾಗಿದೆ ಎಂದು ಹೇಳಿದರು.

ಕೃಷಿ ಸಚಿವನಾದ ನಂತರವೂ ಸಹ ಪ್ರತಿ ವಾರ ಕನಿಷ್ಠ ಒಂದು ಬಾರಿಯಾದರೂ ಜಿಲ್ಲೆಗೆ ಬಂದು ಜನರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸುತ್ತಿದ್ದೇನೆ. ನಮ್ಮ ದೇಶದಲ್ಲಿ ಸುಮಾರು 60% ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ನಾನು ಕೃಷಿ ಸಚಿವನಾಗಿರುವುದರಿಂದ ಜವಾಬ್ದಾರಿ ಹೆಚ್ಚಿದೆ ಜನರು ಸಚಿವರ ಕಚೇರಿಗೆ ಭೇಟಿ ನೀಡಿ ತಮ್ಮ ಅಹವಾಲು ಗಳನ್ನು ಸಲ್ಲಿಸಬಹುದು. ಕಾನೂನಿನ ಪ್ರಕಾರ ಮಾಡಬಹುದಾದ ಕಾರ್ಯಗಳನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ಭರವಸೆ ನೀಡಿದರು.


ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಎರಡುವರೆ ವರ್ಷಗಳಿಂದ ಕೊಪ್ಪ ಹೋಬಳಿಯ ಅಭಿವೃದ್ಧಿಗೆ ಸರಿಸುಮಾರು 300 ರಿಂದ 400 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಕೊಪ್ಪದಲ್ಲಿ ನಾಡಕಚೇರಿ ತೆರೆಯಲು 45 ಲಕ್ಷ ಮಂಜೂರು ಮಾಡಲಾಗಿದೆ. ಶೀಘ್ರದಲ್ಲೇ ಕಾಮಗಾರಿ ಪ್ರಾರಂಭವಾಗುತ್ತದೆ ಎಂದು ಹೇಳಿದರು.

ಜಿಲ್ಲೆಯ ರೈತರ ಅಭಿವೃದ್ಧಿಗಾಗಿ ಮಂಡ್ಯ ಜಿಲ್ಲೆಗೆ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯವನ್ನು ತರಲಾಗಿದೆ. ಫಿಲಿಪೈನ್ಸ್ ದೇಶದ ಅಂತಾರಾಷ್ಟ್ರೀಯ ಭತ್ತ ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿ ನಮ್ಮ ವಾತಾವರಣಕ್ಕೆ ಸರಿಹೊಂದುವ ಹೊಸ ಭತ್ತದ ತಳಿಗಳನ್ನು ಜಿಲ್ಲೆಗೆ ತರಲು ಒಡಂಬಡಿಕೆ ಮಾಡಲಾಗಿದೆ. ಈಗಾಗಲೇ ಗುರುತಿಸಲಾದ ಭತ್ತದ ತಳಿಯನ್ನು ನಮ್ಮದೇ ರಾಜ್ಯದ ನಾಗಮಂಗಲ ಹಾಗೂ ಮಳವಳ್ಳಿಯ ವಿಜ್ಞಾನಿಗಳು ಅಭಿವೃದ್ಧಿ ಪಡಿಸಿದ ಭತ್ತದ ತಳಿಯನ್ನು ರಾಜ್ಯಕ್ಕೆ ತರಲಾಗುವುದು ಎಂದು ಹೇಳಿದರು.

ಜಿಲ್ಲೆಯ ರೈತರ ಬೇಡಿಕೆಗೆ ಸ್ಪಂದಿಸಿ ಮುಂದಿನ ಸೋಮವಾರದಿಂದ ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಮತ್ತು ರಾಗಿ ಖರೀದಿಯನ್ನು ಪ್ರಾರಂಭಿಸಲಾಗುವುದು ಎಂದರು.

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಅವರು ಮಾತನಾಡಿ 3500 ಕೋಟಿ ಅನುದಾನವನ್ನು ಮಂಡ್ಯ ಜಿಲ್ಲೆಯ ನೀರಾವರಿ ಅಭಿವೃದ್ಧಿಗೆ ಕೃಷಿ ಸಚಿವರು ತಂದಿದ್ದಾರೆ. ಮಂಡ್ಯ ಜಿಲ್ಲೆಯ ಇತಿಹಾಸದಲ್ಲೇ ಯಾರು ನೀರಾವರಿ ಅಭಿವೃದ್ಧಿಗೆ ಇಷ್ಟು ಅನುದಾನವನ್ನು ತಂದಿಲ್ಲ. ಕೊಪ್ಪ ಭಾಗದ ವಿವಿಧ ಕಾಮಗಾರಿಗಳಿಗೆ 137.99 ಕೋಟಿ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದರು. ಮಂಡ್ಯ ಜನರ ಜೀವನಾಡಿ ಮೈ ಶುಗರ್ ಸಕ್ಕರೆ ಕಾರ್ಖಾನೆ ಸ್ಥಗಿತಗೊಂಡಿತ್ತು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ಕೃಷಿ ಸಚಿವರು ಮುಖ್ಯಮಂತ್ರಿಗಳ ಬಳಿ ಇದರ ಕುರಿತು ಪ್ರಸ್ತಾಪಿಸಿದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 50 ಕೋಟಿ ಅನುದಾನವನ್ನು ಮೈ ಶುಗರ್ ಕಾರ್ಖಾನೆ ಬಿಡುಗಡೆ ಮಾಡಿ ಮೈ ಶುಗರ್ ಕಾರ್ಖಾನೆ ಪುನಶ್ಚೇತನ ಮಾಡಿದ್ದಾರೆ ಎಂದು ತಿಳಿಸಿದರು.

# ಅಭಯರಾಣಿ ಅಬ್ಬಕ್ಕ!




ಅಂದವೋ ಅಂದವು ಕನ್ನಡ ನಾಡುನನ್ನ ಗೂಡು
ಅಲ್ಲಿದೆ ನೋಡುಚಂದವೋ ಚಂದವು ನನ್ನಯ
ಗೂಡುನನ್ನ ಹಾಡು ಅಲ್ಲಿದೆ ನೋಡುಕಾವೇರಿ ಹರಿವಳು,
ನನ್ನ ಮನೆಯ ಅಂಗಳದಲ್ಲಿಕಸ್ತೂರಿ ಮೆರೆವಳು, ನನ್ನ
ಮಡದಿ ಮಲ್ಲಿಗೆಯಲ್ಲಿ
ಅಂದವೋ ಅಂದವು ಕನ್ನಡ ನಾಡುನನ್ನ ಗೂಡು
ಅಲ್ಲಿದೆ ನೋಡು
ನನ್ನ ಮನೆಯ ಮುಂದೆ ಸಹ್ಯಾದ್ರಿ ಗಿರಿಯ
ಹಿಂದೆದಿನವು ನೂರು ಶಶಿಯು ಹುಟ್ಟಿ ಬಂದರೂನನ್ನ
ರತಿಯ ಮೊಗವ ಮರೆಮಾಚದಂತ ನಗುವಅವನೆಂದು
ತಾರಲಿಲ್ಲವೇ ಪ್ರಿಯೇ

ಪೋರ್ಚುಗೀಸರ ವಿರುದ್ಧದ ಮೊದಲ ಹೋರಾಟಗಾರ್ತಿ ಎಂದೇ ಇತಿಹಾಸದಲ್ಲಿ ಉಳಿದ ರಾಣಿ ಅಬ್ಬಕ್ಕದೇವಿಯು 16ನೇ ಶತಮಾನದ ದ್ವಿತೀಯಾರ್ಧದಲ್ಲಿ ಪೋರ್ಚುಗೀಸರ ವಸಾಹತುಶಾಹಿ ಆಕಾಂಕ್ಷೆಗಳ ವಿರುದ್ಧ ಹೋರಾಡಿದ ಮೊದಲ ಭಾರತೀಯ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ಎಂದು ಪ್ರಸಿದ್ಧರಾಗಿದ್ದಾರೆ. ಆಕೆಯ ಅಸಾಧಾರಣ ಶೌರ್ಯದಿಂದಾಗಿ ಅವರಿಗೆ 'ಅಭಯ ರಾಣಿ' (ನಿರ್ಭೀತ ರಾಣಿ) ಎಂಬ ಬಿರುದು ಬಂದಿತ್ತು.

ಪ್ರಮುಖ ಅಂಶಗಳು

* ರಾಜ್ಯ ಮತ್ತು ರಾಜಧಾನಿ: ಅಬ್ಬಕ್ಕದೇವಿಯು ಮೂಡುಬಿದಿರೆ ಪ್ರದೇಶವನ್ನಾಳಿದ ಚೌಟ ವಂಶಕ್ಕೆ ಸೇರಿದವರು. ಬಂದರು ನಗರಿ ಉಳ್ಳಾಲವು (ಪ್ರಸ್ತುತ ಮಂಗಳೂರು ಬಳಿ) ಆಕೆಯ ರಾಜಧಾನಿಯಾಗಿತ್ತು.
* ಹೋರಾಟದ ಕಾರಣ: ಉಳ್ಳಾಲವು ಪ್ರಮುಖ ಮಸಾಲೆ ವ್ಯಾಪಾರದ ಕೇಂದ್ರವಾಗಿತ್ತು. ಈ ಆಯಕಟ್ಟಿನ ಬಂದರು ನಗರವನ್ನು ವಶಪಡಿಸಿಕೊಂಡು ವ್ಯಾಪಾರದ ಮೇಲೆ ಹಿಡಿತ ಸಾಧಿಸಲು ಪೋರ್ಚುಗೀಸರು ನಿರಂತರವಾಗಿ ಯತ್ನಿಸಿದರು.
* ಕಪ್ಪ (ಕಾಣಿಕೆ) ನಿರಾಕರಣೆ: ಪೋರ್ಚುಗೀಸರು ಕರಾವಳಿಯ ಅರಸೊತ್ತಿಗೆಗಳು ತಮಗೆ ಕಪ್ಪ ನೀಡಬೇಕು ಎಂದು ಒತ್ತಾಯಿಸುತ್ತಿದ್ದರು. ಆದರೆ, ಅಬ್ಬಕ್ಕದೇವಿ ಅವರ ರಾಜಕೀಯ ಮತ್ತು ಆರ್ಥಿಕ ನಿರ್ಬಂಧಗಳನ್ನು ಪ್ರತಿಭಟಿಸಿ ಕಪ್ಪ ನೀಡಲು ನಿರಾಕರಿಸಿದರು. ಈ ನಿರಾಕರಣೆಯೇ ಯುದ್ಧಗಳಿಗೆ ಕಾರಣವಾಯಿತು.





ಪ್ರಮುಖ ಸಾಹಸಮಯ ಘಟನೆಗಳು

ಅಬ್ಬಕ್ಕದೇವಿಯು ಸತತವಾಗಿ ನಾಲ್ಕು ದಶಕಗಳ ಕಾಲ ಪೋರ್ಚುಗೀಸರ ಪ್ರಯತ್ನಗಳನ್ನು ಹಿಮ್ಮೆಟ್ಟಿಸಿದರು.

1. 1555ರ ವಿಜಯ: ಪೋರ್ಚುಗೀಸರು ಕಪ್ಪ ನಿರಾಕರಿಸಿದ ರಾಣಿಯ ವಿರುದ್ಧ ಅಡ್ಮಿರಲ್ ಡಾನ್ ಆಲ್ವರೋ ದ ಸಿಲ್ವೆರಿಯಾ ನೇತೃತ್ವದಲ್ಲಿ ಮೊದಲ ದಾಳಿಯನ್ನು ಕಳುಹಿಸಿದರು. ರಾಣಿ ಅಬ್ಬಕ್ಕಳು ಧೈರ್ಯ ಮತ್ತು ಬುದ್ಧಿವಂತಿಕೆಯಿಂದ ಹೋರಾಡಿ ಅವರನ್ನು ಹಿಮ್ಮೆಟ್ಟಿಸಿದರು.
2. 1568ರ ನಿರ್ಣಾಯಕ ವಿಜಯ: ಪೋರ್ಚುಗೀಸ್ ವೈಸರಾಯ್ ಕಳುಹಿಸಿದ ಸೇನಾಪತಿ ಜಾವೊ ಪೀಕ್ಸೋಟೋ ದೊಡ್ಡ ಸೈನ್ಯದೊಂದಿಗೆ ಉಳ್ಳಾಲವನ್ನು ವಶಪಡಿಸಿಕೊಂಡು ಅರಮನೆ ಪ್ರವೇಶಿಸಿದ. ರಾಣಿ ತಪ್ಪಿಸಿಕೊಂಡು ಮಸೀದಿಯಲ್ಲಿ ಆಶ್ರಯ ಪಡೆದರು.

* ಅದೇ ರಾತ್ರಿ, ಆಕೆ ತನ್ನ 200 ನಿಷ್ಠಾವಂತ ಸೈನಿಕರೊಂದಿಗೆ ಪೋರ್ಚುಗೀಸ್ ಸೇನೆಯ ಮೇಲೆ ಹಠಾತ್ ದಾಳಿ (ಗರಿಲ್ಲಾ ತಂತ್ರ) ನಡೆಸಿದರು.
* ಈ ಹೋರಾಟದಲ್ಲಿ ಸೇನಾಪತಿ ಪೀಕ್ಸೋಟೋ ಮತ್ತು ಸುಮಾರು 70 ಪೋರ್ಚುಗೀಸ್ ಸೈನಿಕರು ಕೊಲ್ಲಲ್ಪಟ್ಟರು. ಇದರಿಂದ ಪೋರ್ಚುಗೀಸರು ಅವಮಾನಗೊಂಡು ಹಿಮ್ಮೆಟ್ಟಬೇಕಾಯಿತು.

3. ಮಂಗಳೂರು ಕೋಟೆ ವಶ: ನಂತರದ ದಾಳಿಗಳಲ್ಲಿ, ಅಬ್ಬಕ್ಕ ರಾಣಿ ಮತ್ತು ಆಕೆಯ ಬೆಂಬಲಿಗರು ಅಡ್ಮಿರಲ್ ಮಸ್ಕರೆನ್ಹಸ್ ಅವರನ್ನು ಕೊಂದು ಮಂಗಳೂರು ಕೋಟೆಯನ್ನು ಪೋರ್ಚುಗೀಸರಿಂದ ತೆರವುಗೊಳಿಸಲು ಒತ್ತಾಯಿಸಿದರು.
4. ಮೈತ್ರಿಕೂಟ ರಚನೆ: ಪೋರ್ಚುಗೀಸರ ವಿರುದ್ಧ ಹೋರಾಡಲು ಆಕೆಯು ಬಿಜಾಪುರದ ಸುಲ್ತಾನ್ ಮತ್ತು ಕ್ಯಾಲಿಕಟ್‌ನ ಝಾಮೊರಿನ್ ಅವರೊಂದಿಗೆ ಮೈತ್ರಿ ಮಾಡಿಕೊಂಡರು.

ಆಕೆಯ ಸೇನೆಯ ವೈಶಿಷ್ಟ್ಯ

ರಾಣಿ ಅಬ್ಬಕ್ಕಳ ಸೇನೆಯು ಹಿಂದೂ ಮತ್ತು ಮುಸ್ಲಿಮರನ್ನು ಒಳಗೊಂಡಿತ್ತು. ಸ್ವತಃ ಜೈನ ಧರ್ಮದವರಾಗಿದ್ದರೂ, ಅವರ ಆಡಳಿತದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಉತ್ತಮ ಪ್ರಾತಿನಿಧ್ಯವನ್ನು ಹೊಂದಿದ್ದರು. ಅವರ ಸೈನ್ಯದಲ್ಲಿಯೂ ಸಹ ಮೀನುಗಾರ ಸಮುದಾಯವಾದ ಮೊಗವೀರರು ಸೇರಿದಂತೆ ಎಲ್ಲಾ ಪಂಗಡಗಳು ಮತ್ತು ಜಾತಿಗಳ ಜನರು ಇದ್ದರು. ಈ ಉದ್ದೇಶಕ್ಕಾಗಿ ಅವರು ಕ್ಯಾಲಿಕಟ್‌ನ ಜಾಮೊರಿನ್ ಮತ್ತು ತುಳುನಾಡಿನ ದಕ್ಷಿಣದಲ್ಲಿರುವ ಇತರ ಮುಸ್ಲಿಂ ಆಡಳಿತಗಾರರೊಂದಿಗೆ ಮೈತ್ರಿ ಮಾಡಿಕೊಂಡರು. ಮೊಗವೀರರು ಮತ್ತು ಬಿಲ್ಲವರ ಬಿಲ್ಲುಗಾರರು ಹಾಗೂ ಮಾಪ್ಲಾದ ಸೈನಿಕರು ಆಕೆಯ ಸೈನ್ಯದಲ್ಲಿದ್ದರು. ಈ ಹಿಂದೂ–ಮುಸ್ಲಿಂ ಒಗ್ಗಟ್ಟು ಆಕೆಯ ಹೋರಾಟದ ಒಂದು ಮಹತ್ವದ ಅಂಶವಾಗಿತ್ತು.

ಅಂತ್ಯ

ಕಾಲಕ್ರಮೇಣ, ಪೋರ್ಚುಗೀಸರು ರಾಣಿಯ ಪತಿ (ಗಂಡ) ಯನ್ನು ಒಲಿಸಿಕೊಂಡು, ಅವರ ಮೂಲಕ ಯುದ್ಧತಂತ್ರಗಳ ಮಾಹಿತಿ ಪಡೆದು ಉಳ್ಳಾಲದ ಮೇಲೆ ದಾಳಿ ಮಾಡಿದರು. ಈ ಯುದ್ಧದಲ್ಲಿ ರಾಣಿ ಸೋತು ಸೆರೆ ಸಿಕ್ಕರು. ಸೆರೆಯಲ್ಲಿಯೂ ಸಹ ಅವರು ದಂಗೆ ಎದ್ದು ಹೋರಾಡುತ್ತಲೇ ವೀರ ಮರಣ ಹೊಂದಿದರು.

ಇತಿಹಾಸದಲ್ಲಿ ರಾಣಿ ಅಬ್ಬಕ್ಕದೇವಿ ಅವರ ಈ ಕೆಚ್ಚೆದೆಯ ಹೋರಾಟವು, ಆಕ್ರಮಣಕಾರಿ ಯೂರೋಪಿಯನ್ ವಸಾಹತುಶಾಹಿ ಶಕ್ತಿಯ ವಿರುದ್ಧ ಭಾರತೀಯರ ಮೊದಲ ಪ್ರತಿರೋಧಗಳಲ್ಲಿ ಒಂದಾಗಿದೆ. ಸ್ವಲ್ಪ ಪರಿಚಿತವಲ್ಲದ ಸಣ್ಣ ರಾಜಪ್ರಭುತ್ವದ ರಾಜ್ಯವಾದ ಉಳ್ಳಾಲದ ರಾಣಿಯಾಗಿದ್ದರೂ, ರಾಣಿ ಅಬ್ಬಕ್ಕ ಅವರು ಅದಮ್ಯ ಧೈರ್ಯ ಮತ್ತು ದೇಶಭಕ್ತಿಯ ಆಕರ್ಷಕ ಮಹಿಳೆಯಾಗಿದ್ದರು. ಝಾನ್ಸಿಯ ರಾಣಿ ಧೈರ್ಯದ ಸಂಕೇತವಾಗಿದ್ದರೂ, ಸುಮಾರು 300 ವರ್ಷಗಳ ಕಾಲ ಅವರ ಪೂರ್ವವರ್ತಿಯಾಗಿದ್ದ ಅಬ್ಬಕ್ಕ ಅವರನ್ನು ಇತಿಹಾಸವು ಹೆಚ್ಚಾಗಿ ಮರೆತುಬಿಟ್ಟಿದೆ. ಪೋರ್ಚುಗೀಸರೊಂದಿಗಿನ ಅವರ ಉಗ್ರ ಯುದ್ಧಗಳು ಸರಿಯಾಗಿ ದಾಖಲಾಗಿಲ್ಲ ಅನ್ನುವುದು ಬಹಳ ನೋವಿನ ಸಂಗತಿ.

ಪೋರ್ಚುಗೀಸರ ಎದೆ ನಡುಗಿಸಿದ್ದ ಕಡಲ ತೀರದ ಆ ರಾಣಿ..! ಸಾಂಪ್ರದಾಯಿಕ ವೃತ್ತಾಂತಗಳ ಪ್ರಕಾರ, ಅವರು ಅತ್ಯಂತ ಜನಪ್ರಿಯ ರಾಣಿಯಾಗಿದ್ದರು ಮತ್ತು ಇಂದಿಗೂ ಅವರು ಜಾನಪದದ ಭಾಗವಾಗಿದ್ದಾರೆ ಎಂಬ ಅಂಶದಿಂದ ಇದು ದೃಢೀಕರಿಸಲ್ಪಟ್ಟಿದೆ. ರಾಣಿಯ ಕಥೆಯನ್ನು ಜಾನಪದ ಹಾಡುಗಳು ಮತ್ತು ತುಳುನಾಡಿನ ಜನಪ್ರಿಯ ಜಾನಪದ ರಂಗಭೂಮಿಯಾದ ಯಕ್ಷಗಾನದ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಪುನರಾವರ್ತಿಸಲಾಗಿದೆ. ಸ್ಥಳೀಯ ಧಾರ್ಮಿಕ ನೃತ್ಯವಾದ ಭೂತ ಕೋಲದಲ್ಲಿ, ಟ್ರಾನ್ಸ್‌ನಲ್ಲಿರುವ ವ್ಯಕ್ತಿತ್ವವು ಅಬ್ಬಕ್ಕ ಮಹಾದೇವಿಯ ಮಹಾನ್ ಕಾರ್ಯಗಳನ್ನು ವಿವರಿಸುತ್ತದೆ. ಅಬ್ಬಕ್ಕನನ್ನು ಕಪ್ಪು ಮತ್ತು ಸುಂದರಿಯಾಗಿ ಚಿತ್ರಿಸಲಾಗಿದೆ, ಯಾವಾಗಲೂ ಸಾಮಾನ್ಯರಂತೆ ಸರಳ ಬಟ್ಟೆಗಳನ್ನು ಧರಿಸುತ್ತಾರೆ. ನ್ಯಾಯವನ್ನು ವಿತರಿಸಲು ತಡರಾತ್ರಿಯವರೆಗೆ ಕೆಲಸ ಮಾಡುವ ಕಾಳಜಿಯುಳ್ಳ ರಾಣಿಯಾಗಿ ಅವಳನ್ನು ಚಿತ್ರಿಸಲಾಗಿದೆ. ಪೋರ್ಚುಗೀಸರ ವಿರುದ್ಧದ ಹೋರಾಟದಲ್ಲಿ ಅಗ್ನಿವನ (ಬೆಂಕಿ–ಬಾಣ) ಬಳಸಿದ ಕೊನೆಯ ವ್ಯಕ್ತಿ ಅಬ್ಬಕ್ಕ ಎಂದು ದಂತಕಥೆಗಳು ಹೇಳುತ್ತವೆ.

ಅಬ್ಬಕ್ಕ ಅವರ ಸ್ಮರಣೆಯನ್ನು ಅವರ ತವರು ಪಟ್ಟಣವಾದ ಉಳ್ಳಾಲದಲ್ಲಿ ಬಹಳವಾಗಿ ಗೌರವಿಸಲಾಗುತ್ತದೆ. "ವೀರ ರಾಣಿ ಅಬ್ಬಕ್ಕ ಉತ್ಸವ"ವು ಅವರ ಸ್ಮರಣಾರ್ಥವಾಗಿ ನಡೆಯುವ ವಾರ್ಷಿಕ ಆಚರಣೆಯಾಗಿದೆ. ಈ ಸಂದರ್ಭದಲ್ಲಿ ಗಣ್ಯ ಮಹಿಳೆಯರಿಗೆ ವೀರ ರಾಣಿ ಅಬ್ಬಕ್ಕ ಪ್ರಶಸ್ತಿ (ಪ್ರಶಸ್ತಿ) ನೀಡಲಾಗುತ್ತದೆ. ಜನವರಿ 15, 2003 ರಂದು, ಭಾರತೀಯ ಅಂಚೆ ಇಲಾಖೆಯು ರಾಣಿ ಅಬ್ಬಕ್ಕ ಅವರ ಕುರಿತು ವಿಶೇಷ ಲಕೋಟೆಯನ್ನು ಬಿಡುಗಡೆ ಮಾಡಿತು. ಬಜ್ಪೆ ವಿಮಾನ ನಿಲ್ದಾಣ ಮತ್ತು ನೌಕಾ ಹಡಗಿಗೆ ರಾಣಿಯ ಹೆಸರಿಡಲು ಕರೆಗಳು ಬಂದಿವೆ. ರಾಣಿಯ ಕಂಚಿನ ಪ್ರತಿಮೆಯನ್ನು ಉಳ್ಳಾಲ ಮತ್ತು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಕರ್ನಾಟಕ ಇತಿಹಾಸ ಅಕಾಡೆಮಿಯು ರಾಜ್ಯ ರಾಜಧಾನಿಯಲ್ಲಿರುವ ಕ್ವೀನ್ಸ್ ರಸ್ತೆಯನ್ನು 'ರಾಣಿ ಅಬ್ಬಕ್ಕ ದೇವಿ ರಸ್ತೆ' ಎಂದು ಮರುನಾಮಕರಣ ಮಾಡಲು ಕರೆ ನೀಡಿದೆ.ನಮ್ಮ ರಾಜ್ಯೋತ್ಸವದ ಸಂಭ್ರಮಕ್ಕೆ ಕಾರಣರಾದ ಇವರೆಲ್ಲರನ್ನೂ ನೆನೆಯುವುದು ನಮ್ಮ ಆದ್ಯ ಕರ್ತವ್ಯವಲ್ಲವೇ ಇಂಥ ವೀರ ವನಿತೆಯ ಸಾಹಸಗಾಥೆಯಿಂದ ಕನ್ನಡಾಂಬೆ ಧನ್ಯಳು!



**ರೂಪ ಮಂಜುನಾಥ
ಹೊಳೆನರಸೀಪುರ**

# ತ್ರಿಮೂರ್ತಿ ಅವತಾರಿ ನಿರ್ಗುಣ ಸಚ್ಚಿದಾನಂದ ಮೂರ್ತಿ


ದತ್ತಾತ್ರೇಯಂ ಮಹಾತ್ಮಾನಂ ವರದಂ
ಭಕ್ತವತ್ಸಲಂ
ಪ್ರಪನ್ನಾರ್ತಿಹರಂ ವಂದೇ ಸ್ಮರ್ತೃಗಾಮೀ ಸನೋವತು.

ಗುರುದೇವ ದತ್ತ ನಮಗೆಲ್ಲಾ ಗುರು ದತ್ತಾತ್ರೇಯ ಎಂದೇ ಪರಿಚಿತ ಪಾವನ ಬೀಡಾದ ಗಾಣಗಾಪುರದಲ್ಲಿ ದತ್ತನ ಪಾದುಕೆ ಅವನ ಇರುವಿಕೆಯನ್ನು, ಅವನ ಐಕ್ಯತ್ವವನ್ನು, ಅವನ ಸ್ವರೂಪವನ್ನು, ಅವನ ಮಹಿಮೆಯನ್ನು, ಅವನ ಶಕ್ತಿಯನ್ನು ಸಾದರಪಡಿಸುತ್ತಾ ಪವಿತ್ರ ಜಾಗೃತ ಕ್ಷೇತ್ರವಾಗಿ ಕಲಿಯುಗದಲ್ಲಿ ಗುರುವೆಂದರೆ ಗುರುದೇವ ದತ್ತನೆಂದು ಇವನ ಪಾದುಕೆ ದರುಶನ ಮಾತ್ರದಿಂದಲೇ ಸನ್ಮಾರ್ಗ ದೊರೆತು ನಮ್ಮಲ್ಲಿನ ಕಲಿಕಲ್ಮಶ ಜಡತ್ವವನ್ನು ಕಳೆದು ವಿವಿಧ ಪಾಪಗಳನ್ನು ತೊಡೆದು ಜೀವನ್ಮುಕ್ತಿಯನ್ನು ಕರುಣಿಸುವ ಪವಿತ್ರ ಭೂಮಿಯಾಗಿ ಕಂಗೊಳಿಸುತ್ತಿದೆ.

ಗಾಣಗಾಪುರವೂ ಪವಿತ್ರ ಭೀಮಾ ನದಿ ತೀರದ ಸಣ್ಣ ಗ್ರಾಮವು ಇಂದು ತ್ರಿಮೂರ್ತಿ ಸ್ವರೂಪಿಯಾದ ದತ್ತಾತ್ರೇಯ ಸ್ವಾಮಿಯಿಂದಾಗಿ ಸಿದ್ದ ಭೂಮಿಯೆನಿಸಿದೆ.

ಪಾದುಕಾ ಶಕ್ತಿ: ಈ ಕ್ಷೇತ್ರದ ವಿಶಿಷ್ಟ ವಿಚಿತ್ರ ಶಕ್ತಿಯ ಸ್ವರೂಪವೆಂದರೆ ಅವನ ಪಾದುಕಾ ಶಕ್ತಿ, ಗಾಣಗಾಪುರವು ದತ್ತನ ಪಾದುಕೆಗಳಿರುವ ಜಾಗೃತ ಪ್ರದೇಶ, ಅವನ ಪಾದುಕೆ ಅದೆಷ್ಟು ಸದೃಢ ಶಕ್ತಿ ಸ್ವರೂಪವೆಂದರೆ ದೆವ್ವ ಭೂತದ ಸಮಸ್ಯೆ ಇರುವ, ದೇಹದಲ್ಲಿ ಪ್ರೇತಾತ್ಮ/ದೆವ್ವಗಳ ಆಹ್ವಾನವಿರುವ, ವಿವಿಧವಾಗಿ ತೊಂದ್ರೆ ಕೊಡುತ್ತಿರುವ ಪಿಶಾಚ ಪೀಡಿತ ಜನರು ಇಲ್ಲಿ ಬಂದರೆ ಸಾಕು ಅನೇಕ ದಿನಗಳಿಂದ ಯಾರ ಅರಿವಿಗೆ ಇರದ ಸ್ವತಃ ಅಂತಹ ದೇಹಜನರು ಈ ಪುಣ್ಯ ಭೂಮಿಯನ್ನು ತಾಕಿದರೆ ಸಾಕು ದೇಹ ಹೊಕ್ಕ ಪ್ರೇತಾತ್ಮ ದೇಹವನ್ನು ಬಿಟ್ಟು ಓಡಿ ಹೋಗಲು ಪರಿತಪಿಸುತ್ತವೆ, ಅವನ ಪಾದುಕೆ ಸ್ವರೂಪವನ್ನು(ನೈಜ್ಯ ಪಾದುಕೆಯಲ್ಲ ಉತ್ಸವ ಪಾದುಕೆ) ಹೊರ ತಂದರೆ ಸಾಕು ಇಂತಹ ಜನರ ಹಾಹಕಾರ ಆಕ್ರಂದನ ಆಳುವ ದೃಶ್ಯಗಳು ಇಲ್ಲಿ ನೆರೆದಿದ್ದ ಜನರನ್ನು ಆಶ್ಚರ್ಯ ಪಡಿಸುವುದು ಅಲ್ಲದೆ ಅವು ಸಾಮಾನ್ಯ ದೃಶ್ಯಗಳಾಗಿ ನಿತ್ಯ ಆರಾಧಕರಿಗೆ ಗೋಚರಿಸುತ್ತವೆ, ದೇವಸ್ಥಾನದ ಮೂಲೆ ಮೂಲೆಯಲ್ಲಿ, ಪ್ರಜ್ಞ ಪ್ರಾಂಗಣದಲ್ಲಿ ಇಂತಹದೇ ಜನರು ತುಂಬಿ ಅವನ ಪಾದುಕೆ ದರುಶನ ಮಾತ್ರದಿಂದಲೇ ಪ್ರೇತ ಭಾದೆ ಕಳೆದುಕೊಂಡು, ಕಮಂಡಲ ಪವಿತ್ರ ತೀರ್ಥ ಪ್ರೋಕ್ಷಣೆ ಜೊತೆಗೆ ನಿವೇದಿತ ಅಲಂಕಾರಿಕ





ಪುಷ್ಪಗಳನ್ನು ದೊರೆತರದ ಫಲವಾಗಿ ಅನಿಷ್ಟಗಳು ಕಳೆದು ಜನರು ಹೊಸ ಜನ್ಮವನ್ನ ಹೊಸ ಬದುಕನ್ನ ಹೊಸ ಭರವಸೆಯನ್ನು ಹೊಂದುತ್ತಾ ಗುರುವಿನ ಗುರು ದತ್ತನ ಶಕ್ತಿಗೆ ಮಾರುಹೋಗಿ ಅವನ ಉಪಾಸಕರಾಗಿ ಅವನ ಅನನ್ಯ ಭಕ್ತರಾಗಿ ಹೋಗುತ್ತಾರೆ.

ಮಧುಕರಿ ಎಂಬ ಮಧು ಪ್ರಸಾದ: ನಾಥ ಪರಂಪರೆಯ ಸಗುಣ ಶಕ್ತಿ ಪೀಠವೆಂದು ಈ ಕ್ಷೇತ್ರ ಪ್ರಸಿದ್ಧವಾಗಿದ್ದು, ನಾಥ ಪಂಥಕ್ಕೆ ಮೂಲ ಬುನಾದಿಯೇ ಪ್ರಭು ದತ್ತಾತ್ರೇಯ ಸ್ವಾಮಿ.

ದತ್ತನು ಭಿಕ್ಷೆಯನ್ನು ಇಂದಿಗೂ ಕ್ಷೇತ್ರದಲ್ಲಿ ಸಂಚರಿಸಿ ಸಾತ್ವಿಕ ಭಕ್ತ ಜನರಿಂದ ಪಡೆಯುತ್ತಾನೆನ್ನುವ ನಂಬಿಕೆ ಇಲ್ಲಿಯದು, ಹಾಗಾಗಿಯೇ ಭಕ್ತಿ ಪಂಥದಲ್ಲಿ ವಿಶಿಷ್ಟ ಆಚರಣೆಯಾದ ಭಿಕ್ಷಾ ಆಹಾರವನ್ನು ಮಧುಕರಿ ಎನ್ನುವ ವಿಶೇಷ ಹೆಸರಿನಿಂದ ಇಲ್ಲಿ ವಿಶೇಷ ಸೇವೆಯಾಗಿ ಪ್ರಸಿದ್ಧಿಯಾಗಿದೆ, ಬೇರಾವ ದೈವಿಕ ಕ್ಷೇತ್ರದಲ್ಲಿ ಮಧುಕರಿ ಅನ್ನೋ ವಿಶೇಷ ಸೇವೆ ಇಲ್ಲ, ಇಂತಹ ಮಧುಕರಿ/ ಮಧುಕರ ಸೇವೆಗೆ ಇಡೀ ಊರಿಗೆ ಊರೇ ತಮ್ಮ ತಮ್ಮ ಮನೆಯಲ್ಲಿ ಆಹಾರವನ್ನು ಮಡಿಯಲ್ಲಿ ಮಾಡಿ ದತ್ತನಿಗೆ ನಿವೇದಿಸಿ ಪ್ರಸಾದರೂಪವಾಗಿ ಕ್ಷೇತ್ರಕ್ಕೆ ಬರುವ ಜನರಿಗೆ ಮಧುಕರಿ ಪ್ರಸಾದ ಸ್ವೀಕರಿಸಲು ತಮ್ಮ ಮನೆಯ ಆಚೆ ಕಾಯುವ ಬರುವ ಜನರಿಗೆ ಸ್ವಲ್ಪವಾದರೂ ತಮ್ಮ ಮನೆಯ ಪ್ರಸಾದ ಸ್ವೀಕರಿಸಲು ಕೇಳಿಕೊಳ್ಳುವ ವಿಶಿಷ್ಟ ಧಾರ್ಮಿಕ ಹೆಗ್ಗುರುತಿನ ಊರಾಗಿದೆ, ಇವರಲ್ಲದೆ ಮಧುಕರಿ ಸೇವೆಯ ಹರಕೆಯನ್ನು ಹೊತ್ತ ಜನರು ದತ್ತನಿಗೆ ಹರಕೆಯ ರೂಪದಲ್ಲಿ ಮಧುಕರಿ ಬೇಡುವುದು ಈ ಕ್ಷೇತ್ರದ ಮತ್ತೊಂದು ವೈಶಿಷ್ಟ್ಯ

ತ್ರೇತಾಯುಗದಲ್ಲಿ ದತ್ತಾತ್ರೇಯ ಸ್ವಾಮಿ ಮಹಾರಾಷ್ಟ್ರ ಗುಜರಾತ ಆದಿಯಾಗಿ ಲೋಕ ಸಂಚಾರ ಮಾಡುತ್ತಾ ಗಿರ್ವರ ನಾರ್ ಪರ್ವತದಲ್ಲಿ ತಪಸ್ಸು ಆಚರಿಸಿ ಬೆಟ್ಟದಲ್ಲಿ ತನ್ನ ಪಾದಗಳ ಹೆಜ್ಜೆ ಗುರುತನ್ನು ಮೂಡಿಸಿದ್ದನ್ನು, ಈ ಗಿರ್ವರ ಪರ್ವತವೇ ಇಂದು ಪವಿತ್ರ ಗಾಣಗಾಪುರ ಕ್ಷೇತ್ರವಾಗಿವಾಗಿದೆ .ದೇವಸ್ಥಾನದ ಹಿಂದೆ ಕಾಣುವ ಪರ್ವತದಲ್ಲಿ ಅವನ ಪುಣ್ಯ ಪದ್ಮ ಪಾದಗಳ ಗುರುತನ್ನು ಇಂದಿಗೂ ನಾವೆಲ್ಲ ಕಾಣಬಹುದು.

ಪಾವನ ದತ್ತ ಪೀಠ : ಬ್ರಹ್ಮನ ಮಗನಾದ ಆತ್ರೇಯ ಋಷಿ ಹಾಗೂ ಮಹಾ ಪತಿವ್ರತೆ ಅನುಸೂಯ ದೇವಿಯರಿಗೆ ಜನಿಸಿದ ದೈವಿಕ ಪುತ್ರನು, ಇವನ ಹುಟ್ಟು ವಿಶೇಷವಾಗಿಯೇ ಜರುಗಿತು, ಅನುಸೂಯ ಮಾತೆಯ ಪಾವಿತ್ರ್ಯದ ಪರೀಕ್ಷೆಗೆ ಬ್ರಹ್ಮ ವಿಷ್ಣು ಮಹೇಶ್ವರರ ನೈಜ್ಯ ರೂಪ ತೊರೆದು ಇವಳಲ್ಲಿ ಭಿಕ್ಷೆಗೆ ಬಂದು ಬೆತ್ತಲಾಗಿಯೇ ನೀಡಬೇಕೆನ್ನುವ ಪರೀಕ್ಷೆಯನ್ನು ಅನುಸೂಯ ದೇವಿ ಬಂದಿರುವರು ತ್ರಿಮೂರ್ತಿಗಳೆಂದು ಅರಿತು ತನ್ನ ತಪೋ ಬಲದಿಂದ ಬಾಲವಟುಗಳಾಗಿ ಮಾಡಿ ತನ್ನ ಎದೆಯ ಹಾಲನ್ನು ಕುಡಿಸಿದಳು, ತ್ರಿ ಮೂರ್ತಿಗಳಿಗೆ ಮಾತೃತ್ವ ತೋರಿದ ಪವಿತ್ರತೆಗೆ ಪ್ರಸನ್ನರಾಗಿ ಅವರ ವರ ಪ್ರಸಾದಿಂದ ದತ್ತನಾಗಿ ಮೂರು ಸ್ವರೂಪಗಳನ್ನು ತ್ರಿಮುಖಿ ರೂಪಿಯಾಗಿ ಆತ್ರೇಯ ಮಗನೆನ್ನುವ ಕಾರಣಕ್ಕೆ ಗುರುದೇವನು ದತ್ತಾತ್ರೇಯನಾಗಿ ಲೋಕೋದ್ಧಾರಕೆ ಕಲಿಯುಯುಗಕ್ಕೆ ಗುರುವಾಗಲು ಮಾರ್ಗಶಿರ ಮಾಸದ ಶುಕ್ಲ ಪಕ್ಷದ ಶುದ್ಧ ಪಂಚಮಿಯ ದಿನವೇ ಅವಿರ್ಭವಿಸಿದನು, ಈ ದಿನವೇ ಈ ಭೂಮಿಯು ಹಾಗೂ ದತ್ತ ಕ್ಷೇತ್ರಗಳು "ದತ್ತ ಜಯಂತಿ"ಯೆಂದು ಭಕ್ತಿಯಿಂದ ಆಚರಿಸುತ್ತದೆ, ಇವನ ಜನನದಿಂದ ಇವನ ಪಾದುಕೆಯಿಂದ ಈ ಕ್ಷೇತ್ರವು ದತ್ತ ಪೀಠವಾಗಿ ಲೋಕ ಖ್ಯಾತಿಯನ್ನು ಪಡೆಯಿತು. ದತ್ತಾವತಾರದ ನೃಸಿಂಹ ಸರಸ್ವತಿಗಳ ಪುಣ್ಯದ ಫಲದಿಂದ ನಮಗೆಲ್ಲ ದತ್ತನ ಚರಿತ್ರೆಯೂ ಗುರು ಚರಿತ್ರೆ ದೊರೆಯಿತು.

ಗುರು ಚರಿತ್ರೆ : ಗುರು ಚರಿತ್ರೆ ಪ್ರಮುಖವಾಗಿ ದತ್ತನ ಲೀಲೆ, ಮಹಿಮೆ ಹಾಗೆ ಅವನ ಚರಿತ್ರೆಯ ಕುರಿತಾಗಿ ಇದ್ದರೂ ದತ್ತಾವತರಗಳಾದ ಶ್ರೀಪಾದ ವಲ್ಲಭ ಹಾಗೂ ನರಸಿಂಹ ಸರಸ್ವತಿ ಸ್ವಾಮಿಗಳ ಚರಿತ್ರೆಯನ್ನು ಒಳಗೊಂಡಿದೆ.ಈ ಚರಿತ್ರೆಯು ಜ್ಞಾನ ಕಾಂಡ ಕರ್ಮ ಕಾಂಡ ಹಾಗೂ ಭಕ್ತಿ ಕಾಂಡಗಳು ಹೊಂದಿದ್ದು 53 ಕಾಂಡಗಳಾಗಿ ದತ್ತಾವತರಗಳ ಹಿನ್ನಲೆ, ಜನ್ಮ ವೃತ್ತಾಂತ, ಜೀವನ ಪದ್ಧತಿ, ತತ್ವ ಬೋಧ ತಿಳಿಸುತ್ತಾ ಅವುಗಳನ್ನು ಬೋಧಿಸುತ್ತಾ ಜನರನ್ನು ಆಧ್ಯಾತ್ಮಕ ಪ್ರಪಂಚಕ್ಕೆ ಸೆಳೆದು ಅವರ ಪಾಪ ಕರ್ಮಗಳನ್ನು ಕಳೆಯುವ ಶ್ರೇಷ್ಠ ಚರಿತ್ರೆಯಾಗಿದೆ ಇವನ ಮಹಿಮೆಯು ವೇದ ಪುರಾಣಗಳು ದೃಢಪಡಿಸಿವೆ

ಭಾಗವತ ಮತ್ತು ಮಾರ್ಕಾಂಡೇಯ ಪುರಾಣಗಳಲ್ಲಿ ದತ್ತನ ಉಲ್ಲೇಖಗಳು ಇವೆ..

ಪ್ರಭು ನಿಜಗುಣ ದತ್ತಾತ್ರೇಯನು ಮೂರು ಮುಖಗಳು ಬ್ರಹ್ಮ ವಿಷ್ಣು ಮಹೇಶ್ವರರಾಗಿ, ಆರು ಕೈಗಳಲ್ಲಿ ರುದ್ರಾಕ್ಷ ಮಾಲೆ, ಕಮಂಡಲ, ಚಕ್ರ,ಗಧಾ, ಡಮರು ಹಾಗೂ ತ್ರಿಶೂಲ ರೂಢನಾಗಿ, ಕಾವಿ ಬಟ್ಟೆ, ವಿಭೂತಿ ಹಾಗೂ ಜಡೆಯಿಂದ ಅಲಂಕೃತನಾಗಿ, ಬೇಡಿದ ವರ ನೀಡಲು ಕಲ್ಪವೃಕ್ಷ ಕೆಳಗೆ ಕಾಮಧೇನು ಹಸು, ನಾಲ್ಕು ನಾಯಿರೂಪಗಳು ನಾಲ್ಕು ವೇದಗಳಿಗೆ ತಾನೇ ಅಧಿಪತ್ಯವನ್ನು ಎಂದು ತೋರುತ್ತಾ, ಯಾರನ್ನು ಪೂಜಿಸಿದರು ಅದು ತನಗೆ ಸಲ್ಲುತ್ತದೆನ್ನುವ ಪರಮ ದಯಾಳು ಇಂದಿಗೂ ಇವನ ಅರಿಸಿ ಬರುವ ಜನರಿಗೆ ದಿವ್ಯ ಸ್ವರೂಪನಾಗಿ ಅನುಗ್ರಹಿಸುತ್ತಿರುವವನು.

ಗುರುವಿನ ಕರುಣೆ ಅಪಾರ ಅನನ್ಯ ಹಾಗೂ ಅನಂತ.



ಜಯಂತ್ ದೇಸಾಯಿ...

# ಶ್ರೀ ಶ್ರೀಧರ ಜಯಂತಿ

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಎಂಬುದು ಭಗವದ್ಗೀತೆಯ ಒಂದು ಶ್ಲೋಕವಾಗಿದ್ದು, ಯಾವಾಗಾ ಧರ್ಮಕ್ಕೆ ಕ್ಷೀಣತೆ ಉಂಟಾಗಿ ಅಧರ್ಮ ಹೆಚ್ಚಾಗುತ್ತದೆಯೋ, ಆಗ ಧರ್ಮವನ್ನು ರಕ್ಷಿಸಲು ಮತ್ತು ದುಷ್ಟರನ್ನು ಸಂಹರಿಸಲು ತಾನು ಮತ್ತೆ ಮತ್ತೆ ಅವತರಿಸುತ್ತಲೇ ಇರುತ್ತೇನೆ ಎಂದು ಶ್ರೀಕೃಷ್ಣನು ಅರ್ಜನನಿಗೆ ಹೇಳಿದ ಮಾತಿದು. ಈಗ ದೇವರನ್ನು ಪ್ರತ್ಯಕ್ಷವಾಗಿ ನೋಡಲು ಆಸಾಧ್ಯವಾದರೂ, ತಮ್ಮ ಆಧ್ಯಾತ್ಮ ಸಾಧನೆಗಳಿಂದ ಪವಾಡಗಳನ್ನು ಮಾಡಿರುವ ನೂರಾರು ಸಾಧು ಸಂತರನ್ನು ನಾವು ಕಾಣಬಹುದಾಗಿದ್ದು ಅಂತಹವರಲ್ಲಿ ಶ್ರೀ ಶ್ರೀಧರ ಸ್ವಾಮಿಗಳು ಸಹಾ ಒಬ್ಬರು.

ಶ್ರೀಧರ ಸ್ವಾಮಿಗಳು ಕರ್ನಾಟಕದ ಲಾಡ್ ಚಿಂಚೋಳಿಯಲ್ಲಿ ನಾರಾಯಣ ರಾವ್ ಮತ್ತು ಕಮಲಾಬಾಯಿ ದೆಗ್ಲೂರ್ಕರ್ ಅವರ ಮಗನಾಗಿ 1908 ರ ಡಿಸೆಂಬರ್ 7 ರಂದು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಅವತರಿಸಿದರು ಎನ್ನುವುದೇ ಸೂಕ್ತ ಏಕೆಂದರೆ ಆ ದಂಪತಿಗಳು ಆದಿ ಗುರು ದತ್ತಾತ್ರೇಯರನ್ನು ಬಹಳವಾಗಿ ಪ್ರಾರ್ಥಿಸಿ ದತ್ತಾತ್ರೇಯರೇ ತಮ್ಮ ಮಗುವಾಗಿ ಜನಿಸುವಂತೆ ಬೇಡಿಕೊಂಡಿದ್ದ ಪರಿಣಾಮವೋ ಏನೋ ದತ್ತ ಜಯಂತಿಯಂದು ಶ್ರೀ ಗುರುದತ್ತರ ರಥ ಅವರ ಮನೆಯ ಮುಂದೆ ಹಾದು ಹೋಗುತ್ತಿದ್ದಾಗಲೇ, ಶ್ರೀ ದತ್ತಾತ್ರೇಯರ ವರವಾಗಿ ಅವರು ಜನಿಸಿದರು.


ಅವರಿಗೆ 3 ವರ್ಷ ವಯಸ್ಸಾಗಿದ್ದಾಗಲೇ ತಂದೆಯವರು ವಿಧಿವಶರಾದಾಗ, ಸೋದರ ಮಾವ ತ್ರಯಂಬಕ್ ಅವರ ಆಶ್ರಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೈದರಾಬಾದ್‌ನ ಶಾಲೆಯಲ್ಲಿ ಆರಂಭಿಸಿದರೂ ಅವರಿಗೆ ಲೌಕಿಕಕಿಂತಲೂ, ಆಧ್ಯಾತ್ಮದತ್ತಲೇ ವಿಶೇಷ ಒಲವು. ಅದೊಮ್ಮೆ ಶಾಲೆಯಲ್ಲಿ ಪರೀಕ್ಷೆಗೂ ಮುನ್ನಾ ವಿಪರೀತ ಅನಾರೋಗ್ಯಕ್ಕೆ ತುತ್ತಾಗಿ ಶಾಲೆಗೆ ಹೋಗಲಾಗದೇ, ಈ ಬಾರಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವುದು ನಿಶ್ಚಿತ ಎಂದೇ ಎಲ್ಲರೂ ಭಾವಿಸಿದ್ದಾಗ, ಅವರ ತಾಯಿ ಅವರಿಗೆ ನಿರಂತರವಾಗಿ ರಾಮ ಜಪವನ್ನು ಮಾದಿಸುತ್ತಿದ್ದರ ಫಲವಾಗಿ ಅನಾರೋಗ್ಯದ ನಡುವೆಯೂ ಏನನ್ನೂ ಓದದೇ ಕೇವಲ ರಾಮ ಜಪದ ಪರಿಣಾಮವಾಗಿ ಪರೀಕ್ಷೆಯಲ್ಲಿ ಮೊದಲ ರಯಾಂಕ್ ಪಡೆದು ಉತ್ತೀರ್ಣನಾಗುವ ಮೂಲಕ ಬೆಳೆಯುವ ಸಿರಿ ಮೊಳಕೆಯಲ್ಲೇ ಎನ್ನುವಂತೆ ತಮ್ಮ ಪವಾಡವನ್ನು ಬಾಲ್ಯದಲ್ಲೇ ಪ್ರಚುರ ಪಡಿಸಿದ್ದರು.

ಶ್ರೀಧರ ಸ್ವಾಮಿಗಳಿಗೆ ಹತ್ತು ವರ್ಷದವಾಗಿದ್ದಾಗ ಅವರ ಅಣ್ಣ ನಿಧನರಾದಾಗ ಪುತ್ರಶೋಕ ನಿರಂತರಂ ಎನ್ನುವಂತೆ ಅದೇ ಕೊರಗಿನಲ್ಲಿ ಅವರ ತಾಯೂ ಸಹಾ ನಿಧನರಾದಾಗ, ಶ್ರೀಧರ ಸ್ವಾಮಿಯವರು ಗುಲ್ಬರ್ಗದಲ್ಲಿದ್ದ ತಮ್ಮ ಚಿಕ್ಕಮ್ಮನ ಮನೆಗೆ ಹೋಗಿ ತಮ್ಮ ಶಿಕ್ಷಣವನ್ನು ಮುಂದುವರಿಸಿ, ಆನಂತರ ಆಧ್ಯಾತ್ಮಿಕ ಜ್ಞಾನೋದಯದ ಬಯಕೆಯಿಂದ ಪುಣೆಗೆ ಹೋಗಿ ಅಲ್ಲಿನ ಅನಾಥಾಶ್ರಮದಲ್ಲಿ ತಂಗಿ, ಶ್ರೀ ಪಳ್ನಿಟ್ಕರ್ ಅವರ ಸಲಹೆಯಂತೆ ಶ್ರೀ ಸಮರ್ಥ ರಾಮದಾಸರು ತಮ್ಮ ಅಂತಿಮ ದಿನಗಳು ಕಳೆದಿದ್ದ ಸಜ್ಜನಗಡಕ್ಕೆ ಹೋಗಿ ಅಲ್ಲಿ ಸ್ವಾಮಿಗಳ ಕುರಿತಾಗಿ ಸುಮಾರು ಒಂದೂವರೆ ವರ್ಷಗಳ ಕಾಲ ಅಧ್ಯಯನ ಮಾಡುತ್ತಿದ್ದಾಗ, ಸಮರ್ಥ ರಾಮದಾಸರು ಸ್ವತಃ ಶ್ರೀಧರ ಸ್ವಾಮಿಗಳನ್ನು ಆಶೀರ್ವದಿಸಿ, ದಕ್ಷಿಣಕ್ಕೆ ಕರ್ನಾಟಕಕ್ಕೆ ಹೋಗಿ ಸನಾತನ ವೈದಿಕ ಧರ್ಮದ ನಿಜವಾದ ಸಂದೇಶವನ್ನು ಹರಡಲು ನಿರ್ದೇಶಿಸಿದರು.



ಉಮಾಸುತ

ರಾಮದಾಸರಿಂದ ಆಶೀರ್ವಾದ ಪಡೆದು ಸುಮಾರು 13 ವರ್ಷಗಳ ಕಾಲ, ಕಾಲ್ನಡಿಗೆಯಲ್ಲಿ ದಕ್ಷಿಣ ಭಾರತದ ವಿವಿಧ ಧಾರ್ಮಿಕ ಕ್ಷೇತ್ರಗಳಿಗೆ ಪಯಣಿಸಿ ಅಲ್ಲಿನ ದೇವಾಲಯಗಳು ಮತ್ತು ಮಠಗಳಲ್ಲಿ ಧಾರ್ಮಿಕ ಕ್ರಾಂತಿಗಾಗಿ ಸನಾತನ ವೈದಿಕ ಧರ್ಮದ ಕುರಿತು ಪ್ರವಚನಗಳನ್ನು ನೀಡುತ್ತಿದ್ದದ್ದಲ್ಲದೇ, ಸ್ಥಳೀಯ ಹಿಂದೂ ಧಾರ್ಮಿಕ ಮುಖಂಡರು ಮತ್ತು ಸಂತರೊಂದಿಗೆ ಸಂವಾದ ನಡೆಸುತ್ತಿದ್ದಂತಹ ಸಂಧರ್ಭದಲ್ಲಿ ಅವರಿಗೆ ಶೀಗೆಹಳ್ಳಿಯ ಶಿವಾನಂದ ಸ್ವಾಮಿಗಳ ಪರಿಚಯವಾಗಿ ಅವರೊಂದಿಗೆ ಕನ್ಯಾಕುಮಾರಿಯ ಶ್ರೀ ವಿವೇಕಾನಂದ ಸ್ಮಾರಕ ಬಂಡೆಗೆ ಭೇಟಿ ನೀಡಿ ಅಲ್ಲಿ ಧ್ಯಾನ ಮಾಡಿದ್ದರು. 1942 ರಲ್ಲಿ, ಶ್ರೀಧರ ಸ್ವಾಮಿಗಳು ಶೀಗೆಹಳ್ಳಿಯಲ್ಲಿ ಸನ್ಯಾಸ ಸ್ವೀಕರಿಸಿದಾಗ, ಅವರಿಗೆ ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ ಭಗವಾನ್ ಶ್ರೀಧರ ಸ್ವಾಮಿ ಎಂಬ ಬಿರುದನ್ನು ನೀಡಲಾಯಿತು. ಸನ್ಯಾಸತ್ವ ಸ್ವೀಕರಿಸಿದ ನಂತರ 1967 ರವರೆಗೆ, ಅವರು ಭಾರತದಾದ್ಯಂತ ವ್ಯಾಪಕವಾಗಿ ಪ್ರವಾಸ ಮಾಡಿ,ತಮ್ಮ ಭಾಷಣಗಳು, ಬರಹಗಳು ಮತ್ತು ಆಧ್ಯಾತ್ಮಿಕ ಉಪಕ್ರಮಗಳ ಮೂಲಕ ಸಾಮಾನ್ಯ ಜನರಲ್ಲಿ ವೇದಗಳ ಮೂಲ ಸಂದೇಶಗಳನ್ನು ಹರಡಿ, ಅಂತಿಮವಾಗಿ 1967 ರಲ್ಲಿ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಸಾಗರದ ಬಳಿಯ ವರದಾ ನದಿ ತಟದಲ್ಲಿರುವ ವರದಪುರಕ್ಕೆ ಬಂದು ಅಲ್ಲಿ ತಮ್ಮ ಆಶ್ರಮವನ್ನು ಸ್ಥಾಪಿಸಿದರು. ಅಲ್ಲಿ ತಮ್ಮ ಮಂತ್ರ ದಂಡದ ಮೂಲಕ ನಾನಾ ಪವಾಡಗಳಿಂದ ಅಪಾರ ಭಕ್ತರನ್ನು ಆಶೀರ್ವದಿಸಿದರು. ಏಪ್ರಿಲ್ 19, 1973 ರಂದು ಎಂದಿನಂತೆ ತಮ್ಮ ನಿತ್ಯ ಕರ್ಮಗಳನ್ನು ಮುಗಿಸಿ ಧ್ಯಾನ ಮಾಡುತ್ತಿರುವಾಗಲೇ ಎರಡು ಬಾರಿ 'ಓಂ, ಓಂ' ಎಂದು ಹೇಳುತ್ತಲೇ ಸುಮಾರು ಬೆಳಿಗ್ಗೆ 9 ಗಂಟೆಯ ಸಮಯದಲ್ಲಿ ಸ್ವಾಮೀಜಿಗಳು ಅಂತಿಮ ಸಮಾಧಿಯನ್ನು ಪಡೆದರು. ಆಧ್ಯಾತ್ಮದಲ್ಲಿ ಬಹಳ ಸಾಧನೆ ಮಾಡಿ ಪ್ರತಿಭಾನ್ವಿತರಾಗಿದ್ದ ಸ್ವಾಮಿಗಳಿಗೆ ಸಂಸ್ಕೃತ ಕನ್ನಡ,ಮರಾಠಿ, ಹಿಂದಿ ಮತ್ತು ವಿಶೇಷವಾಗಿ ಇಂಗ್ಲಿಷ್ ಭಾಷೆಯಲ್ಲಿಯೂ ಒಳ್ಳೆಯ ಜ್ಞಾನವಿದ್ದು ಈ ಎಲ್ಲಾ ಭಾಷೆಗಳಲ್ಲಿಯೂ ನಿರರ್ಗಳವಾಗಿ ತಮ್ಮ ವ್ಯಾಪಕ ಪ್ರಯಾಣದ ಉದ್ದಕ್ಕೂ ಪ್ರವಚನ ಮತ್ತು ಧಾರ್ಮಿಕ ಬರವಣಿಗೆಗಳ ಮೂಲಕ ವೇದ ಬೋಧನೆಯ ಸಂಕೀರ್ಣ ಸೂಕ್ಷ್ಮ ವ್ಯತ್ಯಾಸಗಳನ್ನು ಸಾಮಾನ್ಯ ಜನರಿಗೆ ಸುಲಭವಾಗಿ ಅರ್ಥವಾಗುವ ರೂಪದಲ್ಲಿ ಸರಳೀಕರಿಸಿ ತಿಳಿಸಿದ್ದಲ್ಲದೇ, ಮರಾಠಿ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದರು.






# ಶ್ರೀಕ್ಷೇತ್ರ ಗಾಣಗಾಪುರ ಭಕ್ತರ ಭವಭೀತಿಯನ್ನು ಪರಿಹರಿಸುವ ಜಾಗೃತ ದತ್ತನ ಸ್ಥಳ

ದತ್ತಾತ್ರೇಯರು ಭಾರತೀಯ ಸಂಪ್ರದಾಯದಲ್ಲಿ ಆದಿಗುರು ಮತ್ತು ಅವಧೂತ ಚಿಂತನೆಯ ಪರಮಮೂರ್ತಿ ಎಂದು ಪೂಜಿಸಲ್ಪಡುವ ಮಹಾಯೋಗಿಗಳು. ದತ್ತಸ್ವರೂಪವು ಕೇವಲ ದೈವಿಕ ರೂಪವಲ್ಲ; ಅದು ಪ್ರಕೃತಿಗತವಾಗಿ ಪರಮಸತ್ಯದಲ್ಲಿ ಲೀನವಾಗಿರುವ ಅವಧೂತ ಸ್ಥಿತಿಯ ಜೀವಂತ ಉದಾಹರಣೆ. ಅವಧೂತ ಎಂದರೆ ದೇಶಕಾಲಸಂಸ್ಕೃತಿಕರ್ಮ ಬಯಕೆ ಎಂಬ ಎಲ್ಲಾ ಬಂಧನಗಳನ್ನು ತೊರೆದು, ಮನುಷ್ಯನು ತನ್ನೊಳಗಿನ ಪರಬ್ರಹ್ಮದ ಜ್ಞಾನದಲ್ಲಿ ನಿರಂತರವಾಗಿ ನೆಲೆಸಿರುವ ಸ್ಥಿತಿ. ಈ ಕಾರಣಕ್ಕಾಗಿ ದತ್ತ ಆಚಾರ್ಯರನ್ನು ಅವಧೂತ ಚಿಂತನೆಯ ಮಹಾಶಕ್ತಿ ಹಾಗೂ ಆದಿಗುರು ಎಂದೂ ಭಕ್ತರು ಗೌರವಿಸುತ್ತಾರೆ.


ದತ್ತನ ತತ್ತ್ವ ಭಾರತದಲ್ಲಿನ ಅನೇಕ ಸಂಪ್ರದಾಯಗಳಿಗೆ ಮೂಲಶಕ್ತಿ. ವಿಶೇಷವಾಗಿ ನಾಥಪಂಥದಲ್ಲಿ ದತ್ತಾತ್ರಯರು ಮೂಲ ಪ್ರೇರಕತ್ವ ವಹಿಸಿರುವುದಾಗಿ ಪರಂಪರೆ ಹೇಳುತ್ತದೆ. ದತ್ತನ ಆದೇಶದಿಂದಲೇ ರೂಪುಗೊಂಡ ನಾಥಸಂಪ್ರದಾಯದಲ್ಲಿ ಹಠಯೋಗ, ಧ್ಯಾನ, ಗುರು ಶಿಷ್ಯ ಭಕ್ತಿ ಮತ್ತು ಅವಧೂತ ತತ್ತ್ವಗಳಿಗೆ ಅತ್ಯಂತ ಪ್ರಾಮುಖ್ಯತೆ ನೀಡಲಾಗಿದೆ. ನಾಥಪಂಥದ ಶ್ರೇಷ್ಠ ಪರಂಪರೆಯಾಗಿ ನವನಾಥರು ಜನಪ್ರಿಯ. ನವ ಎಂದರೆ ಒಂಭತ್ತು, ಮತ್ತು ಈ ಒಂಭತ್ತು ಮಹಾಯೋಗಿಗಳು ನವನಾಥರು ಎಂದು ಪ್ರಸಿದ್ಧರಾದರು. ಅವರು

ಮತ್ಸ್ಯೇಂದ್ರನಾಥ,ಗೋರಕ್ಷನಾಥ,
ಜಲಂಧರನಾಥ, ಸಿದ್ಧನಾಥ,
ಚರಣನಾಥ, ಕನಿಪಾನಾಥ,
ಗಹನಿನಾಥ, ಭರತನಾಥ
ಮತ್ತು ರೇವಣನಾಥ.

ಈ ಎಲ್ಲ ನವನಾಥರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಪಸ್ಸು, ಯೋಗ, ಅವಧೂತ ಜೀವನ ಹಾಗೂ ದತ್ತಚಿಂತನೆಗಳನ್ನೇ ಜೀವಂತಗೊಳಿಸಿದರು. ಅವರ ಶಿಷ್ಯಪರಂಪರೆ ಭಾರತದೆಲ್ಲೆಡೆ ಇಂದು ಕೂಡ ಬದುಕಿದ್ದು, ದತ್ತಸಂಪ್ರದಾಯದ ದೈವಭಕ್ತಿಯನ್ನು ಇನ್ನೂ ಗಟ್ಟಿಗೊಳಿಸಿದೆ.

ದತ್ತನ ತತ್ತ್ವವನ್ನು ಜನಮಾನಸಕ್ಕೆ ಹತ್ತಿರ ಮಾಡಲು ಅತ್ಯಂತ ಮಹತ್ವದ ಪಾತ್ರ ವಹಿಸಿದವರು ದತ್ತನ ಅವತಾರರಾದ ಶ್ರೀಪಾದ ಶ್ರೀವಲ್ಲಭ ಮತ್ತು ಶ್ರೀ ನರಸಿಂಹ ಸರಸ್ವತಿ ಸ್ವಾಮಿಗಳು. ಇವರ ದಿವ್ಯಜೀವನ, ಮೌನೋಪದೇಶ, ಸೇವೆ ಹಾಗೂ ದತ್ತಭಕ್ತರ ಪಾರಿತೋಷಿಕ ಎಲ್ಲವು ಶ್ರೀಗುರುಚರಿತ್ರೆ. ಈ ಗ್ರಂಥವೇ ಗಾಣಗಾಪುರದ ಮಹಿಮೆ, ದತ್ತನ ಅವಧೂತ ಚಿಂತನೆ ಹಾಗೂ ಗುರುಸೇವೆಯ ಪಾವಿತ್ರ್ಯವನ್ನು ವಿಶ್ವಾದ್ಯಂತ ಹರಡಿದೆ.

ಶ್ರೀ ನರಸಿಂಹ ಸರಸ್ವತಿ ಸ್ವಾಮಿಗಳು ಸುಮಾರು 23 ವರ್ಷಗಳ ಕಾಲ ಗಾಣಗಾಪುರದಲ್ಲಿ ವಾಸವಿದ್ದು, ಈ ನೆಲಕ್ಕೆ ಪರಮ ಪವಿತ್ರತೆಯನ್ನು ನೀಡಿದರು. ಅನೇಕ ಭಕ್ತರ ಜೀವನದಲ್ಲಿನ ನೋವುಅಳಲುಸಂಕಟವನ್ನು ಪರಿಹರಿಸಿದ ಘಟನೆಗಳು ಸ್ಥಳೀಯವಾಗಿ ನೂರಾರು ವರ್ಷಗಳಿಂದ ಸ್ಮರಣೆಯಾಗಿ ಉಳಿದಿವೆ.



ಗಾಣಗಾಪುರಕ್ಕೆ ಬಂದ ಯಾತ್ರಿಕರು ಮೊದಲಿಗೆ ಭೇಟಿ ನೀಡುವ ತೀರ್ಥವೆಂದರೆ ಭೀಮಾಅಮರ್ಜಾ ಸಂಗಮ. ಈ ಪವಿತ್ರ ಜಲಸಂಗಮವನ್ನು ಪಾಪನಾಶಿನಿ ಹಾಗೂ ಶಾಂತಿದಾತ್ರೀ ಎಂದು ಭಕ್ತರು ಕೊಂಡಾಡುತ್ತಾರೆ. ಜಲಸ್ಪರ್ಶದ ಕ್ಷಣದಲ್ಲಿ ಮನಸ್ಸಿಗೆ ದೊರೆಯುವ ಶಾಂತಿ ಅನೇಕ ಭಕ್ತರ ಅನುಭವದಲ್ಲಿ ಜೀವಂತ.

ಸಂಗಮದ ನಂತರ ಯಾತ್ರಿಕರು ತೆರಳುವುದು ನಿರ್ಗುಣ ಮಠಕ್ಕೆಗಾಣಗಾಪುರದ ಆಧ್ಯಾತ್ಮಿಕ ಹೃದಯ. ಇಲ್ಲಿ ದತ್ತನ ವಿಗ್ರಹವಿಲ್ಲ; ಪಾದುಕೆಯೇ ದೈವ. ನಿರ್ಗುಣ ದತ್ತ ಎಂಬ ಪರಿಕಲ್ಪನೆ ರೂಪಕ್ಕಿಂತ ತತ್ತ್ವ ಶ್ರೇಷ್ಠ ಎಂಬ ಸಂದೇಶ ನೀಡುತ್ತದೆ. ಪಾದುಕೆಗೆ ಜಲಾಭಿಷೇಕ ಮಾಡದಿರುವುದು ದತ್ತನ ಅವಧೂತ ಚಿಂತನೆಯನ್ನು ಸೂಚಿಸುತ್ತದೆ.ಶುದ್ಧ ತತ್ತ್ವಕ್ಕೆ ಹೊರಗಿನ ಆಚರಣೆಗಿಂತ ಒಳಗಿನ ಶರಣಾಗತಿ ಮುಖ್ಯ. ಅಷ್ಟಗಂಧಕೇಸರಿ ಲೇಪನದ ಪರಂಪರೆ ದತ್ತಸಾನ್ನಿಧ್ಯವನ್ನು ಭಕ್ತರ ಹೃದಯದಲ್ಲಿ ಮೃದುವಾಗಿ ಬೆಳಗಿಸುತ್ತದೆ.

ಮಠದ ಆವರಣದಲ್ಲಿರುವ ಅಶ್ವತ್ಥ ವೃಕ್ಷ, ತುಲಸೀ ವೃಂದಾವನ, ನಾಗನಾಥ, ಹನುಮಂತ ಎಲ್ಲವು ದೈವಿ ಕಲೆ ತಂದಿದೆ. ಬೆಳಿಗ್ಗೆಯಿಂದ ನಿತ್ಯೋಪಾಸನೆ, ಮಧ್ಯಾಹ್ನ ಮಹಾನೈವೇದ್ಯ ಹಾಗೂ ಸಂಜೆ ಪಲ್ಲಕ್ಕಿ ಉತ್ಸವ.ಗುರುವಾರದ ಪಲ್ಲಕ್ಕಿ ಸೇವೆ ವಿಶೇಷವಾಗಿ ಭಕ್ತರ ಅನುಭವದಲ್ಲಿ ದತ್ತನ ಜಾಗೃತ ಸಾನ್ನಿಧ್ಯವೆಂದು ಪರಿಗಣಿಸಲಾಗಿದೆ.

ಗಾಣಗಾಪುರದ ಅನನ್ಯ ಆಚರಣೆಯೇ ಮಧುಕರಿ ವ್ರತ. ಶ್ರೀಗುರುಚರಿತ್ರೆಯ ಪ್ರಕಾರ, ಶ್ರೀಗುರು ಪ್ರತಿದಿನ ಭಿಕ್ಷೆ ಮಾಡುತ್ತಿದ್ದರು. ಅವರ ಪರಂಪರೆಯಲ್ಲಿ ಮಧುಕರಿ ಕೇವಲ ಆಹಾರಸಂಗ್ರಹವಲ್ಲ; ಅದು ವಿನಯಾಭ್ಯಾಸ, ಅಹಂಕಾರದ ಶಮನ ಮತ್ತು ಶರಣಾಗತಿಯ ಅಭಿವ್ಯಕ್ತಿಯೇ ಆಗಿದೆ. ಕೊಡುವವರಲ್ಲಿ ದತ್ತನ ರೂಪ; ಸ್ವೀಕರಿಸುವವರಲ್ಲಿ ಶರಾಣಾಗತಿ ಇದೇ ಮಧುಕರಿಯ ಹೃದಯ.

ದತ್ತಭಕ್ತರ ಪ್ರಧಾನ ಆಚರಣೆಯೇ ಶ್ರೀಗುರು ದತ್ತಾತ್ರೇಯ ಜಯಂತಿ. ಪ್ರತಿ ವರ್ಷ ಮಾರ್ಗಶಿರ ಮಾಸ ಶುಕ್ಲಪಕ್ಷ ಚತುರ್ದಶಿಯ ದಿನ, ಅಂದರೆ ಹೊಸ್ತಿಲ ಹುಣ್ಣಿಮೆಂದು ಕರೆಯುವ ದಿನದಂದು ದತ್ತ ಜಯಂತಿ ಭಕ್ತಿಭಾವದಿಂದ ಆಚರಿಸಲಾಗುತ್ತದೆ. ಪುರಾಣಗಳ ಪ್ರಕಾರ ದತ್ತನ ಜನ್ಮ ಮಧ್ಯಾಹ್ನದಲ್ಲಿ ಸಂಭವಿಸಿದೆ ಎನ್ನುವ ನಂಬಿಕೆ ಇರುವುದರಿಂದ ಈ ದಿನ ತೊಟ್ಟಿಲು, ಜಾತಕಪೂಜೆ, ಪಾರಾಯಣ, ಭಜನೆ, ಪ್ರವಚನ, ಅನ್ನಸಂತರ್ಪಣೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನು ಭಕ್ತರು ಹಮ್ಮಿಕೊಳ್ಳುತ್ತಾರೆ.

ಗಾಣಗಾಪುರಕ್ಕೆ ಬರುವವರ ಉದ್ದೇಶ ಭಿನ್ನವಾಗಿರಬಹುದು,
ಪಾಪಪರಿಹಾರ,ರೋಗನಿವಾರಣ,
ಕುಟುಂಬಸಂಕಟ, ಅಥವಾ ಮನೋಭಾರ ತಗ್ಗಿಸಿಕೊಳ್ಳುವುದು.

ಆದರೆ ಗಾಣಗಾಪುರ ನೀಡುವುದು ತಕ್ಷಣದ ಫಲವಲ್ಲ;
ಭಯವನ್ನು ಕರಗಿಸುವ ಧೈರ್ಯ,
ಬದುಕಿನ ನೋವನ್ನು ತಾಳುವ ಶಕ್ತಿ,
ಮನಸ್ಸಿಗೆ ನೆಮ್ಮದಿ ನೀಡುವ ಮೌನಕೃಪೆ.

ಈ ಕಾರಣಕ್ಕೆ ಗಾಣಗಾಪುರವನ್ನು ಜಾಗೃತ ಕ್ಷೇತ್ರ ಎಂದು ಭಕ್ತರು ವಿಶ್ವಾಸಪೂರ್ವಕವಾಗಿ ಕರೆಯುತ್ತಾರೆ.

ದತ್ತನ ತತ್ತ್ವ ಪುರಾಣಗಳಲ್ಲಿ ಮಾತ್ರವಲ್ಲ,
ಭಕ್ತರ ಹೃದಯದಲ್ಲೂ ಪ್ರತಿದಿನ ಜೀವಂತವಾಗಿದೆ.

ಗಾಣಗಾಪುರದಲ್ಲಿ ದತ್ತನ ದರ್ಶನ ಕಣ್ಣಿಗೆ ಕಾಣದಾಗಿಯೂ, ಮನಸ್ಸಿಗೆ ಸ್ಪಷ್ಟವಾಗಿ ಅನುಭವವಾಗುತ್ತದೆ.
ಅದೇ ಅವಧೂತ ದತ್ತತತ್ತ್ವದ ಚಮತ್ಕಾರ,
ಅದೇ ಗಾಣಗಾಪುರದ ಮಹಿಮೆ.



ಶ್ರೀ ಪ್ರಶಾಂತ ಕುಲಕರ್ಣಿ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,